ಬ್ಯಾಂಕಿಂಗ್ ಪ್ರಪಂಚ

ಸಂಪಾದಕರು

ಎಚ್ಚೆಸ್ಕೆ

ಸಂಪುಟ ೮

ಸಂಚಿಕೆ ೧

ಮಾರ್ಚ್

೧೯೮೭

ಈ ಸಂಚಿಕೆಯಲ್ಲಿ

ಸಮನ್ವಯ ಸಮಿತಿ (ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳು)

ಭಾರತೀಯ ಸ್ಟೇಟ್ ಬ್ಯಾಂಕ್, ನಂ. ೨೨ ಜಯಚಾಮರಾಜೇಂದ್ರ ರಸ್ತೆ, ಬೆಂಗಳೂರು ೫೬೦ ೦೦೨

ಹಣ ಬ್ಯಾಂಕಿಂಗ್ ವಿಚಾರಗಳಿಗೆ ಮೀಸಲಾದ ತ್ರೈಮಾಸಿಕ

ಗ್ರಾಮಸಭೆ ಮತ್ತು ಜಿಲ್ಲಾ ಪರಿಷತ್ತುಗಳನ್ನು ರಚಿಸಿರುವ ಕರ್ನಾಟಕ ರಾಜ್ಯ ಸರಕಾರ ಜನತೆಗೆ ನೀಡುವ ಹೊಸ ಹೆಜ್ಜೆಯ ಮೂಲಕ ಸಂವಿಧಾನದ ಕನಸುಗಳಲ್ಲೊಂದನ್ನು ನನಸಾಗಿಸಿದೆ

1983ರಲ್ಲಿ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದ ಹೊಸ ಸರಕಾರ ಜನತೆಯ ಆಶೋತ್ತರಗಳನ್ನು ಈಡೇರಿಸಲು ಕಂಕಣಬದ್ಧವಾಯಿತು. ಜನಸಮುದಾಯದ ಜೀವನ ಮಟ್ಟ ಸುಧಾರಿಸಿ ಸಮೃದ್ಧಿ ಮತ್ತು ಸಂತಸವನ್ನು ತಂದುಕೊಡುವ ದಿಸೆಯಲ್ಲಿ ಹೊಸ ಹೊಸ ಮಾರ್ಗಗಳನ್ನು ಕಂಡುಕೊಂಡಿತು.

ಜನತೆಗೆ ಅಧಿಕಾರ

ಪ್ರಜಾಪ್ರಭುತ್ವದಲ್ಲಿ "ಪ್ರಜೆಯೇ ಪ್ರಭು" ಎಂಬ ತತ್ವದಲ್ಲಿ ಅಚಲವಾದ ನಂಬಿಕೆ ಇಟ್ಟಿರುವ ಕರ್ನಾಟಕ ಸರಕಾರ, ಪ್ರಜಾಪ್ರಭುತ್ವ ಅರ್ಥಪೂರ್ಣವಾಗಬೇಕಾದರೆ ಆಡಳಿತದಲ್ಲಿ ಜನತೆಯ ಸಕ್ರಿಯ ಪಾತ್ರ ಅತ್ಯಂತ ಅಗತ್ಯ ಎಂಬುದನ್ನು ಮನಗಂಡಿದೆ.

ಇದಕ್ಕೆ ಮುಖ್ಯವಾಗಿ ಬೇಕಾದದ್ದು ಅಧಿಕಾರ ವಿಕೇಂದ್ರೀಕರಣ. ಆದ್ದರಿಂದಲೇ ಪಂಚಾಯತಿ ರಾಜ್ಯ ಸಂಸ್ಥೆಗಳನ್ನು ರಚಿಸಿ, ಗ್ರಾಮೀಣ ಪ್ರದೇಶಗಳ ಸಮಗ್ರ ಅಭಿವೃದ್ಧಿ ಕಾರ್ಯಗಳಲ್ಲಿ ಜನತೆ ನೇರವಾಗಿ ಪಾಲುಗೊಳ್ಳುವ ವ್ಯಾಪಕ ಅವಕಾಶಗಳನ್ನು ಕಲ್ಪಿಸಿದೆ.

ಈ ಗುರಿ ಸಾಧನೆಗಾಗಿ ಎರಡು ಪ್ರಮುಖ ಚುನಾವಣಾ ಸುಧಾರಣೆಗಳನ್ನು ಕಾರ್ಯಗತಗೊಳಿಸಲಾಗಿದೆ. ಮೊದಲನೆಯದು ಯುವಸಮೂಹ ಸಾರ್ವಜನಿಕ ವಿಚಾರಗಳಲ್ಲಿ ತಮ್ಮ ಅಭಿಮತ ವ್ಯಕ್ತಪಡಿಸಲು ಅನುಕೂಲವಾಗುವಂತೆ ಮತದಾನದ ವಯೋಮಿತಿಯನ್ನು 18 ವರ್ಷಗಳಿಗೆ ಇಳಿಸಿರುವುದು, ಎರಡನೆಯದು; ಈ ಸ್ಥಳೀಯ ಸಂಸ್ಥೆಗಳಲ್ಲಿ ಶೇಕಡ 20ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾಗಿಟ್ಟಿರುವುದು. ಇದರಿಂದ ಮಹಿಳೆಯರು ರಾಷ್ಟ್ರಾಭಿವೃದ್ಧಿ ಕಾರ್ಯಗಳಲ್ಲಿ ಹೆಚ್ಚಿನ ಪಾತ್ರ ವಹಿಸಲು ನೆರವಾಗಿದೆ.

ಈಗ ಪಂಚಾಯತಿ ರಾಜ್ಯ ವ್ಯವಸ್ಥೆಯ ಮೊದಲ ವರ್ಷವೇ ಜಿಲ್ಲಾ ಪರಿಷತ್ತುಗಳು ಮತ್ತು ಮಂಡಲ ಪಂಚಾಯತಿಗಳಿಗೆ 900 ಕೋಟಿ ರೂಪಾಯಿಗಳನ್ನು ಸರಕಾರ ನೀಡುತ್ತದೆ.

ಪಂಚಾಯತಿ ರಾಜ್ಯ ವ್ಯವಸ್ಥೆಯ ಅನುಷ್ಠಾನದಿಂದ ರಾಜ್ಯದಲ್ಲಿ 2,469 ಮಂಡಲ ಪಂಚಾಯತಿಗಳು ಮತ್ತು ಜಿಲ್ಲಾ ಪರಿಷತ್ತುಗಳು ಅಸ್ತಿತ್ವಕ್ಕೆ ಬಂದಿವೆ.

ಈ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಪ್ರದೇಶದ ಪ್ರಗತಿಪರ ಕಾರ್ಯಗಳನ್ನು ರೂಪಿಸಿ ಅನುಷ್ಠಾನಗೊಳಿಸುವ ಹಿರಿಯ ಹೊಣೆ ಹೊತ್ತಿವೆ. ಈ ಮಂಡಲ ಪಂಚಾಯತಿಗಳು ಮತ್ತು ಜಿಲ್ಲಾ ಪರಿಷತ್ತುಗಳೇ ನಿಜವಾದ ಅರ್ಥದಲ್ಲಿ ಅಭಿವೃದ್ಧಿ ಕಾರ್ಯ ನಿರ್ವಹಿಸುವ ಮೂಲ ಘಟಕಗಳು.

ಪ್ರಥಮ ಬಾರಿಗೆ ಸಮನಾದ ಪ್ರಾಥಮಿಕ ಹಂತದಿಂದ ಸುಮಾರು 56,000 ಪ್ರಜಾಪ್ರತಿನಿಧಿಗಳು ಆಯ್ಕೆಯಾಗಿದ್ದಾರೆ. ಇದರಲ್ಲಿ 29,051 ಜನಸಾಮಾನ್ಯ ವರ್ಗದ ಪ್ರತಿನಿಧಿಗಳು, 11,887 ಜನ ಪರಿಶಿಷ್ಟ ಜನಾಂಗದ ಪ್ರತಿನಿಧಿಗಳು ಹಾಗೂ 14,356 ಮಹಿಳಾ ಪ್ರತಿನಿಧಿಗಳಿದ್ದಾರೆ. ಮಹಿಳೆಯರಲ್ಲಿ 2,469 ಜನ ಪರಿಶಿಷ್ಟ ಜನಾಂಗದ ಪ್ರತಿನಿಧಿಗಳು. ಇವರ ಜೊತೆಗೆ ಜಿಲ್ಲಾ ಪರಿಷತ್ತುಗಳಿಗೆ 887 ಸದಸ್ಯರು ಆಯ್ಕೆಯಾಗಿದ್ದಾರೆ.

1987ರ ಜನವರಿ 2 ಮತ್ತು 20ರಂದು ನಡೆದ ಚರಿತ್ರಾರ್ಹ ಚುನಾವಣೆಗಳಲ್ಲಿ 1,82,18,177 ಜನ ಮತದಾರರು ಮತ ಚಲಾಯಿಸಿ ತಮ್ಮ ಪಕ್ವ ಅಭಿಮತ ವ್ಯಕ್ತಪಡಿಸಿದ್ದಾರೆ.

ಪ್ರಜಾಪ್ರಭುತ್ವದ ಮೂಲ ಈ ಹೆಮ್ಮೆಯ ನಾಡಿನ ಮಣ್ಣಿನ ಮಕ್ಕಳಲ್ಲಿ ಅಡಗಿದೆ ಎಂಬುದನ್ನು ಶ್ರುತಪಡಿಸುವ ಕರ್ನಾಟಕದ ಜನಸಮುದಾಯ ನಿಜಕ್ಕೂ ಅಭಿನಂದನಾರ್ಹರು.

ಕರ್ನಾಟಕ ವಾರ್ತೆ

ಬ್ಯಾಂಕಿಂಗ್ ಪ್ರಪಂಚ

ಸಂಪುಟ ೮ ಮಾರ್ಚ್ ೧೯೮೭ ಸಂಚಿಕೆ ೧

ಲೇಖಕರಿಗೆ ಸೂಚನೆಗಳು

'ಬ್ಯಾಂಕಿಂಗ್ ಪ್ರಪಂಚ'ದಲ್ಲಿ ಪ್ರಕಟನೆಗಾಗಿ ಹಣ, ಬ್ಯಾಂಕಿಂಗ್ ಮತ್ತು ತತ್ಸಂಬಂಧದ ವಿಷಯಗಳನ್ನು ಕುರಿತ ಲೇಖನಗಳಿಗೆ ಸ್ವಾಗತವಿದೆ.

ಲೇಖನಗಳು ಸ್ವತಂತ್ರವಾಗಿರಬಹುದು, ಇಲ್ಲವೇ ಅನುವಾದಗಳಾಗಿರಬಹುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖನದ ಶೀರ್ಷಿಕೆ, ಮೂಲ ಲೇಖಕರ ಹೆಸರು ಮತ್ತು ವಿಳಾಸ, ಮೂಲ ಲೇಖನ ಪ್ರಕಟವಾಗಿದ್ದರೆ ಆ ಬಗ್ಗೆ ವಿವರಗಳು ಇವನ್ನೂ, ಅನುವಾದ ಮಾಡಿ ಪ್ರಕಟಿಸಲು ಮೂಲ ಲೇಖಕರ ಅನುಮತಿಯನ್ನೂ ಅನುವಾದದೊಂದಿಗೆ ಕಳುಹಿಸಿಕೊಡಬೇಕು.

ಲೇಖಕರು ಲೇಖನವನ್ನು ಕಾಗದದ ಒಂದೇ ಮಗ್ಗುಲಿನಲ್ಲಿ ಸ್ಫುಟವಾಗಿ ಬರೆದಿರಬೇಕು. ಪುಟದ ಎಡಬದಿಯಲ್ಲಿ ಸಾಕಷ್ಟು ಅಂಚು ಬಿಟ್ಟಿರಬೇಕು. ಒಂದು ಸಾಲಿಗೂ ಇನ್ನೊಂದು ಸಾಲಿಗೂ ನಡುವೆ ಧಾರಾಳವಾಗಿ ಸ್ಥಳ ಬಿಟ್ಟಿರಬೇಕು.

ಲೇಖಕರು ತಮ್ಮ ಹೆಸರು ವಿಳಾಸಗಳನ್ನೂ ತಮ್ಮ ಸಂಕ್ಷಿಪ್ತ ಪರಿಚಯವನ್ನೂ ಲೇಖನದೊಂದಿಗೆ ಕಳುಹಿಸಿಕೊಡಬೇಕು. ಈ ವಿವರಗಳಿಲ್ಲದ ಲೇಖನಗಳನ್ನು ಪ್ರಕಟಿಸಲಾಗುವುದಿಲ್ಲ.

ಲೇಖನವನ್ನು ಪ್ರಕಟಿಸುವ ಅಥವಾ ಬಿಡುವ, ಯುಕ್ತವೆನಿಸಿದ ಮಾರ್ಪಾಟು ಮಾಡಿ ಪ್ರಕಟಿಸುವ ಅಧಿಕಾರ ಸಂಪಾದಕರಿಗುಂಟು.

ಪ್ರಕಟವಾಗದ ಲೇಖನಗಳನ್ನು ಹಿಂದಿರುಗಿಸಲು ವ್ಯವಸ್ಥೆಯಿಲ್ಲ. ಲೇಖಕರು ಪ್ರಕಟನೆಗಾಗಿ ಕಳುಹಿಸುವ ಲೇಖನದ ಪ್ರತಿಯೊಂದನ್ನು ತಮ್ಮ ಬಳಿ ಇಟ್ಟುಕೊಳ್ಳುವುದು ಒಳ್ಳೆಯದು.

ಬ್ಯಾಂಕಿಂಗ್ ಪ್ರಪಂಚದಲ್ಲಿ ವಿಮರ್ಶೆಗಾಗಿ ಪುಸ್ತಕ ಕಳುಹಿಸುವವರು ಅದರ ಎರಡು ಪ್ರತಿಗಳನ್ನು ಕಳುಹಿಸಿಕೊಡಬೇಕು.

ಬ್ಯಾಂಕಿಂಗ್ ಪ್ರಪಂಚದಲ್ಲಿ ಪ್ರಕಟವಾದ ಲೇಖನಗಳ ಬಗ್ಗೆ ಅಭಿಪ್ರಾಯಗಳನ್ನು ಪ್ರಕಟನೆಗಾಗಿ ಬರೆದು ಕಳುಹಿಸಬಹುದು. ಇವು ಸಣ್ಣವಾಗಿರಬೇಕು. ಅಭಿಪ್ರಾಯಗಳೊಂದಿಗೆ ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಬರೆದಿರಬೇಕು.

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಅಭಿಪ್ರಾಯಗಳು ಆಯಾ ಲೇಖಕರವು. ಇವನ್ನು ಸಂಪಾದಕರಾಗಲಿ ಪ್ರಕಾಶಕರಾಗಲಿ ಒಪ್ಪಿರುತ್ತಾರೆ ಎಂದೇನೂ ಅಲ್ಲ.

'ಬ್ಯಾಂಕಿಂಗ್ ಪ್ರಪಂಚ'ದ ಆಜೀವ ಚಂದಾದಾರರು

(ಹಿಂದಿನ ಸಂಚಿಕೆಯಿಂದ ಮುಂದುವರಿದ ಪಟ್ಟಿ)

516 ಬಿ. ಎನ್. ರಾಮಯ್ಯ
517 ರಂಗರಾಜನ್
518 ಕೆ. ಬಿ. ಮಹದೇವಪ್ಪ
519 ಶಂಕರ್
520 ಎಸ್. ಜೆ. ಕೌಜಲಗಿ
521 ಕೆ. ನಾರಾಯಣಭಟ್
522 ಕೆ. ಶೇಷಶಾಯಿ
523 ಕೆ. ಶಿವಸ್ವಾಮಿ
524 ಕುಮಾರ ಎಸ್. ಬೆಳ್ಳಂಕಿಮಠ
525 ಕುಮಾರಿ ಎಸ್. ಬಿ. ಬಾಡ
526 ವಿ. ಎನ್. ಪುರಾಣಿಕ್
527 ಜಿ. ಎಸ್. ಶಿಂಧೆ
528 ಹೆಚ್. ತಮ್ಮಯ್ಯ
529 ಅಡ್ಡೂರು ಕೃಷ್ಣರಾವ್
530 ಎಸ್. ಎನ್. ಕೆಳಗಡೆ
531 ಎ. ಎನ್. ದೇಶಪಾಂಡೆ
532 ಎಸ್. ಎನ್. ಕುರಿ
533 ಎಸ್. ಎನ್. ಜೋಷಿ
534 ಎಸ್. ಎಫ್. ಕಾಂಬಳೆ
535 ಎಸ್. ಜಿ. ದೊಡ್ಡವಾಡ
536 ಆದರ್ಶ ಶಿಕ್ಷಣ ಸಮಿತಿಯ ವಾಣಿಜ್ಯ ಮಹಾ ವಿದ್ಯಾಲಯ ಗದಗ 582 101
537 ಸಹವರ್ತಿ ಬ್ಯಾಂಕುಗಳ ಅಧಿಕಾರಿಗಳ ಸಂಘ ಬೆಂಗಳೂರು

ಮೈಸೂರು ಬ್ಯಾಂಕಿನ ಮುಂದಿನ ಶಾಖೆಗಳು :

538 ಬೂವಿನಕೆರೆ
539 ಪಾಲಹಳ್ಳಿ
540 ಅಘಲಯ
541 ಕಿಕ್ಕೇರಿ
542 ಕೃಷ್ಣರಾಜಪೇಟೆ
543 ಸಿಬ್ಬಂದಿ ತರಬೇತಿ ಕೇಂದ್ರ, ಮೈಸೂರು

ಬ್ಯಾಂಕಿಂಗ್ ಪ್ರತಿಷ್ಠಾನ

(ಪ್ರಾಯೋಜಕರು, ಕನ್ನಡ ಸಂಘ, ಭಾರತೀಯ ಸ್ಟೇಟ್ ಬ್ಯಾಂಕ್, ಬೆಂಗಳೂರು ನಗರ ಶಾಖೆ)

- ಕನ್ನಡದಲ್ಲಿ ಬ್ಯಾಂಕಿಂಗ್ ಬಗ್ಗೆ ಅಧ್ಯಯನ, ಸಂಶೋಧನೆ ಮತ್ತು ಪ್ರಸಾರಕ್ಕೆ ಮೀಸಲಾದ ಒಂದು ನ್ಯಾಸ
- ಇದರ ಅಂಗವಾಗಿ, ಕನ್ನಡದಲ್ಲಿ ಏಕರೂಪವನ್ನು ತರಲು ತಜ್ಞರ ಸಮಿತಿ "ಬ್ಯಾಂಕಿಂಗ್ ಪದನಿಧಿ"ಯ ರಚನೆ
- ಬ್ಯಾಂಕಿಂಗ್ ಮಾಹಿತಿಯನ್ನು ಅನುವಾದಿಸುವ ಕಾರ್ಯ

ಇದರ ಮೊದಲ ಪ್ರಕಟಣೆ

'ಕರ್ನಾಟಕದಲ್ಲಿ ಬ್ಯಾಂಕುಗಳ ಹುಟ್ಟು ಮತ್ತು ಬೆಳವಣಿಗೆ'

56 ಪುಟಗಳು $\frac{1}{8}$ ಕ್ರೌನ್ ಆಕೃತಿ ಹೊಳಪಿನ ರಕ್ಷಾ ಕವಚ ಬೆಲೆ ರೂ. 5-00

ಲೇಖಕರು

ಡಾ|| ನವೀನಚಂದ್ರ ಕೃ. ತಿಂಗಳಾಯ

ಉಪ-ಪ್ರಧಾನ ವ್ಯವಸ್ಥಾಪಕರು

ಸಿಂಡಿಕೇಟ್ ಬ್ಯಾಂಕ್

ಮಣಿಪಾಲ

(ಪ್ರತಿಗಳಿಗೆ 'ಬ್ಯಾಂಕಿಂಗ್ ಪ್ರತಿಷ್ಠಾನ'ದ ಹೆಸರಿಗೆ ಬರೆದ ಡ್ರಾಫ್ಟು/ಚೆಕ್ಕುಗಳ ಮೂಲಕ ಹಣ ಕಳುಹಿಸಿ)

ಬ್ಯಾಂಕಿಂಗ್ ಪ್ರತಿಷ್ಠಾನ

ಕನ್ನಡ ಸಂಘ

ಆಶ್ರಯ: ಭಾರತೀಯ ಸ್ಟೇಟ್ ಬ್ಯಾಂಕ್

ಬೆಂಗಳೂರು ನಗರ ಶಾಖೆ

22, ಜಯಚಾಮರಾಜ ರಸ್ತೆ, ಬೆಂಗಳೂರು 560 002

ಸಂಪಾದಕೀಯ

'ಕನ್ನಡವ ಕಾಪಿಡಲು ಸಂಕಲ್ಪ ಬೋಧಿಸಯ್ಯ'

'ಬ್ಯಾಂಕಿಂಗ್ ಪ್ರಪಂಚ'ದ ಎಂಟನೆಯ ಸಂಪುಟದ ಮೊದಲ ಸಂಚಿಕೆಯನ್ನು ನಿಮ್ಮ ಕೈಯಲ್ಲಿಡುತ್ತಿದ್ದೇವೆ. ಏಳು ವರ್ಷಗಳ ಹಿಂದೆ ಅರ್ಧ ವಾರ್ಷಿಕವಾಗಿ ಆರಂಭವಾದ ಈ ಪತ್ರಿಕೆ ಕಳೆದ ವರ್ಷದಿಂದ ತ್ರೈಮಾಸಿಕವಾಗಿ ಹೊರಬರುತ್ತಿದೆ. ಇಂಥ ಪತ್ರಿಕೆಯೊಂದನ್ನು ಹೊರತರುವುದರ ಕಷ್ಟಗಳೇನೆಂಬುದರ ಅನುಭವದೊಂದಿಗೆ ನಮಗೆ ಹೆಮ್ಮೆಯೂ ಆಗುತ್ತಿದೆ. ಬೇರಾವ ಭಾರತೀಯ ಭಾಷೆಯಲ್ಲೂ ಹಣ-ಬ್ಯಾಂಕಿಂಗ್ ವಿಚಾರಗಳಿಗೆಂದೇ ಮೀಸಲಾದ ಪತ್ರಿಕೆ ಇಲ್ಲವೆಂಬುದೇ ನಮಗೆ ಹೆಚ್ಚಿನ ಹೆಮ್ಮೆಯ ಸಂಗತಿ. ಈ ಬಗೆಯ ಪತ್ರಿಕೆ ಏಳು ವರ್ಷಗಳನ್ನು ದಾಟಿ ಮುನ್ನಡೆದಿದೆಯೆಂಬುದೂ ಹೆಮ್ಮೆಗೆ ಕಾರಣ. ಇಂಥ ಪ್ರಯತ್ನಗಳಿಗೆ ಕನ್ನಡಿಗರಿಂದ ಎಂಥ ಸ್ವಾಗತ ಪುರಸ್ಕಾರಗಳು ದೊರಕುವುವೆಂಬುದನ್ನು ಹೇಳಬೇಕಾಗಿಯೇ ಇಲ್ಲ. ಈಚೆಗೆ ತಮ್ಮ ತುಂಬು ವಯಸ್ಸಿನಲ್ಲಿ ತೀರಿಕೊಂಡ ಡಾ. ಎಸ್. ವಿ. ರಂಗಣ್ಣ ಅವರು ಕನ್ನಡಿಗರ ಸ್ವಭಾವವನ್ನು ವಚನವೊಂದರಲ್ಲಿ ಬಹಳ ಚೆನ್ನಾಗಿ ಹೀಗೆ ಬಣ್ಣಿಸಿದ್ದಾರೆ: 'ಕರ್ನಾಟ ಜನಪದವಿಂದು ನರಿಬಳಗ, ಕುರಿಮಂದೆ, ಹೆಬ್ಬಾವುಸಂಸಾರ, ಎಮ್ಮೆದೊಡ್ಡಿ, ತಟ್ಟುಕೊಟ್ಟಿಗೆ, ಇರುವೆಗೂಡು, ನೋಡಯ್ಯ; ಎಲ್ಲರನು ಎಲ್ಲವನು ಎಚ್ಚರಿಸಿ ಇದಿರು ನಿಲ್ಲಿಸಿಕೊಂಡು ನಿಯಮುಗಳ ವಿಧಿಸಯ್ಯ, ಕನ್ನಡವ ಕಾಪಿಡಲು ಸಂಕಲ್ಪ ಬೋಧಿಸಯ್ಯ, ಸಾಹಸವ ಕುದುರಿಸಯ್ಯ.' ಒಂದು ಕಾಲದಲ್ಲಿ ಸಾಹಸಕ್ಕೆ ಹೆಸರಾಗಿದ್ದ ಕನ್ನಡಿಗರು ಇಂದು ಅಭಿಮಾನ ಶೂನ್ಯರಾಗಿದ್ದಾರೆ ಎಂದು ಸಾಧಿಸಲು ಪುರಾವೆಗಳನ್ನು ಹುಡುಕಿಕೊಂಡು ಹೋಗಬೇಕಾಗಿಲ್ಲ. 'ಬ್ಯಾಂಕಿಂಗ್ ಪ್ರಪಂಚ'ದಂಥ ಪತ್ರಿಕೆಯನ್ನು ಹೊರಡಿಸಲು ಬೆಟ್ಟಕ್ಕೆ ಕಲ್ಲು ಹೊರುವಷ್ಟು ಪ್ರಯಾಸಪಡಬೇಕಾಗುತ್ತಿರಲಿಲ್ಲ. ಇದರ ಉಪಯುಕ್ತತೆಯನ್ನು ಅರಿಯಲಾರದಷ್ಟು ದಡ್ಡರೇನೂ ಕನ್ನಡಿಗರಲ್ಲ. ಆದರೆ ಅರಿಯುವ ಮನಸ್ಸು ಇಲ್ಲ. ಅಧಿಕಾರಷಾಹಿಯಲ್ಲಿ ಮೇಲಿನಿಂದ ಆಜ್ಞಾರೂಪದಲ್ಲಿ ಬಂದದ್ದಕ್ಕೆ ಮಾತ್ರವೇ ಪುರಸ್ಕಾರ. ಮೇಲಿನವರು ಈ ಪತ್ರಿಕೆಯ ಬಗ್ಗೆ ಅಂಥ ಆಜ್ಞೆ ಹೊರಡಿಸುವುದರಿಂದ ಅವರಿಗೆ ಪ್ರಯೋಜನವಾದರೂ ಏನು ? ಇಂಥ ಪರಿಸ್ಥಿತಿ ನಾಡಿಗೆ ಒಳ್ಳೆಯದಲ್ಲ.

ಧನ್ಯವಾದ

ಆದರೆ 'ಬ್ಯಾಂಕಿಂಗ್ ಪತ್ರಿಕೆ' ಈ ಪರಿಸ್ಥಿತಿಯಿಂದಾಗಿ ನಿಲ್ಲುವುದಿಲ್ಲ. ಕನ್ನಡದಲ್ಲಿ ಆಸಕ್ತಿ ಇರುವವರ ಸಂಖ್ಯೆ ಎಷ್ಟೇ ಅಲ್ಪವಾದರೂ ಅವರ ಸಂಕಲ್ಪ ಶಕ್ತಿ ಅಲ್ಪವಲ್ಲ. 'ನೆಚ್ಚಿದೆನೆಂದರೆ, ಮೆಚ್ಚಿದೆನೆಂದರೆ, ಸಲೆ ಮಾರುವೋದೆನೆಂದರೆ ತನುವನಲ್ಲಾಡಿಸಿ ನೋಡುವೆ ನೀನು, ಮನವನಲ್ಲಾಡಿಸಿ ನೋಡುವೆ ನೀನು, ಧನವನಲ್ಲಾಡಿಸಿ ನೋಡುವೆ ನೀನು, ಇವೆಲ್ಲಕ್ಕಂಜದಿದ್ದಡೆ ಭಕ್ತಿ ಕಂಪಿತ ನಮ್ಮ ಕೂಡಲಸಂಗಮದೇವ', ಎಂಬ ಬಸವಣ್ಣನವರ ವಚನ ಸುಳ್ಳಲ್ಲ. ತನುಮನಧನಗಳನ್ನೂ ಅರ್ಪಿಸಲು ಸಿದ್ಧವಾದ ಇಂಥ ಉತ್ಸಾಹಿಗಳ ತಂಡ ಇದರ ಬೆಂಗಡೆಯಲ್ಲಿ ನಿಂತಿದೆಯಾದ್ದರಿಂದ ಇದು ಮುಂದುವರಿದೇ ತೀರುತ್ತದೆ. 'ಬ್ಯಾಂಕಿಂಗ್ ಪ್ರಪಂಚ'ದಿಂದಾಗಿ ಇಂದು ಈ ವಿಚಾರವನ್ನು ಕುರಿತು ಕನ್ನಡದಲ್ಲಿ ಸಮರ್ಥವಾಗಿ ಬರೆಯಬಲ್ಲವರ ಪಡೆಯೊಂದು ನಿರ್ಮಿತವಾಗಿದೆ. 'ಬ್ಯಾಂಕಿಂಗ್ ಪ್ರಪಂಚ' ಆರ್ಥಿಕವಾಗಿ ಕಂಗೆಡದಂತೆ ಅನೇಕ ಉದ್ಯಮ ಸಂಸ್ಥೆಗಳು ಜಾಹೀರಾತುಗಳನ್ನು ನೀಡಿ ಪ್ರೋತ್ಸಾಹಿಸುತ್ತಿವೆ. ಇದರ ಚಂದಾದಾರರ ಸಂಖ್ಯೆಯೂ ನಿಧಾನವಾಗಿ ಬೆಳೆಯುತ್ತಿದೆ. ಈ ಪತ್ರಿಕೆಯ ಮುದ್ರಕರಂತೂ ಇದು ತಮ್ಮದೇ ಪ್ರಕಾಶನವೆಂಬ ರೀತಿಯಲ್ಲಿ ಇದರ ವಿನ್ಯಾಸವನ್ನು ಉತ್ತಮಪಡಿಸುವುದರಲ್ಲಿ ವಿಶೇಷವಾದ ಆಸ್ಥೆ ವಹಿಸುತ್ತಿದ್ದಾರೆ. ಇವರೆಲ್ಲರ ಬೆಂಬಲದಿಂದಾಗಿ 'ಬ್ಯಾಂಕಿಂಗ್ ಪ್ರಪಂಚ' ನಿಧಾನವಾದರೂ ದೃಢವಾಗಿ ಬೆಳೆಯುತ್ತಿದೆ. ಇವರಿಗೆಲ್ಲ 'ಬ್ಯಾಂಕಿಂಗ್ ಪ್ರಪಂಚ' ಧನ್ಯವಾದ ಅರ್ಪಿಸುತ್ತಿದೆ.

ಆತ್ಮವಂಚನೆ – ಪರವಂಚನೆ

ಕರ್ನಾಟಕ ರಾಜ್ಯ ಅಖಿಲ ಭಾರತ ಖ್ಯಾತಿಯ ಅನೇಕ ಬ್ಯಾಂಕಿಂಗ್ ಸಂಸ್ಥೆಗಳ ತವರು. ಬೇರಾವ ರಾಜ್ಯದಲ್ಲೂ ಕರ್ನಾಟಕದಲ್ಲಿ ಹುಟ್ಟಿದಷ್ಟು ಸಂಖ್ಯೆಯಲ್ಲಿ ಬ್ಯಾಂಕುಗಳು ಹುಟ್ಟಲಿಲ್ಲ. ಆದರೆ ಕನ್ನಡದ ಮಾತು ಬಂದಾಗ ಕರ್ನಾಟಕದಲ್ಲಿ ಹುಟ್ಟಿದ ಬ್ಯಾಂಕುಗಳೇ ಉಳಿದ ಬ್ಯಾಂಕುಗಳಿಗಿಂತ ತಾತ್ಸಾರದ ಧೋರಣೆ ತಳೆಯುತ್ತಿವೆ. ಹಿಂದಿ ನಮ್ಮ ಒಕ್ಕೂಟ ಸರ್ಕಾರದ ಭಾಷೆ ನಿಜ. ವಿವಿಧ ರಾಜ್ಯಗಳ ನಡುವೆ ಸಂಪರ್ಕ ಸಾಧನೆಯ ದೃಷ್ಟಿಯಿಂದ ಕ್ರಮೇಣ ಹಿಂದಿಯ ಬಳಕೆಯ ತರ್ಕಬದ್ಧತೆಯನ್ನು ಎತ್ತಿಹಿಡಿಯುವವರನ್ನು ಅರ್ಥಮಾಡಿಕೊಳ್ಳಬಹುದು. ಆದರೆ ಕನ್ನಡಕ್ಕೆ ನ್ಯಾಯವಾಗಿ ದೊರಕಬೇಕಾದ ಸ್ಥಾನವನ್ನು ಚ್ಯುತಿಗೊಳಿಸಿ ಅಲ್ಲಿ ಹಿಂದಿಯನ್ನು ಸ್ಥಾಪಿಸುವುದು ಸರಿಯೆನಿಸುವುದಿಲ್ಲ. ಪ್ರತಿಯೊಂದು ರಾಜ್ಯದಲ್ಲೂ ಬ್ಯಾಂಕಿಂಗ್ ಕಛೇರಿಗಳು ಅಲ್ಲಿಯ ಜನರ ಭಾಷೆಯಲ್ಲೇ ವ್ಯವಹರಿಸಬೇಕೆಂಬ ತತ್ವವನ್ನು ಮಾನ್ಯ ಮಾಡದಿದ್ದರೆ ಅದರಿಂದ ಬ್ಯಾಂಕುಗಳು ತಮ್ಮ ಘನೋದ್ದೇಶವನ್ನು ಸಾಧಿಸಲಾಗದೆ ವಿಫಲಗೊಳ್ಳುವುದು ಸ್ವತಸ್ಸಿದ್ಧ. ಹಿಂದಿಯನ್ನು ಮುಂದೆ ತರುವ ಉತ್ಸಾಹದಲ್ಲಿ ನಮ್ಮ ರಾಜ್ಯದ ಹಲವು ಬ್ಯಾಂಕುಗಳು ಕನ್ನಡವನ್ನು ತುಳಿಯಹತ್ತಿವೆ. ಕನ್ನಡದಲ್ಲಿ ವ್ಯವಹಾರ ಮಾಡುವ ಮಾತೆತ್ತುವುದೂ ರಾಷ್ಟ್ರದ್ರೋಹ ಎಂಬ ರೀತಿಯಲ್ಲಿ ಕೆಲವರು ವರ್ತಿಸುತ್ತಿದ್ದಾರೆ. ಕನ್ನಡವನ್ನು ಪುರಸ್ಕರಿಸಿದರೆ ತಮ್ಮ ಪದೋನ್ನತಿಗೆ ಧಕ್ಕೆ ಬಂದೀತೆಂಬ ಭಯ ಅನೇಕರಿಗೆ. ಇಂಥವರು ನಿಜಕ್ಕೂ ಆತ್ಮವಂಚನೆ ಮಾಡಿಕೊಳ್ಳುತ್ತಿದ್ದಾರೆ, ಜನರನ್ನು ವಂಚಿಸುತ್ತಿದ್ದಾರೆ ಎಂದು ಎಚ್ಚರಿಸದೆ ವಿಧಿಯಿಲ್ಲ.

ಭಾಷಾಪ್ರೇಮದ ವೈಖರಿ

ಕೆಲವು ದಿನಗಳ ಹಿಂದೆ ಕರ್ನಾಟಕದಲ್ಲಿ ಸ್ಥಾಪಿತವಾದ ಬ್ಯಾಂಕೊಂದರ ಮುಖ್ಯರ ನಿವೃತ್ತಿಯ ಸಂದರ್ಭದಲ್ಲಿ ಅವರಿಗೆ ಬೀಳ್ಕೊಡುಗೆಯ ಸಮಾರಂಭವೊಂದು ಏರ್ಪಾಡಾಗಿತ್ತು. ಅಚ್ಚಕನ್ನಡದ ಊರೊಂದರಲ್ಲಿ, ಕನ್ನಡಿಗರೇ ಇದ್ದ ಆ ಸಭೆಯಲ್ಲಿ ಮಾತಾಡಿದವರೆಲ್ಲ, ಒಬ್ಬರನ್ನು ಬಿಟ್ಟು, ಕನ್ನಡಿಗರೇ. ಅವರೆಲ್ಲ ಇಂಗ್ಲಿಷಿನಲ್ಲೇ—ಅದೂ ತಪ್ಪು ತಪ್ಪಾಗಿ—ಮಾತಾಡಿದರು. ಕನ್ನಡಿಗರಲ್ಲದ ಒಬ್ಬರು ಬಂಗಾಲಿ. ಅವರೂ ಬ್ಯಾಂಕ್ ಅಧಿಕಾರಿಯೇ. ಅವರು ಇಂಗ್ಲಿಷಿನಲ್ಲೇ ಮಾತಾಡುವುದು ಅನಿವಾರ್ಯವಾಗಿತ್ತು. ಆದರೆ ಉಳಿದ

ಎಲ್ಲರೂ ಕನ್ನಡದಲ್ಲಿ ಮಾತಾಡದಿದ್ದುದು ಅವರಿಗೆ ಆಶ್ಚರ್ಯವಾಗಿತ್ತು. ತಮ್ಮ ರಾಜ್ಯದಲ್ಲಿ ಹೀಗಾಗುತ್ತಿರಲಿಲ್ಲ ಎಂದು ಅವರು ಹೇಳಿದರು. ಅವರ ಅನಂತರ ಮಾತಾಡಿದವರು ತಾವು ಕನ್ನಡಿಗರಾದರೂ ಕನ್ನಡದಲ್ಲಿ ಮಾತಾಡಿ ಅಭ್ಯಾಸ ಇಲ್ಲವೆಂದು ಹೇಳಿ ಅವರೂ ಇಂಗ್ಲಿಷಿನಲ್ಲೇ ಭಾಷಣ ಮಾಡಲು ತೊಡಗಿದರು. ಇದು ಕರ್ನಾಟಕದಲ್ಲಿರುವ ಬ್ಯಾಂಕುಗಳ ಅನೇಕ ಕನ್ನಡಿಗ ಅಧಿಕಾರಿಗಳ ಭಾಷಾ ಪ್ರೇಮದ ವೈಖರಿ ! ಇದು ನಮ್ಮ ಪತ್ರಿಕೆಯೊಂದರಲ್ಲಿ ವರದಿಯಾಗಿತ್ತು. ಇಂಥ ಭ್ರಮಾಲೋಕದಲ್ಲಿ ವಿಹರಿಸುತ್ತಿರುವ ಬ್ಯಾಂಕ್ ಅಧಿಕಾರಿಗಳು ಎಚ್ಚೆತ್ತು ಕೊಳ್ಳದಿದ್ದರೆ ಅವರಿಂದ ನಾಡಿಗೂ ತಮಗೂ ಪ್ರಮಾದವೇ ತಟ್ಟುತ್ತದೆ. ಹೀಗಾಗಬಾರದು.

ಕರ್ತವ್ಯವೇನು ?

ಹಾಗಾದರೆ ಕನ್ನಡಿಗರ ಕರ್ತವ್ಯವೇನು ? ಎಸ್. ವಿ. ರಂಗಣ್ಣನವರೇ ಹೀಗೆಂದು ಹೇಳಿದ್ದಾರೆ: 'ಈಗ ಯಾವುದು, ಏನು, ಎಷ್ಟು ಕನ್ನಡಿಗರ ಕರ್ತವ್ಯ, ರಂಗೇಶ ? ಏಳನೆಯ ಮಾಸದಲಿ ಬಸುರಿ ಬಲಬಾಹುವಿಗೆ ಕನ್ನಡ ರಕ್ಷೆ ಕಟ್ಟತಕ್ಕದ್ದು. ಶಿಶು ಜನಿಸಿದೊಡನೆ ತಿನ್ನಿಸುವ ಬಜೆ ಬೆಣ್ಣೆಯ ಜೊತೆಗೆ ಕನ್ನಡವ ಬೆರಸುವುದು ಮರೆಯಬಾರದು. ಅನ್ಯಭಾಷೆಯ ಅತ್ಯಧಿಕ ಮೋಹವೆನ್ನುವ ಅಂಟುಜಾಡ್ಯ ಸೋಂಕದಿರಲು ಆರು ತಿಂಗಳು ತೀರುವುದರೊಳಗೆ ಕನ್ನಡ ಸಿಡುಬು ಹಾಕಿಸಬೇಕು. ತರುವಾಯ ಸಮ ಸಂವತ್ಸರ ನಡೆಯುವಾಗ ಕತ್ತರಿಸಲಯ್ಯ ಕನ್ನಡಕ್ಕೆ ಮುಡಿಯು. ಓನಾಮ ಹಬ್ಬಕ್ಕೆ ಅರ್ಚಾಮೂರ್ತಿ ಆಗಲಿ ಕನ್ನಡದಿಂದ ತಯಾರಿಸಿದ ಸಿದ್ಧಿವಿನಾಯಕ. ವಿದ್ಯಾಭ್ಯಾಸ ಜರುಗತಕ್ಕದ್ದೂ ಕನ್ನಡ ಹಲಗೆ ಬಳಪ ಬಾಲಬೋಧೆ ಮಗ್ಗಿಕೋಷ್ಟಕ ಪಾಠ ಪುಸ್ತಕಗಳ ಮೂಲಕ. ಉಪನಯನ ಶಿವದೀಕ್ಷೆ ಇತ್ಯಾದಿಗಳಲ್ಲಿ ಕನ್ನಡ ಪರಿಕರ ಕನ್ನಡ ಮಂತ್ರ ಕನ್ನಡ ಶೃಂಗಾರ. ಮದುವೆಯಲಿ ಕನ್ನಡ ಭಾಷಿಂಗ ಕನ್ನಡ ಸಂಕಲಿಕೆ ಧೋತ್ರ ಸೀರೆ. ಆಮೇಲೆ ಮನೆ ಕಟ್ಟತಕ್ಕದ್ದು ಕನ್ನಡ ಇಟ್ಟಿಗೆ ದೂಲ ಹೆಂಚುಗಳಿಂದ : ಮಾಳಿಗೆ ಮೇಲೆ ಹಾರಿಸಬೇಕು ಕನ್ನಡ ಬಾವುಟವ. ದಿನದಿನವು ಕನ್ನಡ ಆಹಾರ, ಕನ್ನಡ ವಿಹಾರ, ಕನ್ನಡ ನಿದ್ದೆ ; ಎದ್ದೊಡನೆ ಕನ್ನಡ ಸ್ಮರಣೆ, ಮಧ್ಯಾಹ್ನ ಕನ್ನಡ ಪೂಜೆ, ಸದಾ ಕನ್ನಡ ಧ್ಯಾನ, ಚಿಂತೆ, ಹಂಗು ; ಆ ನಾಡು ಈ ನಾಡು ನುಡಿಗಳೆಲ್ಲ ವಿಧೇಯ ದಾಸದಾಸಿಯರಾಗಿ ಓಡಾಡಿ ಗೆಯ್ಮೆ ಗೈದು ತಂದು ತುಂಬಿಸಲಿ ಕನ್ನಡದ ಉಗ್ರಾಣವನ್ನ ! ಕನ್ನಡ ಸಿರಿಗನ್ನಡವಾಗಿ ಗೆದ್ದು ನಿಲ್ಲಲಿ !'

ಅಂತೆಯೇ ಕರ್ನಾಟಕದಲ್ಲಿ ಬ್ಯಾಂಕ್ ಸೇವೆಗೆ ಸೇರಿದವರೆಲ್ಲ ಕನ್ನಡದಲ್ಲೇ ವ್ಯವಹರಿಸಲಿ. ಪ್ರೊಬೇಷನರಿಯಲ್ಲಿ ಕನ್ನಡ ರಕ್ಷೆ ಕಟ್ಟತಕ್ಕದ್ದು. ಸ್ಥಿರೀಕರಿಸುವ ಆಜ್ಞೆ, ಉತ್ತರ ಕನ್ನಡದಲ್ಲಿ. ಚೆಕ್ಕು ಚಲನ್ನು ಡ್ರಾಫ್ಟುಗಳು ಕನ್ನಡದಲ್ಲಿ—ಕನ್ನಡದಲ್ಲೂ—ನಲಿಯಲಿ. ವಹಿವಾಟು ಲೆಕ್ಕಗಳ ಋಣ ಧನಗಳ ರಿಂಗಣ ಗುಣಿತವಾಗಲಿ ಕನ್ನಡದಲ್ಲಿ. ಚರ್ಚೆ ವಿವರಣೆ ವರದಿ ಅರ್ಜಿ ಪುರಸ್ಕಾರ ನವೀಕರಣವೆಲ್ಲವೂ ಕನ್ನಡದಲ್ಲಾದರೆ ಏನಾದೀತು ನಿಯಮಬಾಹಿರ ? ನಿಯಮ ನಿಬಂಧನೆಗಳೂ ಕನ್ನಡದಲ್ಲೇ ಇದ್ದರೆ ಎಲ್ಲರಿಗೂ ಅರ್ಥವಾಗುವುವಲ್ಲವೆ ? ಇನ್ನು ನಮೂನೆ ಕನ್ನಡದಲ್ಲೇ ಇದ್ದರೆ ಅರ್ಥವಾಗದೆಯೇ ರುಜು ಹಾಕುವ ಹವ್ಯಾಸ ನಿಂತೀತಲ್ಲವೆ ?

ನಮೂನೆ IV

(ನಿಯಮ 8ನ್ನು ನೋಡಿ)

1	ಪ್ರಕಟನೆಯ ಸ್ಥಳ	ಬೆಂಗಳೂರು 560 002
2	ನಿಯತಕಾಲಿಕದ ಅವಧಿ	ತ್ರೈಮಾಸಿಕ
3	ಮುದ್ರಕರ ಹೆಸರು	ಶ್ರೀ ಜಿ. ಎಚ್. ಕೃಷ್ಣಮೂರ್ತಿ
	ರಾಷ್ಟ್ರಿಕತೆ	ಭಾರತೀಯ
	ವಿಳಾಸ	ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಗಡಿಯಾರ ಗೋಪುರ ಚೌಕ, ಮೈಸೂರು 570 001
4	ಪ್ರಕಾಶಕರ ಹೆಸರು	ಶ್ರೀ ಪಾ. ರಾಜಗೋಪಾಲ
	ರಾಷ್ಟ್ರಿಕತೆ	ಭಾರತೀಯ
	ವಿಳಾಸ	ಪ್ರಧಾನ ಕಾರ್ಯದರ್ಶಿ, ಸಮನ್ವಯ ಸಮಿತಿ (ರಿ) ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳು 22 ಜಯಚಾಮರಾಜೇಂದ್ರ ರಸ್ತೆ, ಬೆಂಗಳೂರು 560 002
5	ಸಂಪಾದಕರ ಹೆಸರು	ಎಚ್ಚೆಸ್ಕೆ (ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್)
	ರಾಷ್ಟ್ರಿಕತೆ	ಭಾರತೀಯ
	ವಿಳಾಸ	41 ಆರನೆಯ ಮುಖ್ಯ ರಸ್ತೆ ಸರಸ್ವತೀಪುರಂ, ಮೈಸೂರು 570 009
6	ಒಟ್ಟು ಬಂಡವಾಳದ ಶೇ. 1ಕ್ಕಿಂತ ಹೆಚ್ಚಿನಪಾಲು ಹೊಂದಿರುವ ಷೇರುದಾರರ ಅಥವಾ ಪಾಲುದಾರರ ಅಥವಾ ಪತ್ರಿಕೆಯ ಮಾಲೀಕರ ಹೆಸರು ವಿಳಾಸಗಳು	ಸಮನ್ವಯ ಸಮಿತಿ (ರಿ) ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳು ಭಾರತೀಯ ಸ್ಟೇಟ್ ಬ್ಯಾಂಕ್, ಬೆಂಗಳೂರು 560 002

ನಾನು, ಪಾ. ರಾಜಗೋಪಾಲ, ಮೇಲೆ ಕಾಣಿಸಿದ ವಿವರಗಳು ನನ್ನ ನಂಬಿಕೆ ಮತ್ತು ತಿಳಿವಳಿಕೆಯಂತೆ ನಿಜವಾದವೆಂದು ಈ ಮೂಲಕ ಘೋಷಿಸುತ್ತೇನೆ.

ಪಾ. ರಾಜಗೋಪಾಲ
ಪ್ರಕಾಶಕ

ಭಾರತದಲ್ಲಿ ವಿದ್ಯುನ್ಮಾನ ಬ್ಯಾಂಕಿಂಗು

ದಿಢೀರನೆ ಬಂದು ಭಾರತೀಯ ಬ್ಯಾಂಕುಗಳ ಬಾಗಿಲು ತಟ್ಟುತ್ತಿರುವ ವಿದ್ಯುನ್ಮಾನೀಯ ವಿದ್ಯಮಾನಗಳು ವರವೆ, ಶಾಪವೆ?

ಎಪ್ಪತ್ತರ ದಶಕದಲ್ಲಿ ಪಾಶ್ಚಾತ್ಯ ಬ್ಯಾಂಕಿಂಗ್ ವಲಯದಲ್ಲಿ ಕ್ರಾಂತಿಸದೃಶ ಬದಲಾವಣೆಯನ್ನುಂಟುಮಾಡಿದ ವಿದ್ಯುನ್ಮಾನೀಯ ವಿದ್ಯಮಾನಗಳು ಎಂಬತ್ತರ ದಶಕದಲ್ಲಿ ದಿಢೀರನೆ ಬಂದು ಭಾರತೀಯ ಬ್ಯಾಂಕುಗಳ ಬಾಗಿಲು ತಟ್ಟುತ್ತಿವೆ: ಮನೆಯೊಡತಿ ಒಬ್ಬಳೇ ಮನೆಯಲ್ಲಿದ್ದಾಗ ಅಪರಿಚಿತ ಅತಿಥಿ ಬಂದು ಬಾಗಿಲು ತಟ್ಟಿದ ಹಾಗೆ. ಬಾಗಿಲನ್ನು ಒಮ್ಮೆಲೇ ತೆರೆಯಲಾಗದು; ಕುತೂಹಲ, ಸೌಜನ್ಯಗಳನ್ನು ಬದಿಗಿರಿಸಿ ಬಾಗಿಲು ಹಾಕಲೂ ಆಗದು.

ಇದು ಸ್ಥೂಲವಾಗಿ ಭಾರತದ ಬ್ಯಾಂಕುಗಳು ವಿದ್ಯುನ್ಮಾನ ಯುಗವನ್ನು ಕಂಡುಕೊಳ್ಳುತ್ತಿರುವ ಪರಿ. 21ನೆಯ ಶತಮಾನಕ್ಕೆ ದೇಶವನ್ನು ಒಯ್ಯುವ ನಮ್ಮ ನೇತಾರರ ದೃಢ ಸಂಕಲ್ಪದ ಹಿನ್ನೆಲೆಯಲ್ಲಿ ಗಮನಿಸಿದರೆ ಬ್ಯಾಂಕುಗಳು ಈ ಅತಿಥಿಯನ್ನು ಸ್ವಾಗತಿಸುವುದಷ್ಟೇ ಅಲ್ಲದೆ ತಮ್ಮ ಕ್ಷೇತ್ರದ ಒಂದು ಬಹು ಮುಖ್ಯ ಅನಿವಾರ್ಯ ಅಂಗವಾಗಿಸಿಕೊಳ್ಳಬೇಕಾಗಬಹುದು ಎನಿಸುತ್ತದೆ. ಎಂದರೆ ಭಾರತೀಯ ಬ್ಯಾಂಕುಗಳು ಆಚೆ ಕಡೆಯ ವಿದ್ಯಮಾನಗಳನ್ನು ಗಮನಿಸುತ್ತಿರಲಿಲ್ಲವೆಂದಾಗಲಿ ಆಧುನಿಕ ವಿಧಾನಗಳನ್ನು ತಮ್ಮಲ್ಲಿ ಅಳವಡಿಸಿಕೊಳ್ಳಲು ಅಪೇಕ್ಷಿಪಡಲಿಲ್ಲವೆಂದಾಗಲಿ ಅಲ್ಲ. ವಿದ್ಯುನ್ಮಾನ ಶಾಸ್ತ್ರದ ಬೆಳವಣಿಗೆಯೊಂದಿಗೇ ಬೆಳೆದ ಮಾಹಿತಿ ತಂತ್ರಜ್ಞಾನವನ್ನೂ, ಬ್ಯಾಂಕಿಂಗಿನಲ್ಲಿ ಅವುಗಳ ಉಪಯುಕ್ತತೆಯನ್ನೂ ಭಾರತೀಯ ಬ್ಯಾಂಕುಗಳು ಅರವತ್ತರ ದಶಕದಲ್ಲಿಯೇ ಗಮನಿಸಿದ್ದುವು. 1966ರಷ್ಟು ಹಿಂದೆಯೇ ಅಖಿಲ ಭಾರತ ಬ್ಯಾಂಕ್ ಉದ್ಯೋಗಿಗಳ ಸಂಘ ಮತ್ತು ಅಖಿಲ ಭಾರತ ಬ್ಯಾಂಕ್ ಉದ್ಯೋಗಿಗಳ ಒಕ್ಕೂಟಗಳು ತಮ್ಮ ವೇತನ ಒಪ್ಪಂದದ ಇತ್ಯರ್ಥದ ಸಮಯದಲ್ಲಿ ಭಾರತೀಯ ಬ್ಯಾಂಕರುಗಳ ಸಂಘದೊಡನೆ ಬ್ಯಾಂಕಿನ ಕಾರ್ಯಗಳನ್ನು ಸ್ವಯಂಚಲೀ ವ್ಯವಸ್ಥೆಗೆ ಒಳಪಡಿಸಲು—ಹೆಚ್ಚು ಕಡಿಮೆ ಈಗ ಒಪ್ಪಂದ ಮಾಡಿಕೊಂಡಿರುವಷ್ಟೇ ವ್ಯಾಪ್ತಿಯಲ್ಲಿ—ಒಪ್ಪಂದ ಮಾಡಿಕೊಂಡಿದ್ದರು. ಆದರೆ ಬ್ಯಾಂಕುಗಳೇ ಈ ನಿಟ್ಟಿನಲ್ಲಿ ಖಚಿತ ಹೆಜ್ಜೆಗಳನ್ನಿಡದೆ ಉದಾಸೀನ ಮಾಡಿದುವು. ಈ ಬಗ್ಗೆ ಈಗಿನಂತೆ ಕೇಂದ್ರ ಬ್ಯಾಂಕು ಒಂದು ವ್ಯಾಪಕ ನೀತಿಯನ್ನೂ ರೂಪಿಸಲಿಲ್ಲ. ಅಲ್ಲದೆ ಈಗ ಸಿದ್ಧವಾಗಿರುವ ಒಂದು ಅಧೋರಚನೆಯೂ ಇರಲಿಲ್ಲ.

ಕಾರ್ಯಬಾಹುಳ್ಯ

ಬಹುಶಃ ಇವೆಲ್ಲಕ್ಕಿಂತ ಹೆಚ್ಚಾಗಿ, ಆಗ ಬ್ಯಾಂಕುಗಳಿಗೆ ತಮ್ಮ ಕಾರ್ಯನಿರ್ವಹಣೆಗೆ ಮಾನವ ಸಂಪನ್ಮೂಲವಷ್ಟೇ ಸಾಲದು ಎನ್ನುವಷ್ಟು ಗಾತ್ರದಲ್ಲಿ ಅವುಗಳ ವ್ಯವಹಾರಗಳಾಗಲಿ ಶಾಖೆಗಳಾಗಲಿ ಇರಲಿಲ್ಲ.

ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ನಮ್ಮ ದೇಶದ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಇಂದು ಆರು ಲಕ್ಷಕ್ಕೂ ಹೆಚ್ಚು ಜನ ಕೆಲಸ ಮಾಡುತ್ತಾರೆ. ಐವತ್ತು ಸಾವಿರಕ್ಕೂ ಹೆಚ್ಚು ಬ್ಯಾಂಕ್ ಶಾಖೆಗಳು ಇಂದು ಕಾರ್ಯನಿರತವಾಗಿವೆ.

ತನ್ನ ಕಾರ್ಯವ್ಯಾಪ್ತಿ ಹೀಗೆ ಇದ್ದಕ್ಕಿದ್ದಂತೆ—ಕೇವಲ ಹತ್ತು-ಹದಿನೈದು ವರ್ಷಗಳಲ್ಲಿ—ವಿಸ್ತೃತವಾದಾಗ, ಬ್ಯಾಂಕುಗಳು ವ್ಯವಸ್ಥೆಯ ಮೇಲಿನ ನಿಯಂತ್ರಣ, ಹತೋಟಿ ತಪ್ಪುವ ಸ್ಥಿತಿಯನ್ನು ತಲಪಿದವು. ಮಾಹಿತಿ ಸಂಗ್ರಹಣೆ, ವಿಶ್ಲೇಷಣೆ, ನಿರ್ಧಾರಗಳು, ತೀರುವೆಗಳು, ನಿಧಿ ವರ್ಗಾವಣೆ, ಮನೆವಾರ್ತೆಯನ್ನು ಒಪ್ಪವಾಗಿಟ್ಟುಕೊಳ್ಳುವುದು, ಇವೆಲ್ಲ ಶೀಘ್ರವಾಗಿ ಆಗಬೇಕಾದುದು ಅತ್ಯಗತ್ಯ ಎಂಬುದು ಬ್ಯಾಂಕುಗಳ ಆಡಳಿತ ವರ್ಗಕ್ಕೆ ಮನದಟ್ಟಾಯಿತು. ಎಲ್ಲಕ್ಕಿಂತ ಹೆಚ್ಚಾಗಿ ಕೇಂದ್ರ ಬ್ಯಾಂಕಿಗೆ ಈ ಅರಿವು ತಟ್ಟಿತು.

ವಿದ್ಯುನ್ಮಾನ ಯುಗದ ಸೌಲಭ್ಯವನ್ನು ನಮ್ಮ ವ್ಯವಸ್ಥೆಯಲ್ಲಿಯೂ ಅಳವಡಿಸಿಕೊಳ್ಳಲು ಬ್ಯಾಂಕಿಂಗ್ ರಂಗ ಪ್ರಯತ್ನಿಸಬೇಕಾಯಿತು. ಇದರ ಫಲವಾಗಿ ಗಣಕಗಳು ಬ್ಯಾಂಕಿಗರ ನಾಲಗೆಯ ಮೇಲೆ ಕೌತುಕಸಂಭ್ರಮಗಳಿಂದ ನಲಿದಾಡಿದುವು. ಆದರೆ ಇದ್ದಕ್ಕಿದ್ದಂತೆ ಹೊಸ ವ್ಯವಸ್ಥೆಗೆ ತುಂಬು ಸ್ವಾಗತ ದೊರೆತೀತೆ? ಅದಕ್ಕೆ ವ್ಯಾಪಕ ನೀತಿ, ಸಿಬ್ಬಂದಿಯ ಸಹಕಾರ, ಸೂಕ್ತ ಅಧೋರಚನೆಗಳು ಬೇಡವೆ?

ಜಿ. ಎನ್. ನರಸಿಂಹಮೂರ್ತಿ
ಅಧಿಕಾರಿ, ಭಾರತೀಯ ಸ್ಟೇಟ್ ಬ್ಯಾಂಕ್
ನಗರ ಶಾಖೆ, ಬೆಂಗಳೂರು 560 002

ಈ ಅಗತ್ಯಗಳನ್ನು ಪೂರೈಸಲು 1979ರಲ್ಲಿ ಭಾರತೀಯ ಬ್ಯಾಂಕರರ ಸಂಘ ಭಾರತದ ವಿವಿಧ ಬ್ಯಾಂಕುಗಳ ಪ್ರಮುಖ ನೌಕರರ ಸಂಘಗಳೊಂದಿಗೆ ಬ್ಯಾಂಕ್ ವ್ಯವಹಾರಗಳಲ್ಲಿ ಗಣಕೀಕರಣ, ಸ್ವಯಂಚಲೀಕರಣಗಳನ್ನು ಅಳವಡಿಸಿಕೊಳ್ಳುವ ಬಗೆಗೆ ಒಪ್ಪಂದವನ್ನು ಮಾಡಿಕೊಂಡಿತು. ಮುಖ್ಯವಾಗಿ ಅವು ಈ ಕ್ಷೇತ್ರಗಳಲ್ಲಿರುತ್ತವೆ:

ಗಣಕೀಕರಣ

1 ಮಹಾನಗರಗಳ ತೀರುವೆ ಮನೆಯ ವ್ಯವಹಾರಗಳು,
2 ಅಂತರಶಾಖಾ/ಅಭಿಕರಣ/ಸರ್ಕಾರಿ ಖಾತೆಗಳು/ಪ್ರವಾಸಿ ಚೆಕ್ಕುಗಳು/ಉದರಿ ಕಾರ್ಡುಗಳ ವ್ಯವಹಾರಗಳ ತಾಳೆ,
3 ಸುಧಾರಿತ ವಿಧಾನಗಳಿಂದ ನಿಧಿಗಳ ವರ್ಗಾವಣೆ,
4 ವಿದೇಶಿ ವಿನಿಮಯ ವ್ಯವಹಾರಗಳು,
5 ವಿನಿಯೋಜನೆಗಳ ವ್ಯವಸ್ಥಾಪನೆ,
6 ಉದರಿ ಮಾಹಿತಿ, ಸಾಂಖ್ಯಿಕ ಹಾಗೂ ಪ್ರತೀಕ್ಷಾ ದತ್ತಾಂಶ, ವಾರ್ಷಿಕ ಸಮಾಪನ ಪರ್ಯಾವರ್ತನಗಳೂ ಸೇರಿದಂತೆ ಮಾಹಿತಿ ವಿಧಾನ ವ್ಯವಸ್ಥಾಪನೆ,
7 ಸಿಬ್ಬಂದಿಗಳ ಬಗೆಗಿನ ಎಲ್ಲ ದತ್ತಾಂಶಗಳು, ಭವಿಷ್ಯನಿಧಿ ಹಾಗೂ ಪಿಂಚಣಿ,
8 ಸರಕು, ದಾಸ್ತಾನಿನ ಹತೋಟಿ,
9 ವಣಿಕ ಬ್ಯಾಂಕಿಂಗ್,
10 ಈಗಾಗಲೇ ಗಣಕೀಕೃತವಾಗಿರುವೆಡೆಯಲ್ಲಿ ಮತ್ತು ಯಾವುದೇ ಬ್ಯಾಂಕು ತನ್ನ ನೌಕರರ ಸಂಘದೊಂದಿಗೆ ಮಾಡಿಕೊಂಡಿರುವ/ಮಾಡಿಕೊಳ್ಳುವ ಒಪ್ಪಂದದಂತೆ ಸಂಬಳ ಮತ್ತು ವೇತನ ಪಟ್ಟಿ.

ಸ್ವಯಂಚಲೀಕರಣ

1 ಚಾಲ್ತಿ ಖಾತೆಗಳು,
2 ಉಳಿತಾಯ ಖಾತೆಗಳು,
3 ನಗದುದರಿ ಹಾಗೂ ಸಾಲ ಖಾತೆಗಳು,
4 ಇತರ ಠೇವಣಿ ಖಾತೆಗಳು,
5 ಪ್ರಧಾನ ಪಹಣಿ ಖಾತೆಗಳು,
6 ಸಂಬಳ ಮತ್ತು ವೇತನ ಪಟ್ಟಿ.

ಈ ಪಟ್ಟಿಗಳನ್ನು ನೋಡಿದಾಗ, ಉಳಿದದ್ದೇನು? ಹೆಚ್ಚು ಕಡಿಮೆ ಎಲ್ಲ ವ್ಯವಹಾರಗಳೂ ಇವೆಯಲ್ಲ? ಎಂದು ಹುಬ್ಬೇರಿಸುವಂತಾದರೂ, ಈ ಒಪ್ಪಂದ

ಆದ ಇಷ್ಟು ದಿನಗಳ ಬಳಿಕವೂ ನಾವಿರುವುದು ಲೇಖನದ ಮೊದಲ ಸಾಲುಗಳು ತಿಳಿಸುವಂತೆಯೇ.

ಈ ಒಪ್ಪಂದಕ್ಕೆ ಕೆಲವು ಬ್ಯಾಂಕುಗಳ ನೌಕರರ ಸಂಘಗಳು ಸಹಿ ಹಾಕಿಲ್ಲ. ನೌಕರರ ಸಂಘಗಳಿಗೆ ಮೇಲಿನ ಒಪ್ಪಂದದ ಜತೆಯಲ್ಲಿಯೇ. ಸಿಬ್ಬಂದಿಯನ್ನು ತೆಗೆದುಹಾಕುವುದಿಲ್ಲ, ಗ್ರಾಮೀಣ ಪ್ರದೇಶಗಳಲ್ಲಿ ಗಣಕಗಳನ್ನು ಬಳಸುವುದಿಲ್ಲ, ಗಣಕೀಕರಣ ಒಂದು ಮಿತಿಯಲ್ಲಿ ಮಾತ್ರ ನಡೆಯುತ್ತದೆ ಎಂದು ಭಾರತೀಯ ಬ್ಯಾಂಕರರ ಸಂಘ ಆಶ್ವಾಸನೆ ನೀಡಿದರೂ ಸಹ, ಇದನ್ನು ಮತ್ತೆ ಪರಿಶೀಲಿಸಬಹುದು.

ಇತ್ತೀಚೆಗೆ, 1984ರಲ್ಲಿ ಭಾರತೀಯ ರಿಸರ್ವ್ ಬ್ಯಾಂಕು ಈ ಒಪ್ಪಂದಗಳನ್ನು ಕಾರ್ಯಗತ ಮಾಡಲು ಅನುವು ಮಾಡಿಕೊಡುವ ಉದ್ದೇಶದಿಂದ ಬ್ಯಾಂಕಿನ ಉಪಗವರ್ನರ್ ಆದ ಶ್ರೀ ರಂಗರಾಜನ್‌ರವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿತು. ಈ ಸಮಿತಿಯ ಶಿಫಾರಸುಗಳನ್ನು ಬಹುತೇಕ ಒಪ್ಪಿಕೊಂಡು ಅವುಗಳನ್ನು ಅಳವಡಿಸಿಕೊಳ್ಳುವ ಯತ್ನದಲ್ಲಿ ಬ್ಯಾಂಕುಗಳು ಸದ್ಯ ಪ್ರವೃತ್ತವಾಗಿವೆ.

ರಂಗರಾಜನ್ ಸಮಿತಿಯ ಕೆಲವು ಮುಖ್ಯ ಶಿಫಾರಸುಗಳು ಹೀಗಿವೆ :

1 ಶಾಖೆ, ಪ್ರಾದೇಶಿಕ ಕಛೇರಿ ಹಾಗೂ ಪ್ರಧಾನ ಕಛೇರಿಗಳು—ಈ ಮೂರು ಹಂತಗಳಲ್ಲಿ ಸ್ವಯಂಚಲೀಕರಣ ಆಗಬೇಕೆಂದು ಗುರುತಿಸಲಾಗಿದೆ.

2 ಶಾಖಾ ಮಟ್ಟದಲ್ಲಿ ಎರಡು ಮಾದರಿಗಳ ಗಣಕಗಳನ್ನು ಅಳವಡಿಸಿಕೊಳ್ಳಬೇಕು :

ಅ) ಮಾದರಿ 1 : ವಿದ್ಯುನ್ಮಾನ ಪಹಣಿ ನಮೂದು ಯಂತ್ರ [ಇದು ಎರಡು ಅಡ್ಡತಿಡ್ಡ ತಟ್ಟೆಗಳನ್ನು (Floppy Disc) ಮತ್ತು ಒಂದು ಮುದ್ರಕವನ್ನು ಹೊಂದಿರುತ್ತದೆ. ಇದು ಪಹಣಿಗಳನ್ನು ನಿರ್ವಹಿಸುವುದು ; ಅಲ್ಲದೆ ಬಡ್ಡಿಗಳನ್ನು ಲೆಕ್ಕ ಹಾಕುತ್ತದೆ ; ಖಾತೆಗಳ ತಃಖ್ತೆಗಳನ್ನು ತಯಾರಂ ಮಾಡಿಕೊಡುತ್ತದೆ, ಸ್ಥಾಯೀ ಆದೇಶಗಳನ್ನು ನಿರ್ವಹಿಸುತ್ತದೆ. ಇಂತಹ ಒಂದೊಂದು ಯಂತ್ರವನ್ನು ಒಂದೊಂದು ಕೆಲಸಕ್ಕೆ ಬಳಸಿಕೊಳ್ಳಲಾಗುವುದು.]

ಆ) ಮಾದರಿ 2 : ಇದು ಹೆಚ್ಚಿನ ಸಾಮರ್ಥ್ಯವುಳ್ಳ ಸೂಕ್ಷ್ಮಪ್ರಕ್ರಾಮಕವನ್ನು ಹೊಂದಿದ್ದು ಮೇಲಿನ ಯಂತ್ರವನ್ನು ನಿರ್ವಹಿಸುವುದಲ್ಲದೆ, ಪ್ರಧಾನ ಪಹಣಿಯನ್ನು ಕೂಡ ನಿರ್ವಹಿಸಿ ಎಲ್ಲ ಖಾತೆಗಳ ರೋಜು ಪುಸ್ತಕಗಳನ್ನು ಮುದ್ರಿಸಿ, ಮುಖ್ಯ ರೋಜು ಪುಸ್ತಕವನ್ನು ತಾಳೆಮಾಡಿ ಸಾಂಖ್ಯಿಕ ಪರಿವರ್ತನಗಳನ್ನು ಮುದ್ರಿಸುತ್ತದೆ.

3 ಬ್ಯಾಂಕುಗಳು ಹತ್ತಕ್ಕಿಂತ ಹೆಚ್ಚು ಶಾಖೆಗಳನ್ನು ಹೊಂದಿರುವ ಪ್ರದೇಶದಲ್ಲಿ ತೀರುವೆಯನ್ನು ತ್ವರಿತಗೊಳಿಸಲು ವಿಶೇಷ ಚೆಕ್ ಸೇವಾ ಕೇಂದ್ರಗಳನ್ನು ಸ್ಥಾಪಿಸಬೇಕು.

4 ಪ್ರಧಾನ ಕಛೇರಿಗಳಲ್ಲಿ ದಾಖಲೆಗಳನ್ನು ಅತ್ಯಂತ ಸಮರ್ಥವಾದ ಪ್ರಧಾನ ಗಣಕಗಳಲ್ಲಿ ಇರಿಸಲಾಗುವುದು. (Main-frame computers)

5 ಸ್ವಯಂಚಲೀಕರಣ ಕಾರ್ಯಕ್ರಮ ಎರಡು ಹಂತಗಳಲ್ಲಿ ಮುಗಿಯಬೇಕು : (ಅ) 1985–1987, (ಆ) 1988–1989.

6 1987ರ ವೇಳೆಗೆ ಎಲ್ಲ ಪ್ರಧಾನ ಕಛೇರಿಗಳಲ್ಲಿಯೂ ಪ್ರಧಾನ ಗಣಕಗಳನ್ನು ಸ್ಥಾಪಿಸಬೇಕು. 2,500 ಶಾಖೆಗಳನ್ನು ಗಣಕೀಕರಿಸಬೇಕು ಮತ್ತು ಹತ್ತು ಸಾವಿರ ವಿದ್ಯುನ್ಮಾನ ಪಹಣಿ ನಮೂದು ಯಂತ್ರಗಳನ್ನು ಸ್ಥಾಪಿಸಬೇಕು. ಈ ಎಲ್ಲ ಯಂತ್ರಗಳಿಗೆ ತಗಲುವ ವೆಚ್ಚ ಸುಮಾರು ರೂ. 135 ಕೋಟಿಗಳೆಂದು ಅಂದಾಜು ಮಾಡಲಾಗಿದೆ.

7 ಅನುಷ್ಠಾನವನ್ನು ಗಮನಿಸಲು ಒಂದು ಸಮಿತಿಯನ್ನು ನೇಮಿಸಬೇಕು.

8 ಇದಕ್ಕಾಗಿ ಸಾಧ್ಯವಾದಷ್ಟು ಮಟ್ಟಿಗೆ ಭಾರತದಲ್ಲಿಯೇ ಲಭ್ಯವಿರುವ ಉಪಕರಣಗಳನ್ನು ಬಳಸಿಕೊಳ್ಳುವುದು.

ಈ ಅಂಶಗಳು ಸ್ಥೂಲವಾಗಿ ರಂಗರಾಜನ್ ಸಮಿತಿಯ ಶಿಫಾರಸುಗಳನ್ನು ಪ್ರತಿನಿಧಿಸುತ್ತವೆ. [ಬ್ಯಾಂಕುಗಳು ಸಿಬ್ಬಂದಿಯೊಡನೆ ಮಾಡಿಕೊಂಡ ಒಪ್ಪಂದವನ್ನು ರಂಗರಾಜನ್ ಸಮಿತಿಯ ಶಿಫಾರಸುಗಳೊಡನೆ ಹೋಲಿಸಿದಾಗ ಅಲ್ಲಿಯ ಅನೇಕ ಅಂಶಗಳು ಇಲ್ಲಿ ಇನ್ನೂ ಸ್ಥಳ ಪಡೆದುಕೊಳ್ಳದಿರುವುದು ಕಂಡುಬರುತ್ತದೆ.]

ಈ ಶಿಫಾರಸುಗಳು ಕಾರ್ಯಗತವಾದಲ್ಲಿ, ಭಾರತ ತಾಂತ್ರಿಕವಾಗಿ ಎಷ್ಟೇ ಹಿಂದಿರಲಿ, ವಿದ್ಯುನ್ಮಾನ ಯುಗಕ್ಕೆ ಕಾಲಿಟ್ಟಂತೆಯೇ. ಆದರೆ ಸಮಿತಿಯ ಶಿಫಾರಸುಗಳಲ್ಲಿ ಸೂಚಿತವಾದ ಗುರಿ ಇಲ್ಲಿಯತನಕ ಇನ್ನೂ ಬಹುದೂರದಲ್ಲಿಯೇ ಇದೆ. ಇದಕ್ಕೆ ಕಾರಣಗಳನ್ನು ಹುಡುಕಹೊರಟಾಗ ನಮಗೆ ಅನೇಕ ಕುತೂಹಲಕಾರಿ ಸಂಗತಿಗಳು ಕಾಣಬರುತ್ತವೆ.

ಅನುಷ್ಠಾನ ಸಮಿತಿ

ಅನುಷ್ಠಾನ ಸಮಿತಿಯ ವರಿಷ್ಠರು ಸಹ ಆಗಬೇಕಾದಷ್ಟು ಪ್ರಗತಿ ಆಗಿಲ್ಲವೆಂದೂ ಅನೇಕ ಶಿಫಾರಸುಗಳು ಬದಲಾವಣೆಗೆ ಪಕ್ಕಾಗಬೇಕೆಂದೂ ಒಪ್ಪಿಕೊಳ್ಳುತ್ತಾರೆ. ಆದರೂ ಅವರ ಪ್ರಕಾರ ಸಾಕಷ್ಟು ಸಂಖ್ಯೆಯ ಶಾಖೆಗಳಲ್ಲಿ ಆಗಲೇ ಯಂತ್ರಗಳು ಸ್ಥಾಪಿತವಾಗಿವೆ. ಬ್ಯಾಂಕುಗಳಿಗೆ ಅವು ಕೊಳ್ಳಬೇಕಾದ ಶಿಷ್ಟೀಕೃತ ಮಾದರಿಯನ್ನು ಸೂಚಿಸಲಾಗಿದೆ. ಶಿಷ್ಟೀಕೃತ ಕನಿಷ್ಠ ಅಗತ್ಯಗಳನ್ನು ಪೂರೈಸುವ, ತಮಗೆ ಸರಿ ಎನಿಸುವ ಗಣಕಗಳನ್ನು ಬ್ಯಾಂಕುಗಳು ಕೊಳ್ಳಬಹುದಾಗಿದೆ. ಮೊದಲನೆಯ ಮಾದರಿಯಂತ್ರಗಳ ಸ್ವರೂಪಕುರಿತು ಅಧ್ಯಯನ ನಡೆಸಲು ಏಪ್ರಿಲ್ 86ರ ನಂತರ ಒಂದು ಸಮಿತಿ ರೂಪುಗೊಳ್ಳಬೇಕಾಗಿದೆ ಎಂದು ವರಿಷ್ಠರು ಅಭಿಪ್ರಾಯಪಟ್ಟಿದ್ದರು. ಅಲ್ಲದೆ ನೌಕರ ಸಂಘಗಳ ಜತೆಗೆ ಮಾಡಿಕೊಂಡ ಒಪ್ಪಂದ 1986ನೆಯ ಸೆಪ್ಟೆಂಬರ್‌ಗೆ ಮುಗಿಯಲಿರುವುದರಿಂದ ಹೊಸ ಒಪ್ಪಂದ ಮಾಡಿಕೊಳ್ಳುವ ವೇಳೆಗೆ ಅನೇಕ ಹೊಸ ಚಿಂತನೆಗಳಿಗೆ ಚಾಲನೆ ದೊರೆಯಬಹುದೆಂಬ ಆಸೆಯನ್ನೂ ಅವರು ಹೊಂದಿದ್ದಾರೆ.

ಈಗ್ಗೆ ಕೆಲ ತಿಂಗಳ ಹಿಂದೆ ಕಂಪ್ಯೂಟರ್ ಪತ್ರಿಕೆಯೊಂದರಲ್ಲಿ ಪ್ರಕಟವಾದ ಸಂದರ್ಶನವೊಂದರಲ್ಲಿ ಡಾ. ರಂಗರಾಜನ್‌ರವರು ಸಮಿತಿಯ ವರದಿಯ ಬಗೆಗೆ ಮುಖ್ಯ ಆಕ್ಷೇಪವಾದ, ವರದಿ ಕೇವಲ ಅಲ್ಲಲ್ಲಿನ ಸಮಸ್ಯೆಗಳನ್ನು ಕುರಿತಂತಿದೆಯೆಂಬ, ಒಟ್ಟಾರೆ ದೃಷ್ಟಿ ಇಲ್ಲವೆಂಬ ಅಂಶದ ಬಗೆಗೆ ಉತ್ತರಿಸುತ್ತ, ಪ್ರಾರಂಭ ಎಲ್ಲಿಯಾದರೂ ಆಗಬೇಕಲ್ಲವೆ? ತತ್‌ಕ್ಷಣದ ಆದ್ಯತೆಯ ಹಾಗೂ ಗಣಕೀಕರಣ ವ್ಯಾವಹಾರಿಕವಾಗಿ ಆಗಬಹುದಾದ ಕ್ಷೇತ್ರಗಳನ್ನು ಸಮಿತಿ ಗಮನಿಸಿದೆ ಎಂದಿದ್ದಾರೆ.

ಬ್ಯಾಂಕುಗಳ ಆಡಳಿತ ವರ್ಗ

ಅನುಷ್ಠಾನ ಸಮಿತಿ ಎಷ್ಟೇ ಒತ್ತಡ ಹೇರಿದರೂ, ಬ್ಯಾಂಕುಗಳ ಆಡಳಿತ ವರ್ಗಗಳು ಸಂಪೂರ್ಣವಾಗಿ ಸಹಕಾರವಿತ್ತು, ಮನಃಪೂರ್ವಕವಾಗಿ ಪ್ರಯತ್ನಿಸದ ಹೊರತು ಅನುಷ್ಠಾನ ದೂರದಲ್ಲಿಯೇ ಇರುತ್ತದೆ. ಸೂಕ್ಷ್ಮವಾಗಿ ಗಮನಿಸಿದರೆ ಅನೇಕ ಬ್ಯಾಂಕುಗಳ ಆಡಳಿತ ವರ್ಗಗಳಿಗೆ ಗಣಕೀಕರಣದ ಬಗೆಗೆ ಅಷ್ಟೊಂದು ಉತ್ಸಾಹ, ಆಸಕ್ತಿಗಳು ಇಲ್ಲದಿರುವುದು ಗೋಚರವಾಗುತ್ತದೆ. ಕೇವಲ ಕೇಂದ್ರ ಬ್ಯಾಂಕಿನ ಆದೇಶವನ್ನು ಪಾಲಿಸುವ ಸಲುವಾಗಿ ಯಂತ್ರಗಳನ್ನು ಬ್ಯಾಂಕುಗಳು ಕೊಳ್ಳುತ್ತಿವೆ. ಕೊಂಡ ಯಂತ್ರಗಳಲ್ಲಿ ಎಲ್ಲವೂ ಬಳಕೆಯಲ್ಲಿಲ್ಲ. ಇಲ್ಲಿಯವರೆಗೆ ಸ್ಥಾಪಿತವಾದ ವಿದ್ಯುನ್ಮಾನೀಯ ಪಹಣಿ ಯಂತ್ರಗಳಲ್ಲಿ ಅರ್ಧ ಪಾಲು ದೆಹಲಿಯಲ್ಲಿಯೇ ಇವೆ ಎಂಬುದು ಇದರ ಹಿಂದಿನ ಒತ್ತಡಗಳನ್ನೂ ಅನಾಸಕ್ತಿಯನ್ನೂ ಹೊರಗೆಡಹುತ್ತದೆ. ಒಂದು ಅಭಿಪ್ರಾಯದಂತೆ ಈ ಅನಾಸಕ್ತಿಗೆ ಮುಖ್ಯಕಾರಣವೆಂದರೆ ಬ್ಯಾಂಕುಗಳ ಆಡಳಿತವರ್ಗದ ಮುಖ್ಯರಿಗೆ ಗಣಕಗಳ ಬಗೆಗೆ ಸಾಕಷ್ಟು ತಿಳುವಳಿಕೆ ಇಲ್ಲದಿರುವುದೇ ಆಗಿದೆ. ಹಿರಿಯ ಸ್ಥಾನಗಳಲ್ಲಿರುವವರಿಗೆ, ಎಲ್ಲ ವಿಷಯಗಳಿಗೆ ಇತರರನ್ನು ಅವಲಂಬಿಸಬೇಕಾಗುವುದು ಹಿತಕರ ವಿಷಯವೇನೂ ಅಲ್ಲ.

ಸಿಬ್ಬಂದಿ ವರ್ಗ

ನೌಕರ ಸಂಘಗಳು ತತ್ವಶಃ ಗಣಕೀಕರಣವನ್ನು ಒಪ್ಪಿ ಒಪ್ಪಂದಕ್ಕೆ ಸಹಿಹಾಕಿದ್ದರೂ ಸಿಬ್ಬಂದಿವರ್ಗ ಗಣಕಗಳ ಬಗೆಗೆ ತುಂಬ ಅನುಕೂಲಕರ ನಿಲುವುಗಳನ್ನು ಹೊಂದಿಲ್ಲ. ಒಪ್ಪಂದಕ್ಕೆ ಸಹಿಹಾಕದ ನೌಕರರ ಸಂಘಗಳಂತೂ ಗಣಕೀಕರಣವನ್ನು ಗಟ್ಟಿಯಾಗಿ ವಿರೋಧಿಸುತ್ತಲೇ ಇವೆ. ಗಣಕಗಳನ್ನು ಬ್ಯಾಂಕಿನಲ್ಲಿ ತಂದಿರಿಸಿದಾಗ ಅವುಗಳ ಚಾಲನೆಗೆ ತಡೆಯೊಡ್ಡುವುದು, ಅವು ಸಮರ್ಪಕವಾಗಿ ಕಾರ್ಯನಿರ್ವಹಿಸದಂತೆ ಅವನ್ನು ಹಾಳುಮಾಡುವುದು

ಮುಂತಾದ ಘಟನೆಗಳು ಜರುಗಿರುವುದೂ ಉಂಟು. ಉದ್ಯೋಗಾವಕಾಶಗಳು ತಪ್ಪಿ ಹೋಗುತ್ತವೆನ್ನುವ ಅಭಿಪ್ರಾಯ ಹಾಗೂ ನಿಧಾನಕ್ಕೆ ತಮ್ಮ ಸಂಘಟನೆಗಳಿಗೆಯೇ ಒದಗಬಹುದಾದ ಅಪಾಯದ ಬಗೆಗಿನ ಭಯ ಬಹುಶಃ ಸಿಬ್ಬಂದಿವರ್ಗದ ಗಣಕ ವಿರೋಧಿ ನಿಲುವುಗಳಿಗೆ ಕಾರಣಗಳಿರಬಹುದು. ಈ ಸಮಸ್ಯೆ ಗಂಭೀರ ರೂಪ ತಳೆಯುವ ಸೂಚನೆಗಳಿವೆ. ಕಲ್ಕತ್ತೆಯಲ್ಲಿ ತುಂಬ ಸದಸ್ಯರನ್ನು ಹೊಂದಿರುವ ಭಾರತೀಯ ಬ್ಯಾಂಕ್ ಉದ್ಯೋಗಿಗಳ ಒಕ್ಕೂಟ (BEFI) ಈ ಬಗ್ಗೆ ದೃಢ ನಿರ್ಧಾರ ತಳೆದಿದೆ. ಬ್ಯಾಂಕ್ ವ್ಯವಹಾರಗಳಲ್ಲಿ ಆದ ಹೆಚ್ಚಳಕ್ಕೆ ಅನುಗುಣವಾಗಿ ಸಿಬ್ಬಂದಿ ನೇಮಕಾತಿ ಆಗಿಲ್ಲವೆಂಬುದು ಈ ಸಂಘದವರು ಅವರ ನಿರ್ಧಾರಕ್ಕೆ ಕೊಡುವ ಕಾರಣ.

ಗಣಕಗಳ ಉದ್ಯಮ

ಭಾರತೀಯ ಬ್ಯಾಂಕುಗಳು ಉದ್ಯಮದತ್ತ ದೃಷ್ಟಿಹರಿಸಿದ್ದು ತಮಗೆ ನಿರ್ದಿಷ್ಟವಾದ ಗುರಿಯೊಂದನ್ನು ವಿಧಿಸಿದಾಗಲೇ. ಅದನ್ನು ಸಾಧಿಸಬೇಕಾದ ಒತ್ತಡದೊಂದಿಗೆ ಮೊದಲ ಬಾರಿಗೆ ಯಂತ್ರಗಳನ್ನು ಕೊಳ್ಳುವ ಉತ್ಸಾಹದಲ್ಲಿ ಗಣಕಗಳ ಉದ್ಯಮರಂಗದಲ್ಲಿ ಅವು ಭಾರೀ ಬೇಡಿಕೆಯನ್ನು ಸೃಷ್ಟಿಸಿದುವು.

ಇಂತಹ ದೊಡ್ಡ ಬೇಡಿಕೆಯನ್ನು ನಿರೀಕ್ಷಿಸದಿದ್ದ ಗಣಕ ಉದ್ಯಮರಂಗ ಥಟಕ್ಕನೆ ಹೆಚ್ಚು ಹೆಚ್ಚು ಉತ್ಪಾದನೆಗೆ ತೊಡಗಬೇಕಾಯಿತು. ಈ ಕಾರ್ಯವನ್ನು ಭಾರತದ ಗಣಕ ಉದ್ಯಮ ಗುಣಮಟ್ಟವನ್ನು ಉಳಿಸಿಕೊಂಡೇ ಸಾಧಿಸಬೇಕಾಗಿದೆ. ಉತ್ಪಾದನೆ ಸಮರ್ಪಕ ಪ್ರಮಾಣದಲ್ಲಿಲ್ಲ. ಆದರೆ ಈ ರಂಗಕ್ಕೆ ಭಾರೀ ಭವಿಷ್ಯವಿದೆಯೆಂದು ನಿಸ್ಸಂದೇಹವಾಗಿ ಹೇಳಬಹುದು. ಇಲ್ಲಿಯವರೆಗೆ ಈ ಉದ್ಯಮದಲ್ಲಿ ಹೂಡಲಾದ ಬಂಡವಾಳ ರೂ. 150 ಕೋಟಿ. ಆದರೆ ರಂಗರಾಜನ್ ಸಮಿತಿಯ ಶಿಫಾರಸಿನ ಮೊದಲ ಹಂತದಲ್ಲಿ ಬ್ಯಾಂಕುಗಳಿಗೆ ಬೇಕಾಗುವ ಯಂತ್ರಗಳ ಬೆಲೆಯೇ ಸುಮಾರು ರೂ. 135 ಕೋಟಿ ಆಗಬಹುದೆಂದು ಅಂದಾಜು ಮಾಡಲಾಗಿದೆ. ಎರಡನೆಯ ಹಂತದಲ್ಲಿ ಅವು ಬಳಸಬಯಸುವ ಯಂತ್ರಗಳ ಬೆಲೆ ಸುಮಾರು ರೂ. 250 ಕೋಟಿ. ಅಲ್ಲದೆ ಇದು ಪ್ರಾರಂಭ ಮಾತ್ರ. ಎಂದರೆ ಬ್ಯಾಂಕಿಂಗ್ ವಲಯದಲ್ಲಿಯೇ ಗಣಕೋದ್ಯಮಕ್ಕೆ ಇರುವ ಬೇಡಿಕೆಯನ್ನು ಗಮನಿಸಬಹುದು. ಗಣಕೋದ್ಯಮ ಭಾರತದಲ್ಲಿ ಗಟ್ಟಿಯಾಗಿ ತಳ ಊರಿ, ಬೃಹತ್ತಾಗಿ ಬೆಳೆಯಲು ಬಹುಶಃ ಭಾರತೀಯ ರೈಲ್ವೆ ಹಾಗೂ ಬ್ಯಾಂಕುಗಳು ಬಹುಮಟ್ಟಿಗೆ ಕಾರಣೀಭೂತವಾಗುತ್ತವೆ ಎನ್ನಬಹುದು. ಕಂಪ್ಯೂಟರ್ ಉದ್ಯಮ ಈ ತುರ್ತು ಕರೆಗೆ ಓಗೊಡಬೇಕಷ್ಟೆ.

ಅನೇಕ ಸಂಸ್ಥೆಗಳು ಇಂದು ಗಣಕಗಳನ್ನು ತಯಾರಿಸಿ ಮಾರುಕಟ್ಟೆಗೆ ಒದಗಿಸಲು ಮುಂದೆ ಬಂದಿವೆ. ಹೆಚ್.ಸಿ.ಎಲ್., ಉಷಾ, ವಿಪ್ರೊ, ಐಸಿಐಎಂ, ಡಿ.ಸಿ.ಎಂ. ಮೊದಲಾದವು ಅವುಗಳಲ್ಲಿ ಕೆಲವು.

ಯಾವ ಮಾದರಿ

ರಂಗರಾಜನ್ ಸಮಿತಿ ಸೂಚಿಸಿದ ಗಣಕದ ಎರಡು ಮಾದರಿಗಳಲ್ಲಿ ಯಾವುದನ್ನು ಉಪಯೋಗಿಸುವುದು ಹೆಚ್ಚು ಅನುಕೂಲಕರ ಎಂಬುದರಲ್ಲಿ ಬ್ಯಾಂಕು-ಬ್ಯಾಂಕುಗಳ ನಡುವೆ ಭಿನ್ನಾಭಿಪ್ರಾಯಗಳಿವೆ.

ಹೆಚ್ಚು ಬ್ಯಾಂಕುಗಳು ಮೊದಲ ಮಾದರಿಯಾದ ವಿದ್ಯುನ್ಮಾನ ಪಹಣಿ ನಮೂದು ಯಂತ್ರಗಳತ್ತ ಒಲವು ತೋರಿಸಿದರೆ, ಭಾರತೀಯ ಸ್ಟೇಟ್ ಬ್ಯಾಂಕು ಹಾಗೂ ಅದರ ಸಹವರ್ತಿ ಬ್ಯಾಂಕುಗಳು ಎರಡನೆಯ ಮಾದರಿಯ ಸೂಕ್ಷ್ಮ ಪ್ರಕ್ರಾಮಕಗಳೇ ಸದ್ಯಕ್ಕೆ ಸರಿಯಾದ ಗಣಕ ಎಂಬ ಅಭಿಪ್ರಾಯ ತಳೆದಿವೆ. ಇದಕ್ಕೆ ಅವು ಕೊಡುವ ಮುಖ್ಯ ಕಾರಣವೆಂದರೆ ಇದು: ಮೊದಲನೆಯ ಮಾದರಿಯ ಯಂತ್ರದಲ್ಲಿ ಸಾಕಷ್ಟು ಸುರಕ್ಷಿತತೆ ಇಲ್ಲ. ಅವು ಅಡ್ಡತಿಡ್ಡ ತಟ್ಟೆಗಳನ್ನು ಉಪಯೋಗಿಸುವುದರಿಂದ ದಾಖಲೆಗಳು ಹಸ್ತಕ್ಷೇಪಕ್ಕೆ (ಮೂರನೆಯವರ) ಪಕ್ಕಾಗುವ ಸಂಭವ ಉಂಟು. ಈ ಬಗ್ಗೆ ಸಾಕಷ್ಟು ಅಧ್ಯಯನ ನಡೆಸಿದ ನಂತರವೇ ಮುಂದಿನ ಕ್ರಮ ಎಂಬುದು ಅವರ ನಿಲುವು. ಶ್ರೀ ರಂಗರಾಜನ್‌ರವರು ಸಹ ಈ ಬಗ್ಗೆ ಸೂಕ್ತ ಬದಲಾವಣೆಗಾಗಿ ಅಧ್ಯಯನ ತಂಡವೊಂದನ್ನು ನೇಮಿಸುವ ಭರವಸೆಯನ್ನು ಪತ್ರಿಕಾ ಸಂದರ್ಶನವೊಂದರಲ್ಲಿ ನೀಡಿದ್ದಾರೆ. ಈ ಸುಧಾರಣೆ ಆಗಿ ಎರಡೂ ಮಾದರಿ ಗಣಕಗಳು ಪರಸ್ಪರ ಪೂರಕವಾಗಿ ಕೆಲಸ ಮಾಡುವಂತಾದಾಗ ಮಾತ್ರ ಬ್ಯಾಂಕುಗಳು ನೈಜ ಅರ್ಥದಲ್ಲಿ ಗಣಕೀಕೃತವಾದಾವು, ಕನಿಷ್ಠ-ಶಾಖಾ ಮಟ್ಟದಲ್ಲಿ.

ಶಿಕ್ಷಣ ಹಾಗೂ ತರಬೇತಿ

ರಂಗರಾಜನ್ ಸಮಿತಿಯವರು ನಿರ್ಧರಿಸಿರುವ ಗಣಕೀಕರಣದ ಗಾತ್ರ ವಾಸ್ತವಕ್ಕಿಳಿಸಲಾರದಷ್ಟು ಬೃಹತ್ತಾಗಿದೆ ಎಂಬುದು ಅದನ್ನು ಟೀಕಿಸುವವರ ಒಂದು ಅಭಿಪ್ರಾಯ. ಇದಕ್ಕೆ ಹಿನ್ನೆಲೆಯಾಗಿ ಅವರು ಕೇಳುವ ಪ್ರಶ್ನೆಗಳು ಇವು : ಒಂದು ವೇಳೆ ಗುರಿಗೆ ತಕ್ಕಷ್ಟು ಯಂತ್ರಗಳನ್ನು ಬ್ಯಾಂಕುಗಳು ಸಜ್ಜುಗೊಳಿಸಿಕೊಂಡಾಗ್ಯೂ ಅವುಗಳನ್ನು ಸಮರ್ಥವಾಗಿ ನಿರ್ವಹಿಸಬಲ್ಲ ಜನರನ್ನು ಬ್ಯಾಂಕುಗಳು ರೂಪಿಸಬಲ್ಲವೆ ? ಯಂತ್ರಗಳ ದುರಸ್ತು ಹಾಗೂ ನಿರ್ವಹಣೆಗೆ ಯಾವಾಗಲೂ ಗಣಕಗಳ ಸಂಸ್ಥೆಗಳನ್ನೇ ಅವಲಂಬಿಸಿಸಲಾಗುವುದೆ? ತರಬೇತಿ ನೀಡಬಲ್ಲಂತಹವರು ಎಷ್ಟು ಮಂದಿ ಇದ್ದಾರೆ ? ಆದರೆ ರಂಗರಾಜನ್ ಸಮಿತಿ ಈ ಅಂಶಗಳನ್ನು ಪೂರ್ಣವಾಗಿ ನಿರ್ಲಕ್ಷಿಸಿಲ್ಲ. ಖಚಿತವಾದ ಸೂಚನೆಗಳು—ತರಬೇತಿಯ ಬಗೆಗೆ—ವರದಿಯಲ್ಲಿ ಇವೆ.

ಬ್ಯಾಂಕುಗಳ ಸಿಬ್ಬಂದಿ ತರಬೇತಿ ಕೇಂದ್ರಗಳು ಈ ನಿಟ್ಟಿನಲ್ಲಿ ವಿಶೇಷ ಜವಾಬ್ದಾರಿ ಹೊರಬೇಕಾಗುತ್ತದೆ. ಗಣಕಗಳನ್ನು ತಮ್ಮ ಶಿಕ್ಷಣ ಕ್ರಮದಲ್ಲಿಯೂ ಅವು ಅಳವಡಿಸಿಕೊಳ್ಳಬೇಕಾಗುತ್ತದೆ. ಗಣಕಗಳನ್ನು ಸಿಬ್ಬಂದಿ ವರ್ಗಕ್ಕೆ ಪರಿಚಯಿಸುವುದೇ ಅಲ್ಲದೆ, ಗಣಕಗಳ ಸಹಾಯದಿಂದ ಕಲಿಯುವಿಕೆ (CAL), ಗಣಕಾಧಾರಿತ ತರಬೇತಿ (CBT) ಅಲ್ಲದೆ ಗಣಕ ಸಹಾಯದ ಶಿಕ್ಷಣ (CAF) ಮುಂತಾದ ಪದ್ಧತಿಗಳನ್ನು ಶಿಕ್ಷಣದಲ್ಲಿ ಬಳಸಬೇಕಾಗುತ್ತದೆ. ಸದ್ಯ ಇರುವ ಎಲ್ಲ ಸಿಬ್ಬಂದಿಗೂ ಗಣಕದ ಪರಿಚಯ ಸರಿಯಾದ ರೀತಿಯಲ್ಲಿ ಆದರೆ ಗಣಕೀಕರಣ ಅರ್ಧ ಯಶಸ್ವಿಯಾದಂತೆ. ಇದಕ್ಕೆ ಎರಡು ಹಂತಗಳಲ್ಲಿ ಪ್ರಯತ್ನಿಸಬಹುದು :

(ಅ) ಗಣಕಗಳು, ಅವುಗಳ ಕ್ರಮವಿಧಿಗಳು· ಬ್ಯಾಂಕಿನ ಗಣಕೀಕರಣದ ಯೋಜನೆಯ ರೂಪುರೇಷೆಗಳು ಮುಂತಾದುವನ್ನು ಗೃಹ ಪತ್ರಿಕೆಗಳ ಮೂಲಕ ಸಿಬ್ಬಂದಿ ವರ್ಗಕ್ಕೆ ನಿಯತಕಾಲಿಕವಾಗಿ ತಿಳಿಸುತ್ತಿರುವುದು.

(ಆ) ಬ್ಯಾಂಕಿನ ಎಲ್ಲ ತರಬೇತಿ ಕಾರ್ಯಕ್ರಮಗಳಲ್ಲಿ ಕೊಂಚ ಭಾಗವನ್ನು ಗಣಕ ಶಿಕ್ಷಣಕ್ಕೆ ಮೀಸಲಿಡುವುದು. ಅಲ್ಲದೆ, ಬೇರೆಲ್ಲ ವಿಷಯಗಳ ಶಿಕ್ಷಕರೂ ತಮ್ಮ ಕ್ಷೇತ್ರಗಳಲ್ಲಿ ಗಣಕಗಳ ಬಳಕೆ ಹೇಗೆ ಏಕೆ ಮುಂತಾದವನ್ನು ಅಭ್ಯರ್ಥಿಗಳಿಗೆ ತಿಳಿಸುವುದನ್ನು ಪಥ್ಯವಾಗಿಸುವುದು.

ಬ್ಯಾಂಕಿನ ಉನ್ನತ ಅಧಿಕಾರಿಗಳಿಗೆ ಕೂಡ ಆಗಾಗ ಕಮ್ಮಟ, ವಿಚಾರಸಂಕಿರಣ ಮುಂತಾದವುಗಳ ಮೂಲಕ ಗಣಕ ತಂತ್ರಜ್ಞಾನದ ಬಗೆಗೆ ಮಾಹಿತಿಯನ್ನು ಒದಗಿಸುತ್ತಿರಬೇಕು. ಪ್ರತಿ ವರ್ಷ ವ್ಯವಸ್ಥಾಪಕ ಹುದ್ದೆಯಲ್ಲಿರುವ, ಕನಿಷ್ಠ ಸಾವಿರ ಜನಕ್ಕಾದರೂ NIBM ತರಬೇತಿ ಕೇಂದ್ರಗಳಂತಹ ಸಂಸ್ಥೆಗಳ ಮೂಲಕ ಗಣಕ ಶಿಕ್ಷಣದ ವ್ಯವಸ್ಥೆಯಾಗಬೇಕು. ಹೀಗೆ ಶಿಕ್ಷಣ ಪಡೆದವರನ್ನು, ಪರಿಣತರನ್ನು ಆ ಕ್ಷೇತ್ರದಲ್ಲಿಯೇ ಉಪಯೋಗಿಸಿಕೊಳ್ಳುವುದು ಅತ್ಯಾವಶ್ಯಕ. ಬ್ಯಾಂಕುಗಳಲ್ಲಿ ಯಾವ ಕ್ಷೇತ್ರದಲ್ಲಿ ಓರ್ವ ವ್ಯಕ್ತಿ ಪರಿಣತಿ ಪಡೆದಿರುತ್ತಾನೋ ಅದರ ಹೊರತಾಗಿಯೇ ಅವನನ್ನು ಬಳಸುವ ಪರಿಪಾಠವಿದೆ. ಇದು ತಪ್ಪಬೇಕು, ಕನಿಷ್ಠ ಗಣಕಗಳ ಮಟ್ಟಿಗಾದರೂ.

ಕಂಪ್ಯೂಟರ್ ವಂಚನೆಗಳು, ಅಪರಾಧಗಳು

ಬ್ಯಾಂಕುಗಳ ಆಡಳಿತ ವರ್ಗಗಳಿಗೆ ಗಣಕೀಕರಣದ ಬಗೆಗೆ ಕೇವಲ ಅನಾಸಕ್ತಿ, ನಿರುತ್ಸಾಹಗಳೇ ಅಲ್ಲದೆ ಒಂದು ರೀತಿಯ ಭಯವೂ ಇರುವಂತೆ ತೋರುತ್ತದೆ. ಅದು ಗಣಕ ವಂಚನೆಗಳ ಬಗೆಗೆ. ಇದು ಒಂದು ರೀತಿಯಲ್ಲಿ ಸಹಜ. ಏಕೆಂದರೆ ಗಣಕದ

ಮೂಲಕ ಆಗುವ ವಂಚನೆಗಳು ಪತ್ತೆಯಾಗುವುದೇ ಕಷ್ಟ. ಅಲ್ಲದೆ ಇಂತಹ ಅಪರಾಧಗಳಿಂದ ಬ್ಯಾಂಕಿಗೆ ಆಗಬಹುದಾದ ನಷ್ಟ ಸಾಕಷ್ಟು ದೊಡ್ಡ ಪ್ರಮಾಣದ್ದಾಗಿರುತ್ತದೆ. ಗಣಕಗಳನ್ನು ತುಂಬ ವ್ಯಾಪಕವಾಗಿ ಬಳಸುವ ಅಮೆರಿಕದಲ್ಲಿ ಇಂತಹ ಅಪರಾಧವೊಂದರಿಂದ ದೊಡ್ಡ ಕಂಪನಿಗೆ ಆಗುವ ಸರಾಸರಿ ನಷ್ಟ ಆರು ಲಕ್ಷ ಡಾಲರುಗಳು ಹಾಗೂ ಬ್ಯಾಂಕುಗಳಿಗೆ ಇಂತಹ ಅಪರಾಧಗಳಿಂದಾಗಿ ಉಂಟಾಗುವ ಸರಾಸರಿ ನಷ್ಟ ಎರಡು ಲಕ್ಷ ಡಾಲರುಗಳೆಂದೂ ಕ್ಯಾಲಿಫೋರ್ನಿಯದ ಸ್ಟ್ಯಾನ್‌ಫರ್ಡ್ ಸಂಶೋಧನ ಸಂಸ್ಥೆ ನಡೆಸಿರುವ ಸಮೀಕ್ಷೆಯಿಂದ ತಿಳಿದು ಬಂದಿದೆ. ರಕ್ಷಣಾ ವ್ಯವಸ್ಥೆಯಲ್ಲಿನ ದೋಷಗಳು ಅವಕ್ಕಿಂತ ಹೆಚ್ಚಾಗಿ ಅವುಗಳ ಬಗ್ಗೆ ಸರಿಯಾಗಿ ಗಮನ ಹರಿಸದಿರುವುದು ಇದಕ್ಕೆ ಮುಖ್ಯ ಕಾರಣವೆಂದು ಸಮೀಕ್ಷೆ ತಿಳಿಸುತ್ತಿದೆ.

ಭಾರತೀಯ ಬ್ಯಾಂಕುಗಳು ಗಣಕೀಕರಣದ ಹಾದಿಯಲ್ಲಿ ಇನ್ನೂ ಮೊದಲ ಹೆಜ್ಜೆಗಳನ್ನಿಡುತ್ತಿರುವುದರಿಂದ ಇಂತಹ ಅಧ್ಯಯನಗಳ ಬೆಳಕಿನಲ್ಲಿ ಸೂಕ್ತ ರಕ್ಷಣಾ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಬಲ್ಲವಾಗಿವೆ.

ವಿದ್ಯುಚ್ಛಕ್ತಿ ಸದಾ ಒಂದೇ ತೀವ್ರತೆಯಲ್ಲಿ ಪ್ರವಹಿಸುವ ವ್ಯವಸ್ಥೆ, ಹಾಗೂ ಧೂಳಿನ ಕಣಗಳು ಗಣಕದ ಪ್ರಮುಖ ಭಾಗಗಳಿಗೆ ತಲಪುವುದನ್ನು ತಪ್ಪಿಸಲೋಸುಗ ಹವಾನಿಯಂತ್ರಣ ವ್ಯವಸ್ಥೆಗಳನ್ನು ಗಣಕಗಳಿಗೆ ಒದಗಿಸುವುದು ಪ್ರಾಥಮಿಕ ಸುರಕ್ಷಣಾ ಕ್ರಮಗಳಾಗಿವೆ. ವಿದ್ಯುಚ್ಛಕ್ತಿಯ ಉತ್ಪಾದನೆ ಸಾಕಷ್ಟಿಲ್ಲದ ನಮ್ಮ ದೇಶದಲ್ಲಿ ಇದೂ ಒಂದು ಸಮಸ್ಯೆಯಾಗಬಹುದು. ಇದಕ್ಕೆ ಪರ್ಯಾಯ ವ್ಯವಸ್ಥೆಯನ್ನು ಬ್ಯಾಂಕುಗಳು ರೂಪಿಸಿಕೊಳ್ಳಬೇಕಾಗುತ್ತದೆ. ಇನ್ನು ಗಣಕದ ಚಾಲನೆಗೆ ಬೇಕಾಗುವ ನುಡಿಗಟ್ಟುಗಳು. 'ಸೆಸೇಮ್, ಬಾಗಿಲು ತೆರೆ' ಎಂದು ಆಲಿಬಾಬನ ತರಹ ನಾವು ಮಂತ್ರವೊಂದನ್ನು ಗಣಕಕ್ಕೆ ಊಡಿದಾಗಲೇ ಅದು ಮುಂದೆ ನಮ್ಮ ಮಾತನ್ನು ಕೇಳುತ್ತದೆ. ಇಲ್ಲದಿದ್ದರೆ ಇಲ್ಲ. ಆದರೆ 'ಸೆಸೇಮ್ ಬಾಗಿಲು ತೆರೆ' ಎನ್ನುವುದು ಯಾವ ಕಾಸಿಮನಿಗೂ ತಿಳಿಯಬಾರದು ಅಷ್ಟೆ. ಇದರ ಸಲುವಾಗಿ ಅನೇಕ ವಿಧಾನಗಳಿವೆ. ಗಣಕದಲ್ಲಿರುವ ಮಾಹಿತಿ, ದತ್ತಾಂಶಗಳ ಮಹತ್ವದ ಹಿನ್ನೆಲೆಯಲ್ಲಿ ಸಂಕೇತ ಪದಗಳನ್ನೂ (Pass words) ಇತರೆ ರಕ್ಷಣಾ ವ್ಯವಸ್ಥೆಯನ್ನೂ ರೂಪಿಸಬೇಕಾಗುತ್ತದೆ. ಉದಾಹರಣೆಗೆ, ಇಂತಹ ಒಂದು ವ್ಯವಸ್ಥೆಯಲ್ಲಿ ನಿರ್ದಿಷ್ಟ ವ್ಯಕ್ತಿಗಳು ಮಾತ್ರ ಗಣಕಗಳನ್ನು ನಿರ್ವಹಿಸಬೇಕೆಂದಿಟ್ಟುಕೊಳ್ಳಿ. ಆಗ ಗಣಕದ ಕೋಣೆಯ ಬಾಗಿಲು ತೆರೆಯಲು ಅವರು ತಮ್ಮ ಬೆರಳಚ್ಚನ್ನು ಬಾಗಿಲ ಮೇಲೆ ಮೂಡಿಸಬೇಕಾಗುತ್ತದೆ. ಮೊದಲೇ ಇರುವ ಬೆರಳಚ್ಚುಗಳಿಗೆ ಇದು ಹೊಂದಿಕೆಯಾದರೆ ಅವರಿಗೆ ಗಣಕ ಸ್ವಾಗತವನ್ನಿತ್ತು ಒಳಗೆ ಬರಮಾಡಿಕೊಳ್ಳುತ್ತದೆ. ಇಲ್ಲವಾದರೆ ಪ್ರವೇಶ ನಿಷಿದ್ಧ. ಇನ್ನು ಕೆಲ ವ್ಯವಸ್ಥೆಗಳಲ್ಲಿ ಗಣಕ ಚಾಲಕರು ಧರಿಸುವ ಸಂಕೇತಪಟ್ಟಿಯನ್ನೇ ಗಣಕಗಳು ಗುರುತಾಗಿ ಗ್ರಹಿಸಬಲ್ಲವಾಗಿರುತ್ತವೆ. ಇಂತಹ ವಿಧಾನಗಳು ದಿನದಿನಕ್ಕೂ ಸುಧಾರಣೆಗೊಳ್ಳುತ್ತಿರುತ್ತವೆ. ಹಾಗೆಯೇ ಇಂದು ಬಹಳ ದುಬಾರಿ ಎನಿಸಿದ ವ್ಯವಸ್ಥೆಗಳೂ ಒಂದು ದಿನ ಬಹಳ ಅಗ್ಗವಾಗಿ ಎಲ್ಲರಿಗೂ ದೊರೆಯುವ ಹಾಗಾಗುತ್ತದೆ. ಸಂಕೇತ ಪದಗಳಿಗೆ ಸಂಬಂಧಿಸಿದಂತೆ ಅಮೆರಿಕದಲ್ಲಿ ಇತ್ತೀಚೆಗೆ ಕಂಡುಬರುವ ವಿದ್ಯಮಾನವೊಂದನ್ನು ಗಮನಿಸಬಹುದು. ಹದಿಹರೆಯದ ಹವ್ಯಾಸಿ ಗಣಕತಜ್ಞರು—ಇವರನ್ನು ಹ್ಯಾಕರ್ಸ್ ಎನ್ನುತ್ತಾರೆ—ದೊಡ್ಡ ದೊಡ್ಡ ಗಣಕಜಾಲಗಳನ್ನು ಭೇದಿಸಿದ ಉದಾಹರಣೆಗಳು ಅಮೆರಿಕದಲ್ಲಿ ಹೇರಳ. ಜುಲೈ 1985ರಲ್ಲಿ ಅಮೆರಿಕದ ಮಿಲಿಟರಿ ಉಪಗ್ರಹದ ಸಂಪರ್ಕ ಸಾಧಿಸಿದ್ದು ಉಲ್ಲೇಖನೀಯ.

ಒಂದೊಂದೇ ಉದರಿ ಕಾರ್ಡ್ ಹಾಗೂ ಸಂಕೇತ ಪದಗಳನ್ನು ಕದಿಯುತ್ತ ಹೋದ ಇವರು ಅವುಗಳನ್ನು ಉಪಯೋಗಿಸುತ್ತ, ದೊರೆತ ದಾಖಲೆಗಳನ್ನು ಅಡ್ಡತಿಡ್ಡ ತಟ್ಟೆಗಳಲ್ಲಿ (Floppy disc) ಹಿಡಿದಿಡುತ್ತ ಮುಂದುವರಿದು ಆಯುಧ ಸಜ್ಜಿತ ಟ್ಯಾಂಕ್‌ನ ಬಿಡಿಭಾಗಗಳನ್ನು ಪೂರೈಸುವ ಕಂಟ್ರಾಕ್ಟರ್‌ರೊಬ್ಬರ ದೂರವಾಣಿ ಸಂಖ್ಯೆಯನ್ನು ಕಂಡುಹಿಡಿದು ಅದರ ಪೂರ್ಣ ಪ್ರಯೋಜನವನ್ನು ಉಪಗ್ರಹ ಸಂಪರ್ಕಕ್ಕೆ ಬಳಸಿ ವಿವರವನ್ನು ಪ್ರಕಟಿಸಿದರು. ತತ್‌ಕ್ಷಣ ಇವರನ್ನು ದಸ್ತಗಿರಿಮಾಡಲಾಯಿತೆಂಬುದು ಬೇರೆ ವಿಚಾರ. ಇಂತಹವರುಗಳ ಸಂಘವೊಂದು ಅಮೆರಿಕದಲ್ಲಿ ರೂಪುಗೊಂಡಿದ್ದು, ಅಲ್ಲಿಗೆ ಪ್ರವೇಶ ಪಡೆಯಬಯಸುವವರು ದುಸ್ಸಾಹಸಗಳನ್ನೆಸಗಿ, ಅಮೂಲ್ಯ ಮಾಹಿತಿಯನ್ನು ಸ್ವತಂತ್ರವಾಗಿ ಸಂಗ್ರಹಿಸಬೇಕಾಗುತ್ತದೆ. ಅನಂತರವೇ ಸಂಘದಲ್ಲಿ ಪ್ರವೇಶ. ಸಂಘದ ಗಣಕಜಾಲಕ್ಕೆ ತಮ್ಮ ಗಣಕವನ್ನು ಜೋಡಿಸಲಗತ್ಯವಾದ ಸೆಸೇಮ ರಹಸ್ಯವನ್ನು ತಿಳಿಸಲಾಗುತ್ತದೆ. ಇವರ ವ್ಯವಸ್ಥೆಯನ್ನು ಭೇದಿಸುವುದು ದುಸ್ಸಾಧ್ಯವೆನಿಸಿದೆ. ಇಂತಹ ಸಂಘದ ಸದಸ್ಯರನ್ನು ಪತ್ತೆಹಚ್ಚಿದ ನ್ಯೂಸ್‌ವೀಕ್ ಪತ್ರಿಕೆಯ ವರದಿಗಾರರ ಉದರಿಕಾರ್ಡ್ ಹಾಗೂ ಸಾಮಾಜಿಕ ಭದ್ರತಾ ಕಾರ್ಡುಗಳ ಸಂಖ್ಯೆಗಳನ್ನು ಕದ್ದು ಪ್ರಕಟಣೆ ಮಾಡಲಾಯಿತು!

ಇವನ್ನೆಲ್ಲ ಮೀರಿ ಕೂಡ ಬ್ಯಾಂಕುಗಳ ಗಣಕಗಳಿಗೆ ರಕ್ಷಣಾಕ್ರಮಗಳನ್ನು ರೂಪಿಸುವುದು ಸಾಧ್ಯ. ಸರಿಯಾದ ನಿಟ್ಟಿನಲ್ಲಿ ಬ್ಯಾಂಕುಗಳು ಕಾರ್ಯಪ್ರವೃತ್ತವಾಗಬೇಕು ಅಷ್ಟೆ.

ತೀರುವೆ ವ್ಯವಸ್ಥೆ

ಸಿಬ್ಬಂದಿ ವರ್ಗದಿಂದ ಹೆಚ್ಚಿನ ಪ್ರತಿರೋಧವಿಲ್ಲದೆ ತೀರುವೆ ವ್ಯವಸ್ಥೆಯ ಗಣಕೀಕರಣವನ್ನು ಹಂತಹಂತವಾಗಿ ಸಾಧಿಸಲಾಗುತ್ತಿದೆ. ಸದ್ಯ ದೇಶದ ನಾಲ್ಕು ಪ್ರಮುಖ ನಗರಗಳಲ್ಲಿ—ಕಲ್ಕತ್ತ, ಬೊಂಬಾಯಿ, ಅಹ್ಮದಾಬಾದು ಹಾಗೂ ದೆಹಲಿ—'ಕಾಂತೀಯ ಮಸಿಲಿಪಿಗ್ರಹಣ' ಚೆಕ್ಕುಗಳನ್ನು ಗಣಕದ ಮೂಲಕ ತೀರುವೆ ಮಾಡಲಾಗುತ್ತದೆ. ಇದು ಇಷ್ಟರಲ್ಲಿಯೇ ದೇಶದ ಇತರ ಪ್ರಮುಖ ಕೇಂದ್ರಗಳಿಗೂ ವಿಸ್ತರಣೆಯಾಗುತ್ತದೆ. ಆದರೆ ಅಂತರ ನಗರ ತೀರುವೆ ವ್ಯವಸ್ಥೆಯನ್ನು ಗಣಕೀಕರಿಸಿದಾಗ ಮಾತ್ರ ತೀರುವೆ ವ್ಯವಸ್ಥೆಯ ಸಮಗ್ರ ಗಣಕೀಕರಣವಾದಂತಾಗಿ, ಗ್ರಾಹಕರಿಗೆ ನಿಜವಾದ ಲಾಭ ದೊರಕಿದಂತಾಗುತ್ತದೆ.

ಗ್ರಾಹಕ ಸೇವೆ, ಗಣಕ ಜಾಲಗಳು

ಗಣಕೀಕರಣದಿಂದ ಬ್ಯಾಂಕುಗಳಿಗೆ ಅನೇಕ ಪ್ರಯೋಜನಗಳಿವೆ. ಆಡಳಿತಾತ್ಮಕವಾಗಿ, ಅದಕ್ಕಿಂತ ಹೆಚ್ಚಾಗಿ ಗ್ರಾಹಕರಿಗೆ, ಅವು ಗಣಕಗಳ ಉಪಯುಕ್ತತೆಯನ್ನು ತಲಪಿಸಬಲ್ಲವು. ಗ್ರಾಹಕರ ಪ್ರಮುಖ ದೂರುಗಳಾದ, ಖಾತೆಯ ಲೆಕ್ಕ ತಃಖ್ತೆಗಳು, ಅವುಗಳಲ್ಲಿನ ದೋಷಗಳು, ಸ್ಥಳೀಯ ತೀರುವೆ ಹಾಗೂ ಸೇವಾ ವಿಳಂಬ ಇವುಗಳನ್ನು ಖಂಡಿತವಾಗಿ ಬ್ಯಾಂಕುಗಳು ಸುಲಭವಾಗಿ ಪರಿಹರಿಸಬಲ್ಲವು.

ಸ್ವಯಂಚಲೀ ಟೆಲ್ಲರ್ ಯಂತ್ರ (ATM) ಹಾಗೂ ಗಣಕ ಜಾಲದ ಸದಸ್ಯತ್ವಗಳು ಗ್ರಾಹಕರಿಗೆ ಮತ್ತಷ್ಟು ಪ್ರಯೋಜಕವಾಗಬಲ್ಲವು. ಮೊದಲನೆಯದು ನಗದು ಪಡೆದುಕೊಳ್ಳುವಲ್ಲಿ ಎಲ್ಲ ಗ್ರಾಹಕರಿಗೂ ಉಪಯುಕ್ತವಾದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಅವನ್ನು ಅಳವಡಿಸಬೇಕಾಗುತ್ತದೆ. ಎರಡನೆಯದು ಗ್ರಾಹಕರಿಗೇ ಗಣಕವನ್ನು ಪೂರೈಸಿ, ತಮ್ಮ ಗಣಕಜಾಲದೊಂದಿಗೆ ಸಂಪರ್ಕಿಸುವುದರ ಮೂಲಕ ಗ್ರಾಹಕರು ತಾವಿರುವಲ್ಲಿಂದಲೇ ಬ್ಯಾಂಕಿಂಗ್ ವ್ಯವಹಾರಗಳನ್ನು ನಡೆಸಲು ಅನುವುಮಾಡಿಕೊಡುತ್ತದೆ. ಇದಕ್ಕೆ ಸಾಕಷ್ಟು ಬೇಡಿಕೆ ಬರಬೇಕು ಅಷ್ಟೆ. ಮುಂಬಯಿಯಲ್ಲಿ ಈಚೆಗೆ ವಿದೇಶಿ ಬ್ಯಾಂಕೊಂದು (Chartered Bank) ಈ ವ್ಯವಸ್ಥೆಯನ್ನು ಪ್ರಾರಂಭಿಸಿದೆ. ಭಾರತೀಯ ಬ್ಯಾಂಕುಗಳೂ ಇದನ್ನು ಅನುಸರಿಸಿದರೆ ಆಶ್ಚರ್ಯವೇನಿಲ್ಲ.

ಭವಿಷ್ಯ

ಭಾರತದಲ್ಲಿ ವಿದ್ಯುನ್ಮಾನ ಬ್ಯಾಂಕಿಂಗಿನ ಪ್ರಗತಿ ವಿದ್ಯುದ್ವೇಗದಲ್ಲಿಲ್ಲ ನಿಜ. ಆದರೆ ಭವಿಷ್ಯದಲ್ಲಿ ಮಾತ್ರ ನಿಧಾನ ಸಲ್ಲ ಹಾಗೂ ಕಷ್ಟಸಾಧ್ಯ. ಒಮ್ಮೆ ನಾವು ವಿದ್ಯುನ್ಮಾನ ಯುಗಕ್ಕೆ ಕಾಲಿಟ್ಟೆವೆಂದರೆ ಅದೇ ನಮ್ಮನ್ನು ವೇಗವಾಗಿ ಮುಂದಕ್ಕೆ ಕೊಂಡೊಯ್ಯುತ್ತದೆ. ಹಿಂದಿನ ವ್ಯವಸ್ಥೆಗೆ ನಾವು ವಾಪಸಾಗಲಾರೆವು. ಈ ನಿಟ್ಟಿನಲ್ಲಿ ನಮ್ಮ ಯೋಜನೆಗಳನ್ನು ರೂಪಿಸಬೇಕಾಗುತ್ತದೆ.

[13ನೆಯ ಪುಟದ 3ನೆಯ ಅಂಕಣ ನೋಡಿ

ನಗರದ ಬಡಜನರಿಗೆ ಸ್ವಯಂ ಉದ್ಯೋಗ ಕಾರ್ಯಕ್ರಮ

ಗ್ರಾಮೀಣ ಪ್ರದೇಶದ ಬಡಜನರದು ಒಂದು ಬಗೆಯ ಸಮಸ್ಯೆಯಾದರೆ ನಗರಪ್ರದೇಶದವರದು ಇನ್ನೊಂದು ಬಗೆ. ಎರಡಕ್ಕೂ ಅನುಸರಿಸಬೇಕಾದ ವಿಧಿ ವಿಧಾನಗಳು ಬೇರೆಬೇರೆ. ನಗರಪ್ರದೇಶದ ಬಡಜನರ ಸ್ವಯಂ ಉದ್ಯೋಗ ಸಾಧನೆಗಾಗಿ ಇತ್ತೀಚೆಗೆ ಭಾರತ ಸರ್ಕಾರ ಹಮ್ಮಿಕೊಂಡ ಕಾರ್ಯಕ್ರಮದ ನಿಷ್ಪಕ್ಷಪಾತವಾದ ವಿವೇಚನೆ ಇಲ್ಲಿದೆ.

ಬಿ. ಎಸ್. ಚಂದ್ರಶೇಖರ

ಅಧಿಕಾರಿ, ಭಾರತೀಯ ಸ್ಟೇಟ್ ಬ್ಯಾಂಕ್
ರಾಯಚೂರು

ಬಡಜನರಿಗೆ ಸಾಮಾಜಿಕ ನ್ಯಾಯ ದೊರಕಿಸಿಕೊಡುವುದು ಸರಕಾರದ ಕರ್ತವ್ಯಗಳಲ್ಲಿ ಪ್ರಮುಖವಾಗಿದ್ದು ಇತ್ತೀಚೆಗೆ ಈ ಕರ್ತವ್ಯ ಬ್ಯಾಂಕರರ ಹೆಗಲು ಹತ್ತಿರುವುದು ಅಥವಾ ಹಾಗೆ ಭಾಸವಾಗುತ್ತಿರುವುದು ಭಾರತದ ರಾಜಕೀಯ-ಆರ್ಥಿಕ ಸಂದರ್ಭದಲ್ಲಿ ಒಂದು ಕುತೂಹಲಕಾರಿ ಬೆಳವಣಿಗೆ. ಬಡತನ ಹಾಗೂ ನಿರುದ್ಯೋಗಗಳ ಸಮಸ್ಯೆ ಅಗಾಧ. ಅವನ್ನು ನಿವಾರಿಸಲು ಸರಕಾರ ಕೈಗೊಂಡ ಹಲವಾರು ಯೋಜನೆಗಳಲ್ಲಿ ಬ್ಯಾಂಕುಗಳದು ಮುಖ್ಯ ಪಾತ್ರ. ಯೋಜನೆಗಳ ಅನುಷ್ಠಾನದಲ್ಲಿ ಬ್ಯಾಂಕುಗಳಿಗೆ ಅನೇಕ ಎಡರು ತೊಡರುಗಳು, ಭಿನ್ನಕ ಬಡ್ಡಿದರ ಯೋಜನೆ, ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮ, ವಿದ್ಯಾವಂತ ನಿರುದ್ಯೋಗಿಗಳಿಗೆ ಸ್ವಯಮುದ್ಯೋಗ ಯೋಜನೆಯೇ ಮುಂತಾದ ಸರಕಾರದ ಯೋಜನೆಗಳನ್ನು ಯಶಸ್ವಿಗೊಳಿಸಲು ಅಗತ್ಯವಾದ ಸಿಬ್ಬಂದಿ, ಇತರ ಸರಕಾರಿ ಅಭಿಕರಣಗಳ ಸಹಕಾರ ಹಾಗೂ ಆರ್ಥಿಕ ಅಧೋರಚನೆ ಇವುಗಳ ತೀವ್ರ ಕೊರತೆಯಿಂದ ಬ್ಯಾಂಕ್ ಸಾಲಗಳ ಮರುಪಾವತಿಯ ದರ ಕುಂಠಿತಗೊಂಡಿದ್ದುದರ ಪರಿಣಾಮವಾಗಿ ಅಸ್ವಸ್ಥತೆಯ ಸ್ಪಷ್ಟ ಸೂಚನೆಗಳನ್ನು ಪ್ರಕಟಿಸುತ್ತಿರುವ ಮತ್ತು ಸಾಲ ನೀಡಿಕೆಯಲ್ಲಿ ರಾಜಕೀಯ ಹಸ್ತಕ್ಷೇಪದಿಂದ ತಲ್ಲಣಿಸುತ್ತಿರುವ ಬ್ಯಾಂಕುಗಳು ಒಂದೆಡೆ; ಆಳುವ ಸರಕಾರದ ಪ್ರತಿನಿಧಿಗಳು ವೇದಿಕೆಗಳಲ್ಲಿ ತೋರುವ ಉದಾರ ಮನೋಭಾವ, ಹೊಸ ಹೊಸ ಯೋಜನೆಗಳು ಒಡ್ಡುವ ಆಮಿಷಗಳು ಮತ್ತು ಮಧ್ಯವರ್ತಿಗಳ ಪ್ರಭಾವ – ಇವೇ ಮುಂತಾದುವುಗಳಿಂದಾಗಿ ಬ್ಯಾಂಕುಗಳಿಂದ ಹೆಚ್ಚು ಹೆಚ್ಚು ನಿರೀಕ್ಷಿಸುವ ಅವಿದ್ಯಾವಂತ ಬಡಜನತೆ ಇನ್ನೊಂದೆಡೆ. ಇಂಥ ವಿಷಮ ಸನ್ನಿವೇಶದಲ್ಲಿ ನಗರ, ಪಟ್ಟಣ ಹಾಗೂ ಅರೆಪಟ್ಟಣ ಪ್ರದೇಶದಲ್ಲಿ ವಾಸಿಸುವ ಬಡಜನರಿಗಾಗಿ ಸ್ವಯಂ ಉದ್ಯೋಗ ಕಲ್ಪಿಸಲು ಯೋಜನೆಯೊಂದು ರೂಪಿತವಾಗಿ ಅದನ್ನು ಅನುಷ್ಠಾನಕ್ಕೆ ತರಲು ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳಿಗೆ ಆದೇಶ ಬಂದಿದೆ.

ಉದ್ದೇಶ

1961ರ ಜನಗಣತಿಯ ಮೇರೆಗೆ 10,000ಕ್ಕಿಂತ ಹೆಚ್ಚಿನ ಜನಸಂಖ್ಯೆಯುಳ್ಳ ನಗರ, ಪಟ್ಟಣ, ಅರೆಪಟ್ಟಣ ಪ್ರದೇಶಗಳಲ್ಲಿ ದಾರಿದ್ರ್ಯರೇಖೆಯಡಿ ಜೀವಿಸುವ ಅರ್ಹ ಕುಟುಂಬಗಳು ಬ್ಯಾಂಕ್ ಉದರಿ ಮತ್ತು ಸಹಾಯಧನದ ನೆರವಿನಿಂದ ಸ್ವಯಂ ಉದ್ಯೋಗ ಕೈಗೊಳ್ಳಲು ಸಾಧ್ಯವಾಗುವಂತೆ ಮಾಡುವುದೇ ಈ ಯೋಜನೆಯ ಉದ್ದೇಶವೆನ್ನಲಾಗಿದೆ. ಈ ಯೋಜನೆ 1-9-1986ರಿಂದ ಜಾರಿಗೆ ಬಂದಿದೆ.

ಯೋಜನೆಯ ನಾಮರೂಪಗಳು

'ಪಟ್ಟಣಪ್ರದೇಶದ ಬಡಜನರಿಗೆ ಸ್ವಯಂ ಉದ್ಯೋಗ ಯೋಜನೆ' (SEPUP) ಎಂಬುದು ಈ ಯೋಜನೆಯ ಶಿರೋನಾಮ. ಈ ಯೋಜನೆಯ ಅನುಷ್ಠಾನದಲ್ಲಿ ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳು ಮಾತ್ರ ಭಾಗವಹಿಸತಕ್ಕದ್ದು. ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ ಜಾರಿಯಲ್ಲಿರುವ ಸ್ಥಳಗಳಿಗೆ ಈ ಯೋಜನೆ ಅನ್ವಯಿಸುವುದಿಲ್ಲ. ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ – ಪ್ರತಿ 500 ಜನಸಂಖ್ಯೆಗೆ ಒಂದಕ್ಕಿಂತ ಹೆಚ್ಚಾಗದಂತೆ ಈ ಯೋಜನೆಯಡಿ ಸಾಲ ನೀಡಲಾಗುವುದು ಮತ್ತು ಘಟಕದ ವೆಚ್ಚವನ್ನಾಧರಿಸಿ ರೂ. 5,000 ವರೆಗಿನ ಆರ್ಥಿಕ ನೆರವು ನೀಡಲು ಈ ಯೋಜನೆಯಲ್ಲಿ ಸಾಧ್ಯವಿದೆ.

ಬಡ್ಡಿದರ, ಭದ್ರತೆ, ಮರುಪಾವತಿ

ಈ ಯೋಜನೆಯಲ್ಲಿ ಪಡೆದುಕೊಂಡ ಸಾಲವು ಅರ್ಧ ವಾರ್ಷಿಕವಾಗಿ ವಿಧಿಸುವ ಸಾ. ಶೇ. 10ರ ಬಡ್ಡಿಯೊಡನೆ 33 ಸಮಾನ ಕಂತುಗಳಲ್ಲಿ ಮರುಪಾವತಿಯುಕ್ತವಾಗುತ್ತದೆ. ಇಲ್ಲಿ ಮೂರು ತಿಂಗಳ ಆರಂಭಿಕ ಅವಧಿಯನ್ನು ಕಡ್ಡಾಯವಾಗಿ ನೀಡಬೇಕೆಂದು ಸೂಚಿಸಲಾಗಿದೆ. ಸಾಲಗಾರನಿಂದ ಯಾವುದೇ ರೀತಿಯ ಮಾರ್ಜಿನ್ ಹಣ, ಆನುಷಂಗಿಕ ಭದ್ರತೆ ಅಥವಾ ಜಾಮೀನನ್ನು ಪಡೆಯುವಂತಿಲ್ಲ. ಬ್ಯಾಂಕಿನ ಸಾಲದಿಂದ ಉಂಟುಮಾಡಿದ ಆಸ್ತಿ ಸಾಲಕ್ಕೆ ಏಕಮಾತ್ರ ಆಧಾರ.

ಈ ಸೌಲಭ್ಯ ಯಾರಿಗುಂಟು ?

ಭಾರತದ ರಿಸರ್ವ್ ಬ್ಯಾಂಕ್ ಸೂಚಿಸಿರುವ ಪಟ್ಟಿಯೊಂದರಲ್ಲಿ (ಅನುಬಂಧ 1 ನೋಡಿ) ತಿಳಿಸಲಾದ ಚಟುವಟಿಕೆಗಳಲ್ಲಿ ಅಥವಾ ಅಂಥದೇ ಇತರ ಚಟುವಟಿಕೆಗಳಲ್ಲಿ ತೊಡಗಬಯಸುವ, ಈ ಮುಂದಿನ ನಿಯಮಗಳಿಗೆ ಒಳಪಡುವ ಅಭ್ಯರ್ಥಿಗಳು ಸಾಲಸೌಲಭ್ಯಕ್ಕೆ ಅರ್ಹತೆಯನ್ನು ಪಡೆಯುತ್ತಾರೆ:

1 ಅಭ್ಯರ್ಥಿಯು 10,000ಕ್ಕಿಂತ ಹೆಚ್ಚಿನ ಜನಸಂಖ್ಯೆಯುಳ್ಳ ಭಾರತದ ಯಾವುದೇ ನಗರ/ಪಟ್ಟಣ/ಅರೆಪಟ್ಟಣದ ಶಾಶ್ವತ ನಿವಾಸಿಯಾಗಿರಬೇಕು ಮತ್ತು ಕಳೆದ 3 ವರ್ಷಗಳಿಂದ ಅಲ್ಲಿಯೇ ವಾಸಮಾಡಿರಬೇಕು. ಈ ಕುರಿತ ಅರ್ಜಿದಾರನ ಒಂದು ಘೋಷಣೆ ಸಾಲದ ಅರ್ಜಿಯ ಜತೆಗಿರಬೇಕು.

2 ಅಭ್ಯರ್ಥಿ ಸದಸ್ಯನಾಗಿರುವ ಕುಟುಂಬಕ್ಕೆ ನೀಡಿರುವ ಪಡಿತರ ಕಾರ್ಡ್‌ನಲ್ಲಿ ಅವನ/ಅವಳ ಹೆಸರು ಇರಬೇಕು. (ಬ್ಯಾಂಕು ಅವರಿಗೆ ಸಾಲ ನೀಡುವಾಗ ಹಾಗೆ ನೀಡಿದುದರ ಗುರುತಾಗಿ ಬ್ಯಾಂಕಿನ ರಬ್ಬರ್ ಮೊಹರನ್ನು ಪಡಿತರ ಕಾರ್ಡಿನಲ್ಲಿ ಫಲಾನುಭವಿಯ ಹೆಸರಿನ ಬಳಿ ಒತ್ತಬೇಕು.)

3 ಫಲಾನುಭವಿಯ ಕುಟುಂಬದ ಆದಾಯ ತಿಂಗಳಿಗೆ ರೂ. 600ಕ್ಕಿಂತ ಅಧಿಕವಾಗಿರಬಾರದು.

ಸಾಲದ ಅರ್ಜಿಯ ಜತೆಗೆ ಈ ಬಗೆಗೆ ನಿಗದಿತ ನಮೂನೆಯಲ್ಲಿ ಒಂದು ಘೋಷಣಾ ಪತ್ರ ಪಡೆಯಬೇಕು; ಯಾವುದೇ ಬ್ಯಾಂಕಿಗೆ ಕಟಬಾಕಿದಾರನಲ್ಲವೆಂದೂ ಉದ್ಯೋಗಕ್ಕಾಗಿ ಯಾವುದೇ ಯೋಜನೆಯಡಿ ಸಾಲ ಪಡೆದಿಲ್ಲವೆಂದೂ ಅರ್ಜಿದಾರ ಘೋಷಿಸಬೇಕು. (ಅನುಬಂಧ 2 ನೋಡಿ)

4 ಉದ್ದೇಶಿತ ಚಟುವಟಿಕೆಯನ್ನು ನಿರ್ವಹಿಸಲು ಅಗತ್ಯವಾದ ಮನೋಭಾವ ಮತ್ತು ಪೂರ್ವಾನುಭವ ಇವುಗಳನ್ನು ಗಮನಿಸಿ ಬ್ಯಾಂಕುಗಳು ಫಲಾನುಭವಿಗಳನ್ನು ಗುರುತಿಸಬೇಕು.

ಕಾರ್ಯವಿಧಾನ

ಈ ಯೋಜನೆಯನ್ನು ಕಾರ್ಯಗತಗೊಳಿಸುವ ವಿಧಾನವನ್ನು ರಿಸರ್ವ್ ಬ್ಯಾಂಕಿನ ಸುತ್ತೋಲೆ ಸಾಂಗವಾಗಿ ವಿವರಿಸುತ್ತದೆ. ಹೆಚ್ಚಿನ ವಿವರಗಳಿಗೆ ಹೋಗದೆ ಸ್ಥೂಲವಾಗಿ ಹೀಗೆ ಗ್ರಹಿಸಬಹುದು :

ಅಗ್ರ ಬ್ಯಾಂಕಿನ ಸಂಚಾಲಕತ್ವದಲ್ಲಿ ರಚಿತವಾದ ಸಾರ್ವಜನಿಕ ಕ್ಷೇತ್ರದ ಬ್ಯಾಂಕರರ ಸಮಿತಿಯೊಂದು ಸಾಲಗಾರರನ್ನು ಗುರುತಿಸತಕ್ಕದ್ದು. ಅಗ್ರ ಬ್ಯಾಂಕ್ ಸಾರ್ವಜನಿಕ ಕ್ಷೇತ್ರದ ಬ್ಯಾಂಕಾಗಿಲ್ಲದಿದ್ದರೆ ಆ ಕೇಂದ್ರದಲ್ಲಿ ಹೆಚ್ಚಿನ ಸಂಖ್ಯೆಯ ಶಾಖೆಗಳುಳ್ಳ ಬ್ಯಾಂಕು ಸಂಚಾಲಕತ್ವ ವಹಿಸುತ್ತದೆ. ಅಗ್ರ ಬ್ಯಾಂಕೇ ಇಲ್ಲದಿರುವ ಮುಂಬೈ, ದೆಹಲಿ, ಹೈದರಾಬಾದ್ ಮುಂತಾದ 11 ಮಹಾನಗರಗಳಲ್ಲಿ ಸಂಚಾಲಕತ್ವದ ಹೊಣೆ ಹೊರಬೇಕಾದ ಬ್ಯಾಂಕುಗಳನ್ನು ಹೆಸರಿಸಲಾಗಿದೆ. ಈ ಮಹಾನಗರಗಳಲ್ಲಿ ರಚಿತವಾದ ಬ್ಯಾಂಕರರ ಸಮಿತಿಗಳು ನಗರವನ್ನು ವಲಯಗಳನ್ನಾಗಿ ವಿಂಗಡಿಸಿಕೊಂಡು ಸ್ಥಳೀಯ ಸಮಿತಿಗಳನ್ನು ರಚಿಸುತ್ತವೆ. ಸಂಚಾಲಕತ್ವ ವಹಿಸಿದ ಬ್ಯಾಂಕು ಯೋಜನೆಯ ಅನುಷ್ಠಾನದ ಬಗ್ಗೆ ಚರ್ಚಿಸಲು ಆಗಿಂದಾಗ್ಗೆ ಬ್ಯಾಂಕರರ ಸಭೆ ಕರೆಯುತ್ತದೆ; ಗುರಿಗಳನ್ನು ನಿರ್ಧರಿಸಿ ಯೋಜನೆಗೆ ಪ್ರಚಾರ ನೀಡಿ ಅರ್ಜಿಗಳನ್ನು ಪಡೆಯುತ್ತದೆ. ಬಂದ ಅರ್ಜಿಗಳನ್ನು ಬ್ಯಾಂಕರರ ಸಮಿತಿ ಪರಿಶೀಲಿಸಿ ಫಲಾನುಭವಿಗಳನ್ನು (ಅಗತ್ಯವಾದರೆ ಸಂದರ್ಶನ ಮಾಡಿ) ಗುರುತಿಸುತ್ತದೆ.

ಬ್ಯಾಂಕುಗಳ ಕೆಲಸ: ಬ್ಯಾಂಕುಗಳು 1 ತಿಂಗಳೊಳಗೆ ಸಾಲ ಮಂಜೂರಾತಿಯ ಬಗೆಗೆ ನಿರ್ಧರಿಸಿ ಸಾಲಗಾರರಿಗೆ/ಸಂಚಾಲಕ ಬ್ಯಾಂಕಿಗೆ ತಿಳಿಸಬೇಕು. ಮಂಜೂರಾತಿ ಪೂರ್ವ ಭೇಟಿ (Pre-sanction visit) ಕಡ್ಡಾಯ. ಸಂಬಂಧಿಸಿದ ಚಟುವಟಿಕೆಗೆ ಬ್ಯಾಂಕರರ ಸಮಿತಿ ನಿರ್ಧರಿಸಿದ ಘಟಕ ವೆಚ್ಚವನ್ನಾಧರಿಸಿ ಸಾಲ ಮಂಜೂರು ಮಾಡಬೇಕು. ಯೋಜನೆ ಕಾರ್ಯಗತಗೊಳ್ಳುತ್ತಿರುವ ಕುರಿತು ಭಾರತದ ರಿಸರ್ವ್ ಬ್ಯಾಂಕಿಗೆ ಮಾಹಿತಿ ಸಂಗ್ರಹಿಸಿಕೊಡುವ ಹೊಣೆ ಬ್ಯಾಂಕುಗಳ ಕೇಂದ್ರ ಕಛೇರಿಗಳದಾಗಿದ್ದು ಶಾಖೆಗಳು ಸಂಬಂಧಿಸಿದ ಮಾಹಿತಿಯನ್ನು ಕೇಂದ್ರ ಕಛೇರಿಗೆ ಪಾಕ್ಷಿಕ ಅಂತರದಲ್ಲಿ ಕಳುಹಿಸಬೇಕು. ಸಾಲಗಾರರಿಗೆ ಅವರ ಹೆಸರು, ವಿಳಾಸ, ಸಾಲದ ಮೊತ್ತ, ಉದ್ದೇಶ, ಬಡ್ಡಿದರ, ವಾಯಿದೆ ದಿನ, ಮಾಸಿಕ ಕಂತು ಮೊದಲಾದವನ್ನು ಗುರುತು ಹಾಕಿದ ಪಾಸ್ ಪುಸ್ತಕವನ್ನು ಕೊಡಬೇಕು. ಈ ಯೋಜನೆಯಡಿ ನೀಡುವ ಸಾಲಗಳಿಗೆ 3 ರೂ. ಸ್ಟ್ಯಾಂಪ್ ಹಾಳೆಯ ಮೇಲೆ ಪಡೆದ ಒಂದು ಒಪ್ಪಂದ ಮಾತ್ರವೇ ದಸ್ತೈವಜು.

ಸಂಸ್ಥೆಯ ಖಾತರಿ: ಈ ಸಾಲಗಳು ಆದ್ಯತಾ ವಲಯದಲ್ಲಿ ಬರುವಂಥವಾಗಿದ್ದು ಠೇವಣಿ ವಿಮೆ ಮತ್ತು ಉದರಿ ಖಾತರಿ ನಿಗಮದ ಸಣ್ಣ ಸಾಲಗಳ ಖಾತರಿ ಯೋಜನೆಯಡಿ ರಕ್ಷೆಗೆ ಅರ್ಹವಾಗಿರುತ್ತದೆ. ಮರುಪಾವತಿಯಾಗದೆ ಉಳಿದ ಸಾಲದ ಶೇ. 60 ರಷ್ಟನ್ನು ಬ್ಯಾಂಕುಗಳಿಗೆ ಈ ಖಾತರಿ ನಿಗಮ ತುಂಬಿಕೊಡುತ್ತದೆ.

ಕೆಲವು ಪ್ರಶ್ನೆಗಳು

ಯೋಜನೆಯ ಸ್ವರೂಪವನ್ನು ಅರ್ಥ ಮಾಡಿಕೊಂಡಾದ ನಂತರ ಕೆಲವು ಪ್ರಶ್ನೆಗಳು ಸ್ವಾಭಾವಿಕವಾಗಿಯೇ ಉದ್ಭವಿಸುತ್ತವೆ:

1 ಕೇಂದ್ರ ಸರಕಾರದ ಪ್ರಮುಖ ಯೋಜನೆಗಳಾದ ಭಿನ್ನಕ ಬಡ್ಡಿ ದರ ಯೋಜನೆ, ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ, ವಿದ್ಯಾವಂತ ನಿರುದ್ಯೋಗಿಗಳಿಗೆ ಸ್ವಯಂ ಉದ್ಯೋಗ ಯೋಜನೆ ಮತ್ತು ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳ ಮಾಮೂಲಿ ಯೋಜನೆಗಳೊಡನೆ ಈ ಹೊಸ ಯೋಜನೆಯ ಸಂಬಂಧವೇನು ?

2 ಈಗಾಗಲೇ ಬಹಳಷ್ಟು ಯೋಜನೆಗಳಿರುವಾಗ ಇನ್ನೊಂದು ಯೋಜನೆಯ ಅಗತ್ಯ ಎಷ್ಟು ?

3 ಅತ್ಯಂತ ಬಡತನ ಅನುಭವಿಸುತ್ತಿರುವ ವ್ಯಕ್ತಿಯೊಬ್ಬ ರೂ. 5,000 ಬಂಡವಾಳ ಹೂಡಿ ಸ್ವಾವಲಂಬನೆ ಪಡೆಯಲು ಸಾಧ್ಯವೆ? ಈ ಮೊತ್ತವನ್ನು ನಿಗದಿಗೊಳಿಸಿದ್ದು ಯಾವ ಆಧಾರದ ಮೇಲೆ?

4 1986-87ರ ಸಾಲಿನಲ್ಲಿ 500 ಜನರಲ್ಲಿ ಒಬ್ಬರಂತೆ* ಸಾಲ–ಎಂಬುದಕ್ಕೆ ಯಾವುವಾದರೂ ಕಾರಣಗಳಿವೆಯೆ ?

5 ವಿದ್ಯಾವಂತ ನಿರುದ್ಯೋಗಿಗಳಿಗಾಗಿ ಸ್ವಯಂ ಉದ್ಯೋಗ ಯೋಜನೆಯೊಂದನ್ನು ಘೋಷಿಸಿದ 3 ವರ್ಷಗಳಲ್ಲಿಯೇ ಇನ್ನೊಂದು ಯೋಜನೆ ಅಗತ್ಯವಾಯಿತೆ ? ಈ ಸಂದರ್ಭದಲ್ಲಿ ಮೊದಲ ಯೋಜನೆಯ ಪರಿಣಾಮವನ್ನು ಕುರಿತ ಅಧ್ಯಯನ ನಡೆಯಿತೆ ?

6 ಸುಮಾರು 17,000 ಜನರಿಗೆ ಸರಾಸರಿ 1 ಬ್ಯಾಂಕ್ ಶಾಖೆ ಇರುವಾಗ ಪ್ರತಿ 500ರಲ್ಲಿ ಒಬ್ಬರಿಗೆ ಸಾಲ ಕೊಡಿಸಲು ಇಷ್ಟೆಲ್ಲ ಪ್ರಚಾರ, ಕಾರ್ಯವಿಧಾನದ ಗೊಂದಲಗಳ ಅಗತ್ಯ ಅಥವಾ ಉದ್ದೇಶ ಏನು ?

ಇವುಗಳನ್ನೂ ಇವುಗಳ ಜತೆಗೇ ಉದ್ಭವಿಸುವ ಇಂಥ ಇತರ ಪ್ರಶ್ನೆಗಳನ್ನೂ ಕುರಿತು ವಿಶ್ಲೇಷಣೆ ನಡೆಸಿದಾಗ ಕೆಲವು ಸಂಗತಿಗಳು ಬೆಳಕಿಗೆ ಬರುತ್ತವೆ:

(i) (ಅ) ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ ಮತ್ತು ಪಟ್ಟಣ ಪ್ರದೇಶದ ಬಡಜನರಿಗಾಗಿ ಸ್ವಯಂ ಉದ್ಯೋಗ ಕಾರ್ಯಕ್ರಮ (SEPUP): ಈ ಯೋಜನೆಗೂ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಗೂ ಕೆಲವು ವ್ಯತ್ಯಾಸಗಳೂ ಕೆಲವು ಸಾಮ್ಯಗಳೂ ಇವೆ. ಬಡ್ಡಿಯ ದರ ಎರಡರಲ್ಲೂ ಒಂದೆ. ಸ. ಗ್ರಾ. ಅ. ಕಾ. ವು ವ್ಯವಸಾಯ ಸಾಲಗಳನ್ನೂ ಒಳಗೊಳ್ಳುವುದರಿಂದ ಆ ದೃಷ್ಟಿಯಿಂದ ಅದು ಹೆಚ್ಚು ವ್ಯಾಪಕವಾದದ್ದು. ಇನ್ನೊಂದು ವಿಷಯವೆಂದರೆ ಸ. ಗ್ರಾ. ಅ. ಕಾ. ಜಾರಿಯಲ್ಲಿರುವ ಎಡೆಗಳಿಗೆ ಈ ಹೊಸ ಯೋಜನೆಯ ವ್ಯಾಪ್ತಿ ಇರುವುದಿಲ್ಲ. ವ್ಯವಸಾಯ ಸಾಲಗಳು ಹೊಸ ಯೋಜನೆಯಡಿ ಬರುವುದಿಲ್ಲ. ಸ.ಗ್ರಾ.ಅ.ಕಾ. ಯೋಜನೆಯಲ್ಲಿ ಸಹಾಯಧನ ಫಲಾನುಭವಿಯ ಆದಾಯದ ಮಟ್ಟವನ್ನನುಸರಿಸಿ ಶೇ. 25ರಿಂದ ಶೇ. 66⅔ರ ವರೆಗೆ ಬದಲಾಗುತ್ತದೆಯಾದರೆ ಹೊಸ ಯೋಜನೆಯಲ್ಲಿ ಎಲ್ಲರಿಗೂ ಸಹಾಯಧನ ಶೇ. 25 ಮಾತ್ರ

(ಆ) ಭಿನ್ನಕ ಬಡ್ಡಿದರ ಯೋಜನೆ (DIR) ಮತ್ತು SEPUP: ಭಿನ್ನಕ ಬಡ್ಡಿದರದ ಸಾಲಗಳಿಗೆ ಸ್ಥಳದ/ಚಟುವಟಿಕೆಯ ವ್ಯಾಪ್ತಿಯಲ್ಲಿ ಇತಿಮಿತಿ ಇಲ್ಲ. ನೆರವಿನ ಗರಿಷ್ಠಮಿತಿ ರೂ. 6,500 ಗ್ರಾಮೀಣ ಪ್ರದೇಶದಲ್ಲಿ ರೂ. 6,400ಕ್ಕಿಂತ ಕಡಮೆ ಮತ್ತು ಪಟ್ಟಣ ಪ್ರದೇಶದಲ್ಲಿ ರೂ. 7,200ಕ್ಕಿಂತ ಕಡಮೆ (ಕುಟುಂಬದ) ಆದಾಯವುಳ್ಳವರು DIR ಯೋಜನೆಯಡಿ ಪ್ರಯೋಜನ ಪಡೆಯಬಹುದಾಗಿದೆ. ಹೊಸ ಯೋಜನೆಯಲ್ಲಿ ಪಟ್ಟಣ ಪ್ರದೇಶದಲ್ಲಿ ವಾಸಿಸುವ, ರೂ. 7,200ಕ್ಕಿಂತ ಕಡಮೆ ಕುಟುಂಬ ಆದಾಯವುಳ್ಳವರು ಸಾಲಕ್ಕೆ ಅರ್ಹರೆನಿಸುತ್ತಾರೆ. ಭಿನ್ನಕ ಬಡ್ಡಿದರ ಯೋಜನೆಯಲ್ಲಿ ಬಡ್ಡಿದರ ಶೇ. 4 ಆದರೂ ಸಹಾಯಧನ ಇಲ್ಲ. SEPUPನಲ್ಲಿ ಗರಿಷ್ಠಮಿತಿ ರೂ. 5,000, ಬಡ್ಡಿದರ ಶೇ. 10 ಆದರೆ ನೆರವಿನ ಶೇ. 25ರಷ್ಟು ಸಹಾಯಧನ ಫಲಾನುಭವಿಗಳಿಗೆ ದೊರೆಯುತ್ತದೆ.

(ಇ) ವಿದ್ಯಾವಂತ ನಿರುದ್ಯೋಗಿ (ವಿ.ನಿ.) ಮತ್ತು ನಗರ ಬಡಜನ ಕಾರ್ಯಕ್ರಮ (ನಬಕಾ)

ಈ ಯೋಜನೆಯ ತುಲನೆಗೆ ಹೆಚ್ಚಿನ ಅವಕಾಶವಿರುವುದು 'ವಿದ್ಯಾವಂತ ನಿರುದ್ಯೋಗಿ ಯುವಕರಿಗಾಗಿ ಸ್ವಯಂ ಉದ್ಯೋಗ' ಯೋಜನೆಯೊಂದಿಗೆ (SEEUY). ಸಹಾಯಧನ, ಬಡ್ಡಿದರಗಳ ದೃಷ್ಟಿಯಿಂದ ಸಾಮ್ಯ ಕಂಡುಬರುವುದಾದರೂ ಹೊಸ ಯೋಜನೆಯಲ್ಲಿ ನೆರವಿನ ಗರಿಷ್ಠ ಮೊತ್ತವೇ ಸಾಕಷ್ಟು ಮೊಟಕಾಗಿದೆ :

* ಇತ್ತೀಚೆಗೆ 300 ಜನರಲ್ಲಿ ಒಬ್ಬರಿಗೆ ಎಂಬಂತೆ ಈ ಯೋಜನೆಯಲ್ಲಿ ಸಾಲ ನೀಡಬೇಕೆಂಬ ತಿದ್ದುಪಡಿ ಬಂದಿದೆ.

ನೆರವಿನ ಗರಿಷ್ಠ ಮಿತಿ

	ವಿ.ನಿ.	ನಬಕಾ
ಕೈಗಾರಿಕೆ	ರೂ. 35,000	ರೂ. 5,000
ಸೇವೆಗಳು	ರೂ. 25,000	
ವ್ಯಾಪಾರ	ರೂ. 15,000	

ಹೀಗಾಗಿ ಮುದ್ರಣ ಮುಂತಾದ ಕೈಗಾರಿಕೆಗಳಾಗಲಿ, ಜೆರಾಕ್ಸ್ ಇತ್ಯಾದಿ ಸೇವಾ ಚಟುವಟಿಕೆಗಳಾಗಲಿ ನೆರವಿನ ಮಿತಿಯಿಂದಾಗಿ ಈ ಹೊಸ ಯೋಜನೆಯ ವ್ಯಾಪ್ತಿಗೆ ಬರಲಾರವು.

ವಿ. ನಿ. ಯೋಜನೆ ಗ್ರಾಮೀಣ ಪ್ರದೇಶಗಳಿಗೂ ಅನ್ವಯವಾಗುವುದು; ಆದರೆ ಹೊಸ ಯೋಜನೆ ಗ್ರಾಮೀಣ ಪ್ರದೇಶಗಳಿಗೆ ಕಾಲಿಡುವಂತಿಲ್ಲ. ಮಹಾನಗರಗಳಿಗೆ ಹೊಸ ಯೋಜನೆ ಅನ್ವಯವಾಗುತ್ತದೆಯೇ ವಿನಾ ಮೊದಲಿನದಲ್ಲ. ಅತಿ ವ್ಯಾಪ್ತಿಯುಂಟಾಗುವುದು— ಎಂದರೆ, ಎರಡೂ ಯೋಜನೆಗಳು ಒಟ್ಟಾಗಿ ಜಾರಿಯಲ್ಲಿರಲು ಸಾಧ್ಯವಾಗುವುದು – ಪಟ್ಟಣ ಮತ್ತು ಅರೆಪಟ್ಟಣ ಪ್ರದೇಶಗಳಲ್ಲಿ, ಯೋಜನೆಯ ಉಪಯುಕ್ತತೆಯನ್ನು ಮನಗಂಡಾಗ ಸ್ವಲ್ಪಮಟ್ಟಿನ ಈ ಅತಿ ವ್ಯಾಪ್ತಿಯ ದೋಷ ಗೌಣವಾಗುತ್ತದೆ. ಹೊಸ ಯೋಜನೆಯಲ್ಲಿ ವಯೋಮಿತಿ, ಶೈಕ್ಷಣಿಕ ಅರ್ಹತೆಯ ನಿಬಂಧನೆಗಳಿಲ್ಲ. ಮೊದಲಿನ ಯೋಜನೆಯಲ್ಲಿ ಎಸ್‌ಎಸ್‌ಎಲ್‌ಸಿ ತೇರ್ಗಡೆಯಾದ 18ರಿಂದ 35 ವಯಸ್ಸಿನ ಯುವಕ/ಯುವತಿಯರು ಮಾತ್ರ ಅರ್ಹತೆ ಪಡೆಯುತ್ತಾರೆ. ಮೊದಲ ಯೋಜನೆಯಲ್ಲಿ ಸಾಲಗಾರನನ್ನು ಗುರುತಿಸುವುದು ಜಿಲ್ಲಾ ಕೈಗಾರಿಕಾ ಕೇಂದ್ರವಾದರೆ, ಈಗಿನ ಯೋಜನೆಯಲ್ಲಿ ಪಡಿತರ ಕಾರ್ಡುಗಳು ಸಾಲಗಾರನನ್ನು ಗುರುತಿಸಲು ಬ್ಯಾಂಕರನಿಗೆ ನೆರವಾಗುತ್ತವೆ.

(ii) ಈ ಯೋಜನೆ ಹಿಂದಿನ ಯೋಜನೆಗಳಿಗಿಂತ ಭಿನ್ನವಾದ್ದೆಂಬುದು ನಿಜವಾದರೂ, ಬ್ಯಾಂಕಿನ ಮಾಮೂಲಿ ಯೋಜನೆಗಳಡಿ ಈ ಯೋಜನೆಯಲ್ಲಿ ಬರುವ ಊದುಕಡ್ಡಿ ತಯಾರಕ, ಬಡಗಿ, ಸೈಕಲ್, ರಿಕ್ಷಾವಾಲ, ಸಿಂಪಿಗ ಮುಂತಾದ ಎಲ್ಲರಿಗೂ ಇಂಥ ಸಾಲಗಳನ್ನು ನೀಡಲು ಸಾಧ್ಯವಾಗುತ್ತಿತ್ತು. ಆದರೆ ಕಡಮೆ ಬಡ್ಡಿಯ ದರ ಮತ್ತು ಸಹಾಯಧನದ ಲಾಭ ಸಾಲಗಾರನಿಗೆ ದೊರೆಯುತ್ತಿರಲಿಲ್ಲ. ಈ ದೃಷ್ಟಿಯಿಂದ ಯೋಜನೆ ಬ್ಯಾಂಕುಗಳಿಗೆ ಉಂಟುಮಾಡುವ ಅಧಿಕ ಒತ್ತಡವನ್ನು ಲೆಕ್ಕಿಸಿಯೂ ಸ್ವಾಗತಾರ್ಹವೇ ಎನ್ನಬಹುದು.

(iii) ಈ ಯೋಜನೆಯ ವ್ಯಾಪ್ತಿಗೆ ಬರುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಬರುವ ಆದಾಯದಲ್ಲಿ ಒಂದು ಕುಟುಂಬ ಜೀವನ ನಡೆಸಲು ಸಾಧ್ಯ ಎಂಬುದು ಅನುಭವಕ್ಕೆ ಬಂದಿರುವ ಸಂಗತಿ. ಇಂಥವೇ ಉದ್ಯೋಗ ನಡೆಸುತ್ತಿರುವ ಅನೇಕರೊಡನೆ ಸ್ಪರ್ಧಿಸಿ ನಮ್ಮ ಹೊಸ ಯೋಜನೆಯ ಫಲಾನುಭವಿ ಯಶಸ್ವಿಯಾಗಬಲ್ಲನೆ? ಅವನಿಗೆ ಸಂಬಂಧಿಸಿದ ಉದ್ಯಮ ನಡೆಸುವ ಕೌಶಲ, ಸಾಮರ್ಥ್ಯ ಕರಗತವಾಗಿದೆಯೆ? ಇದನ್ನು ನಿರ್ಧರಿಸಬೇಕಾದ್ದು ಬ್ಯಾಂಕರನ ಹೊಣೆ. 'ಅಭಿರುಚಿ ಪೂರ್ವಾನುಭವಗಳನ್ನು ಗಮನಿಸಿಯೇ ಫಲಾನುಭವಿಗಳನ್ನು ಆಯ್ಕೆಮಾಡಿ' ಎಂದು ಮೊದಲೇ ಬ್ಯಾಂಕುಗಳಿಗೆ ಹೇಳಲಾಗಿದೆಯಷ್ಟೆ?

(iv) ಈ ಒಂದು ವರ್ಷದಲ್ಲಿ ಪ್ರತಿ 500 ಜನರಲ್ಲಿ ಒಬ್ಬರಿಗೆ ಸಾಲ ಎನ್ನುವುದಕ್ಕೆ ಯಾವ ಆಧಾರವಿದೆಯೋ ತಿಳಿಯುವುದಿಲ್ಲವಾದರೂ ತಕ್ಕಷ್ಟು ಸಮಂಜಸವಾದ ಮಿತಿ ಎನ್ನಿಸುತ್ತದೆ. (1 ಲಕ್ಷ ಜನಸಂಖ್ಯೆಯಿರುವ ಪಟ್ಟಣದಲ್ಲಿ 200 ಫಲಾನುಭವಿಗಳನ್ನು ಗುರುತಿಸಬೇಕಾಗುತ್ತದೆ.) ಸರಕಾರ ನೀಡಬೇಕಾದ ಸಹಾಯಧನ ಈ ಮಿತಿಯನ್ನು ನಿರ್ಧರಿಸಿರಬಹುದೆಂದು ಊಹಿಸಲು ಅಡ್ಡಿಯಿಲ್ಲ. ಅಭಿವೃದ್ಧಿಶೀಲವಾಗಿರುವ ನಮ್ಮ ದೇಶದಲ್ಲಿ ವಿರಳವಾಗಿರುವ ಸಂಪನ್ಮೂಲಗಳನ್ನು ಜಾಗರೂಕತೆಯಿಂದ ಬಳಸುವ ಅಗತ್ಯವಿದ್ದು ಹಣಕಾಸು ಮಂತ್ರಾಲಯ ಈ ಹೊಸ ಯೋಜನೆಯನ್ನು ಪ್ರಾಯೋಗಿಕವಾಗಿ ಜಾರಿಗೆ ತರಲು ಪ್ರಯತ್ನಿಸಿರುವುದು ಮೆಚ್ಚುಗೆಗೆ ಅರ್ಹ.

(v) ಗ್ರಾಮೀಣ ಪ್ರದೇಶದ ಬಡ ಜನರಿಗೆ 3 ವರ್ಷಗಳ ಹಿಂದೆ ಲಭ್ಯವಾದ ಉದರಿ ಸೌಲಭ್ಯಕ್ಕೆ ಸಂವಾದಿಯಾಗಿ ನಗರ/ಪಟ್ಟಣ ಪ್ರದೇಶದ ಬಡ ಜನರಿಗೆ ಈ ಯೋಜನೆಯ ಸೌಲಭ್ಯ ನೀಡುವ ಆಶಯ ತರ್ಕಸಮ್ಮತವಾಗಿದೆ.

ಉತ್ತಮಾಂಶಗಳು

ಪಟ್ಟಣ ಪ್ರದೇಶದಲ್ಲಿಯ ಬಡವರ ಸ್ಥಿತಿ ದಾರುಣ. ನಿಲ್ಲಲು ನೆಲೆಯಿಲ್ಲದೆ, ಜೀವನೋಪಾಯಕ್ಕೆ ಯಾವುದೇ ಉದ್ಯೋಗವೂ ಇಲ್ಲದೆ ತೊಳಲುವವರ ಸಂಖ್ಯೆ ಕಡಮೆಯೇನಿಲ್ಲ. ಗ್ರಾಮೀಣ ಪ್ರದೇಶದ ಬಡಜನರಂತಲ್ಲದೆ ಸ್ಥಳದಿಂದ ಸ್ಥಳಕ್ಕೆ ಅಲೆದಾಡಬೇಕಾದ ಇಂಥವರಿಗೆ ನೆರವು ನೀಡುವುದೂ ಕಷ್ಟ. ಈ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ ಪಟ್ಟಣ ಪ್ರದೇಶದ ಬಡಜನರಿಗಾಗಿ ಸಹಾಯಧನ ಸಹಿತವಾದ ಹೊಸ ಯೋಜನೆಯೊಂದನ್ನು ರೂಪಿಸಿರುವುದು ಯುಕ್ತವಾಗಿಯೇ ಇದೆ. ಇದರಲ್ಲಿ ಸ್ವಲ್ಪ ರಾಜಕೀಯ ದೃಷ್ಟಿಯೂ ಇರಬಹುದಾದರೂ ಒಟ್ಟಾರೆ ಇದೊಂದು ಒಳ್ಳೆಯ ಯೋಜನೆ ಎಂದು ಒಪ್ಪಬೇಕು.

ಬ್ಯಾಂಕುಗಳ ಹೊಣೆಗಾರಿಕೆಯನ್ನು ಗಮನದಲ್ಲಿರಿಸಿ ಆಲೋಚನೆ ಹರಿಸಿದರೆ ಹೊಸ ಯೋಜನೆಯಲ್ಲಿನ ಮತ್ತೆ ಕೆಲವು ಉತ್ತಮಾಂಶಗಳು ಕಾಣಬಹುದು :

1 ನೆರವಿನ ಗರಿಷ್ಠ ಮಿತಿ ಕಡಮೆಯಿರುವುದು,
2 ಸಾಲಗಳ ಸಂಖ್ಯೆ ನಿರ್ದಿಷ್ಟವಾಗಿರುವುದು,
3 ಸಾಲ ಮಂಜೂರಾತಿಗೆ ಸಮಯವನ್ನು ಮಾಮೂಲಿನ 14 ದಿನಗಳಿಗೆ ಬದಲು 30 ದಿನಗಳಿಗೆ ಏರಿಸಿರುವುದರ ಮೂಲಕ ಮಂಜೂರಿಗೆ ಮೊದಲಿನ ಭೇಟಿಗೆ (Pre-Sanction visit) ಅನುವು ಮಾಡಿಕೊಟ್ಟಿರುವುದು.
4 ವಿದ್ಯಾವಂತ ನಿರುದ್ಯೋಗಿ ಯುವಜನರ ಸ್ವೋದ್ಯೋಗ ಯೋಜನೆಯಲ್ಲಿ ಫಲಾನುಭವಿಗಳನ್ನು ಗುರುತಿಸುವಲ್ಲಿ ಮತ್ತು ಯಂತ್ರ ಖರೀದಿಯೇ ಮೊದಲಾದ ಇತರ ವಿಷಯಗಳಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರ ವಿಶೇಷ ಪಾತ್ರ ವಹಿಸುವುದಿತ್ತು. ಆದರೆ ಈಗಿನ ಯೋಜನೆಯ ಅನುಷ್ಠಾನದಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರ ಅಥವಾ ಇನ್ನಾವುದೇ ಅಭಿಕರಣ ಭಾಗವಹಿಸುವುದಿಲ್ಲ. ಹೀಗಾಗಿ ಬ್ಯಾಂಕರುಗಳಿಗೆ ಸ್ವಲ್ಪ ಮಟ್ಟಿನ ಸ್ವಾತಂತ್ರ್ಯ ದೊರೆಯಬಹುದೆಂದು ಆಶಿಸಲು ಅವಕಾಶವಿದೆ.

ಪ್ರಚಾರದ ಪರಿಣಾಮ

ಯೋಜನೆಯ ಉತ್ತಮಾಂಶಗಳನ್ನು ಗಮನಿಸಿದಾಗ ಕೇಂದ್ರ ಸರಕಾರದ ಹಣಕಾಸು ಮಂತ್ರಾಲಯ ಎಚ್ಚರದಿಂದ ಯೋಜನೆ ತಯಾರಿಸಿದೆ ಎಂಬ ಭಾವನೆ ಬರಬಹುದು. ಆದರೆ ಈ ಸಣ್ಣ ಯೋಜನೆಗೆ ದೊರಕಿರುವ ಅಬ್ಬರದ ಪ್ರಚಾರ, ಕಾರ್ಯವಿಧಾನದಲ್ಲಿ ಉಂಟುಮಾಡಿರುವ ಗೊಂದಲ ಹಾಗೂ ಈ ಯೋಜನೆಗೆ ದೊರೆತ ಸಾರ್ವಜನಿಕ ಪ್ರತಿಕ್ರಿಯೆಗಳನ್ನು ಗಮನಿಸಿದಾಗ ಈ ಭಾವನೆ ಭ್ರಮೆಯೂ ಆಗಿರಬಹುದೆಂಬ ಅರಿವು ಮೂಡುತ್ತದೆ.

ಆಗಸ್ಟ್ ತಿಂಗಳ ಆರಂಭದಿಂದಲೂ ಪ್ರಚಾರ ಪಡೆಯುತ್ತಿರುವ ಈ ಯೋಜನೆಯ ರೂಪರೇಷೆಗಳು ಲಿಖಿತರೂಪದಲ್ಲಿ ಬ್ಯಾಂಕರರ ಕೈಸೇರುವ ವೇಳೆಗೆ ಒಂದು ತಿಂಗಳು ಕಳೆದುಹೋಗಿತ್ತು. ಆ ವೇಳೆಗಾಗಲೇ ಎಲ್ಲ ಪತ್ರಿಕೆಗಳಲ್ಲೂ ಯೋಜನೆಯ ವಿವರಗಳು ಮೂಡಿ, ಸಾಲಕ್ಕಾಗಿ ಬ್ಯಾಂಕುಗಳಿಗೆ ಅಲೆದವರೆಷ್ಟೋ! ಸೀಮಿತ ಸಂಖ್ಯೆಯ ಸಾಲಗಳನ್ನು ನೀಡಬೇಕಾಗಿರುವ ಈ ಯೋಜನೆಗೆ ಇಷ್ಟೊಂದು ಪ್ರಚಾರ, ಬ್ಯಾಂಕರರ ಸಮಿತಿ, ಸಂಚಾಲಕತ್ವ ವಹಿಸುವ ಬ್ಯಾಂಕ್, ಪ್ರತಿಕೇಂದ್ರದಲ್ಲೂ ಸಹಸ್ರಾರು ಅರ್ಜಿಗಳ ಸ್ವೀಕಾರ—ಇವುಗಳ ಅಗತ್ಯವಾದರೂ ಏನಿತ್ತು? 1987ರ ಮಾರ್ಚ್ ವರೆಗಿನ ಸಮಯದೊಳಗೆ ಗುರಿಮುಟ್ಟುವಷ್ಟು ಅಭ್ಯರ್ಥಿಗಳು ದೊರೆಯದೆ ಹೋಗುತ್ತಿದ್ದರೆಂದೇ ?

ಹೀಗೆ ಪ್ರಚಾರದಿಂದ ಜನರನ್ನು ಒಮ್ಮೆಲೇ ಕೆರಳಿಸಿದುದರ ಪರಿಣಾಮ ? ದೇಶದ ವಿವಿಧ ನಗರಗಳಲ್ಲಿ ಸಾಲದ ಅರ್ಜಿಗಳು ಸಿಕ್ಕದೆ ಹೋದ ಹತಾಶೆಯಲ್ಲಿ ಬ್ಯಾಂಕುಗಳ ಮುಂದೆ ಹಿಂಸೆಗೆ ಇಳಿದಿದ್ದ ಉದ್ರಿಕ್ತ ಗುಂಪುಗಳನ್ನು ಚದುರಿಸಲು ಪೋಲೀಸರು ಲಾಠಿ ಪ್ರಹಾರ ಮಾಡಬೇಕಾಗಿ ಬಂದುದನ್ನು ಪತ್ರಿಕೆಗಳು ವರದಿ ಮಾಡಿವೆ.

ಇಂಥ ಪರಿಸರದಲ್ಲಿ ಕೆಲಸಮಾಡಬೇಕಾದ ಸ್ಥಿತಿಯಲ್ಲಿರುವ ಬ್ಯಾಂಕುಗಳು ನಿಜವಾಗಿಯೂ ಅರ್ಹ

ರಲ್ಲದ ಅರ್ಜಿದಾರರಿಗೆ ಯಾವುದೇ ಕಾರಣ ಕೊಟ್ಟು ಸಾಲ ನಿರಾಕರಿಸುವುದು ಸಾಧ್ಯವೆಂದು ನಂಬುವುದು ತಾನೇ ಹೇಗೆ ?

ಸಾಲದ ಅರ್ಜಿ ನಮೂನೆಗಳನ್ನು ಸಾರ್ವಜನಿಕರಿಗೆ ನೀಡುವ, ಭರ್ತಿಯಾದ ಅರ್ಜಿಗಳನ್ನು ಬ್ಯಾಂಕು ಸ್ವೀಕರಿಸುವ ಮತ್ತು ಸಾಲ ಮಂಜೂರು ಮಾಡಬೇಕಾದ ಕೊನೆಯ ದಿನಾಂಕಗಳನ್ನು ರಿಸರ್ವ್ ಬ್ಯಾಂಕಿನ ಸುತ್ತೋಲೆ ಬ್ಯಾಂಕುಗಳಿಗೆ ತಿಳಿಸುವ ಹೊತ್ತಿಗೆ ಅನೇಕ ಶಾಖೆಗಳು ಸಾರ್ವಜನಿಕರ ಒತ್ತಡ ತಾಳಲಾರದೆ ತಂತಮ್ಮ ಗುರಿಗಳನ್ನು ಮುಟ್ಟುವಷ್ಟು ಸಂಖ್ಯೆಯ ಸಾಲಗಳನ್ನು ಮಂಜೂರು ಮಾಡಿಯಾಗಿತ್ತು.

ಲಾಭಪ್ರದತೆಯ ಮೇಲೆ ಪರಿಣಾಮ

ಸಾಲ ವಸೂಲಾತಿಯ ಸಮಸ್ಯೆ ಬ್ಯಾಂಕುಗಳ ಲಾಭಪ್ರದತೆಗೆ ಸವಾಲಾಗಿ ನಿಂತಿದೆ. ಲಾಭದ ಅಂಕಿ ಅಂಶಗಳೇನೇ ಇರಲಿ, ಬ್ಯಾಂಕುಗಳು ನೀಡಿದ ಸಾಲದ ಶೇ. 54ರಷ್ಟು ಮೊತ್ತ ವಸೂಲಾಗದೆ ಉಳಿದಿರುವುದು ಆತಂಕಕಾರಿಯಲ್ಲವೆ ? 1 ಲಕ್ಷ ರೂ.ಗಿಂತ ಹೆಚ್ಚಿನ ಉದರಿ ಸೌಲಭ್ಯ ಪಡೆದ ದೊಡ್ಡ ಕೈಗಾರಿಕಾ ಘಟಕಗಳಿಂದ ಬರಬೇಕಾಗಿದ್ದ ಬಾಕಿ 1984ರ ಅಂತ್ಯಕ್ಕೇ ರೂ. 2,340 ಕೋಟಿ ಇದ್ದಿತೆಂದರೆ ಈ ಸಮಸ್ಯೆಯ ಅಗಾಧತೆ ಅರಿವಾಗಬಹುದು. ವ್ಯವಸಾಯವೇ ಮುಂತಾದ ಆದ್ಯತಾ ವಲಯಗಳ ಸಾಲದ ಮರುಪಾವತಿಯೂ ಅಸಮರ್ಪಕ—ಶೇ. 50ಕ್ಕಿಂತ ಕಡಿಮೆ. ಅಂಥ ಸಾಲಗಳನ್ನು ಏರ್ಪಡಿಸುವುದಕ್ಕೆ ಆದ್ಯತೆ ನೀಡಬೇಕಾಗಿರುವ ಈ ಸಂದರ್ಭದಲ್ಲಿ ಕಾರ್ಯಾಚರಣೆಯ ಹಲವು ತೊಡರುಗಳನ್ನು ತಂದೊಡ್ಡುವ ಸರಕಾರದ ಹೊಸ ಧೋರಣೆಗಳು ಪ್ರಶ್ನಾರ್ಹವಾಗುತ್ತವೆ. ಬಡವರಿಗೆ ನೆರವು ದೊರೆಯಬೇಕೆಂಬುದು ನಿರ್ವಿವಾದವಾದರೂ ಆ ನೆರವು ಸಾರ್ಥಕವಾಗುವುದನ್ನು ಖಚಿತಪಡಿಸಿಕೊಳ್ಳುವ ಜವಾಬ್ದಾರಿಯನ್ನು ಮರೆಯುವಂತಿಲ್ಲ. ಸಾಧಾರಣ ಸಾಲಗಳ ಉಸ್ತುವಾರಿಯಲ್ಲೇ ಸ್ಪಷ್ಟವಾಗಿ ಸೋತಿರುವ ಬ್ಯಾಂಕಿಂಗ್ ಉದ್ಯಮದಿಂದ ಹೊಸ ಹೊಸ ಜವಾಬ್ದಾರಿಗಳ ಈಡೇರಿಕೆಯನ್ನು ನಿರೀಕ್ಷಿಸುವುದು ಹಾಸ್ಯಾಸ್ಪದವಾಗುತ್ತದೆ. 'ಹೊರಿಸಿಕೊಂಡು ಹೋದ ನಾಯಿ ಮೊಲನೇನ ಹಿಡಿವುದಯ್ಯ ?' ಎಂಬ ವಚನಕಾರರ ನುಡಿ ನೆನಪಾಗದಿರುವುದಿಲ್ಲ.

ದೊಡ್ಡ ಸಾಲಗಳನ್ನು ಕೊಟ್ಟರೆ ಏನೂ ಮಾಡದ ಬ್ಯಾಂಕುಗಳು ಸಣ್ಣ ಸಾಲ ಕೊಡಲು ಹಿಂದೇಟು ಹಾಕುವುದೇಕೆ ? ಎಂಬ ಪ್ರಶ್ನೆ ಸಹಜವಾಗಿ ಏಳಬಹುದಾದರೂ ಅದಕ್ಕೆ ನಿರ್ದಿಷ್ಟ ಉತ್ತರಗಳಿವೆ :

1 ಸಣ್ಣ ಸಾಲಗಳ ವಿಷಯದಲ್ಲಿ ಪ್ರತಿ ಸಾಲದ ಮೊತ್ತ ಗೌಣವಾದರೂ ಸಂಖ್ಯೆ ಹೆಚ್ಚು. ಆದ್ದರಿಂದ ಸಿಬ್ಬಂದಿಗೆ ಕೆಲಸದ ಹೊರೆ ಅಧಿಕ. ಅರ್ಜಿದಾರರ ಸಂದರ್ಶನ, ಫಲಾನುಭವಿಗಳನ್ನು ಗುರುತಿಸುವುದು, ಅರ್ಜಿಗಳನ್ನು ತುಂಬುವುದು, ಪರಿಶೀಲಿಸುವುದು ; ಉದರಿ ಅಗತ್ಯದ ನಿರ್ಧಾರಣ, ಉದರಿಗೆ ಶಿಫಾರಸು, ಮಂಜೂರಾತಿ ; ಸಾಲಗಾರನ ಆದಾಯ ಕುರಿತ ಮಾಹಿತಿ ಸಂಗ್ರಹಣೆ, ಸಾಲಗಾರರ ವರ್ಗೀಕರಣ, ಇತರ ಅಭಿಕರಣಗಳೊಂದಿಗೆ ಪತ್ರವ್ಯವಹಾರ, ಸಹಾಯಧನ/ಸ್ವಭಾಗದ ಹಣ ಮುಂತಾದವುಗಳನ್ನು ಕುರಿತ ಪ್ರತ್ಯೇಕ ವಹಿವಾಟುಗಳು, ಕಾರ್ಯವಿಧಾನಗಳು ಮತ್ತು ಆ ಹಣವನ್ನಿಡಲು ಪ್ರತ್ಯೇಕ ಖಾತೆಗಳನ್ನು ತೆರೆಯುವುದು/ಅವುಗಳ ನಿರ್ವಹಣೆ ; ದಸ್ತೈವಜುಗಳನ್ನು ಪಡೆಯುವುದು, ಸಾಲಗಾರರಿಗೆ ತಿಳಿವಳಿಕೆ ನೀಡುವುದು, ಮಂಜೂರಾತಿ ಪೂರ್ವದ ಭೇಟಿ, ಪಾಸ್ ಪುಸ್ತಕ ನೀಡಿಕೆ, ಬಟವಾಡೆ, ಮಂಜೂರಾತಿಯ ಅನಂತರದ ಭೇಟಿ, ಅನೇಕ ಸಂದರ್ಭಗಳಲ್ಲಿ ಆಸ್ತಿಗಳನ್ನು ಕೊಳ್ಳಲು ಸಾಲಗಾರರಿಗೆ ನೆರವಾಗುವುದು—ಇವೇ ಮುಂತಾದವಲ್ಲದೆ ಕಾಲಕಾಲಕ್ಕೆ ಉದರಿಯ ಉಸ್ತುವಾರಿ, ವಸೂಲಾತಿ ಮುಂತಾದ ಕೆಲಸಗಳು ; ಕೇಂದ್ರ ಕಛೇರಿಗೆ ಸಾಲಗಳ ಸ್ಥಿತಿ ಕುರಿತ ನಿಯತಕಾಲಿಕ ವರದಿಗಳನ್ನು ಸಲ್ಲಿಸುವುದು, ಸಾಲಕೊಟ್ಟರೆ ಪುನರುಜ್ಜೀವನಗೊಳಿಸುವ/ಹಿಂದಿರುಗಿಸುವಂತೆ ತಗಾದೆ ಮಾಡುವ/ಕಾನೂನು ಕ್ರಮ ಕೈಗೊಳ್ಳುವ ಕೆಲಸಗಳು ; ಕೆಟ್ಟ ಸಾಲವೆಂದು ಪರಿಗಣಿಸಲು ಶಿಫಾರಸು, ವಜಾ ಮಾಡಲು ಸಲಹೆ, ಖಾತರಿ ಸಂಸ್ಥೆಯಿಂದ ಖಾತರಿಯ ಹಣಕ್ಕಾಗಿ ದಾವೆ ಸಲ್ಲಿಸುವುದು, ಬಂದ ಹಣವನ್ನು ಪ್ರತ್ಯೇಕ ಖಾತೆಗಳಲ್ಲಿಟ್ಟುಕೊಳ್ಳುವುದಲ್ಲದೆ ವಸೂಲಾತಿಯ ಯತ್ನವನ್ನು ಮುಂದುವರಿಸುವುದು—ಹೀಗೆ ನಾನಾ ರೀತಿಯ ಕೆಲಸಗಳ ಒತ್ತಡ. ಸಾಲಗಳ ಸಂಖ್ಯೆ ಅಧಿಕವಾದಂತೆ ಸಿಬ್ಬಂದಿಯನ್ನು ಹೆಚ್ಚಿಸಲು ಬ್ಯಾಂಕುಗಳಿಗೆ ಸಾಧ್ಯವಿಲ್ಲ ; ಏಕೆಂದರೆ ಈ ಸಾಲಗಳ ಮೇಲಿನ ವರಮಾನ ಏನೇನೂ ಇಲ್ಲವೆಂಬುದಿರಲಿ. ಪೂರ್ತಿ ಹಣ ಬಡ್ಡಿ ಸಮೇತ ವಸೂಲಾದರೂ ಉಸ್ತುವಾರಿಯ ವೆಚ್ಚ ಲೆಕ್ಕಿಸಿದರೆ ಬ್ಯಾಂಕಿಗೆ ನಷ್ಟವೇ !

ದೊಡ್ಡ ಸಾಲಗಳಲ್ಲೂ ಇಂಥವೇ ಕೆಲಸಗಳು ಇರುವುವಾದರೂ ಸಂಖ್ಯೆ ಸೀಮಿತವಾಗಿರುವುದರಿಂದ ಸಮಯದ ಕೊರತೆಯ ಸಮಸ್ಯೆ ಬಾಧಿಸುವುದಿಲ್ಲವೆಂಬುದೂ ಅವುಗಳ ಮೇಲಣ ಬಡ್ಡಿಯ ದರ ಅಧಿಕವಾದ್ದರಿಂದ ವರಮಾನ ಅಧಿಕ ಎಂಬುದೂ ಗಮನಾರ್ಹ. ಬ್ಯಾಂಕುಗಳ ಉದ್ದೇಶ ಲಾಭ ಗಳಿಕೆಯೊಂದೇ ಅಲ್ಲ ಎಂಬುದು ನಿಜವಾದರೂ ಉಸ್ತುವಾರಿ ಸಿಬ್ಬಂದಿಯನ್ನು ಅಗತ್ಯವಾದಷ್ಟಾದರೂ ಹೆಚ್ಚಿಸಲು ಅಧಿಕ ವರಮಾನ ಬೇಡವೆ ? ಇಲ್ಲಿ ಸಾಲದ ಮೊತ್ತ, ಸಾಲ ಮರುಪಾವತಿಯಾಗದಿದ್ದರೆ ಆಗುವ ನಷ್ಟದ ಲೆಕ್ಕಾಚಾರಕ್ಕಿಂತ ಪೂರ್ತಿ ಹಣ ಬಡ್ಡಿಯ ಸಮೇತ ಸಕಾಲದಲ್ಲಿ ಮರುಪಾವತಿಯಾದರೂ ಸಣ್ಣ ಸಾಲಗಳ ಸಂಖ್ಯೆ ಹೆಚ್ಚಿದಂತೆ ಬ್ಯಾಂಕುಗಳಿಗೆ ಅಧಿಕ ನಷ್ಟವಾಗುವ ಸಂಭವ ಇರುವುದನ್ನು ಮನಗಾಣಬೇಕಾದುದು ಅಗತ್ಯವಾಗುತ್ತದೆ.

2 ಫಲಾನುಭವಿಗಳನ್ನು ಗುರುತಿಸುವಲ್ಲಿಯ ತೊಡಕು ಅನುಭವಿಗಳಿಗೇ ಗೊತ್ತು. ಒಂದೇ ಚಟುವಟಿಕೆಗೆ ಒಂದಕ್ಕಿಂತ ಹೆಚ್ಚು ಸಾಲಗಳು, ಒಬ್ಬನೇ ವ್ಯಕ್ತಿಗೆ ಹಲವು ಸಾಲಗಳು, ಕುಟುಂಬದ ಒಬ್ಬನಿಗಿಂತ ಹೆಚ್ಚು ಸದಸ್ಯರಿಗೆ ಅದೇ ಚಟುವಟಿಕೆಯ ಮೇಲೆ ಸಾಲ, ಸುಳ್ಳು ಹೆಸರುಗಳಲ್ಲಿ ಸಾಲ, ಸಾಲಗಾರರು ನಾಪತ್ತೆಯಾದಾಗ ಉದ್ಭವಿಸುವ ತೊಡಕುಗಳು—ಹೀಗೆ.

3 ಬ್ಯಾಂಕುಗಳಿಗೆ ಉಸ್ತುವಾರಿ, ವಸೂಲಾತಿ ಕಷ್ಟವಾಗಿರುವುದರ ದುರ್ಲಾಭ ಪಡೆದು ಸಾಲಗಳನ್ನು ಮರುಪಾವತಿ ಮಾಡದೆಯೇ ಇರಬಹುದೆಂಬ ಭಾವನೆ ಜನಮನದಲ್ಲಿ ಬೇರೂರುತ್ತಿದೆ. ಇದರಿಂದ ಹೇಗಾದರೂ ಮಾಡಿ ಬ್ಯಾಂಕ್ ಸಾಲ ಪಡೆದುಕೊಳ್ಳಬಯಸುವ ಮನೋಭಾವವುಳ್ಳವರ ಪಡೆಯೊಂದು ನಿರ್ಮಾಣವಾಗುತ್ತಿದೆ. ನೀಡಿದ ಸಾಲಗಳು ಅನುತ್ಪಾದಕವಾಗುವ ಸಂಭವಗಳು ಹೆಚ್ಚಾಗುವುದು ಇದರಿಂದಲೇ.

4 ಭಿನ್ನಕ ಬಡ್ಡಿದರದಲ್ಲಿ ನೀಡುವ ಸಾಲಗಳಿಗೆ ತಗಲುವ ವೆಚ್ಚ ಪ್ರತಿ ರೂ. 100 ಸಾಲಕ್ಕೆ ಸುಮಾರು ರೂ. 24 ಎಂದು ಒಂದು ಅಂದಾಜು. ಇದೇ ಆಧಾರದಿಂದ ಸರಕಾರದ ಸುಲಭ ಸಾಲಗಳಿಗೂ ಸುಮಾರು ರೂ. 18–20 ವೆಚ್ಚವಾಗುವುದೆಂದು ಊಹಿಸಬಹುದು.

ಇನ್ನೂ ಆರಂಭವಾಗುತ್ತಿರುವ ಈ ಯೋಜನೆ ಬ್ಯಾಂಕುಗಳ ಲಾಭಪ್ರದತೆಯ ಮೇಲೆ ಉಂಟುಮಾಡಬಹುದಾದ ಪರಿಣಾಮ ಕುರಿತು ಚಿಂತಿಸಬೇಕಾದ ಅಗತ್ಯ ಏನಿದೆ ? ಹಾಗಾದರೆ ಈ ಯೋಜನೆ ನಿಷ್ಪ್ರಯೋಜಕವೆ ? ಎಂಬ ಪ್ರಶ್ನೆಗಳು ನಿಲ್ಲುತ್ತವೆ. ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಕಲುಷಿತಗೊಳ್ಳುತ್ತಿರುವ ನಮ್ಮ ಬ್ಯಾಂಕಿಂಗ್ ವ್ಯವಸ್ಥೆಯ ಅವಲೋಕನ ಅಗತ್ಯವಾಗುತ್ತದೆ.

ಬ್ಯಾಂಕಿನ ವ್ಯವಹಾರದಲ್ಲಿ ರಾಜಕೀಯ ಹಸ್ತಕ್ಷೇಪದ ಪ್ರಸ್ತಾಪ ಬಹು ದಿನಗಳಿಂದ ಆಗಾಗ ಬರುತ್ತಲೇ ಇದೆಯಾದರೂ ಇದೀಗ ಪರಿಸ್ಥಿತಿ ವಿಷಮಿಸಿರುವುದು ಅನೇಕರ ಗಮನಕ್ಕೆ ಬಂದಿದೆ. ಬಡತನದ ನಿರ್ಮೂಲನ ಕಾರ್ಯದಲ್ಲಿ ಸರಕಾರದ ಪ್ರಯತ್ನಕ್ಕೆ ಬ್ಯಾಂಕ್ ಅಧಿಕಾರಿಗಳು ಅಡ್ಡಿಯಾಗಿರುವರೆಂಬ ತೀವ್ರವಾದ ಆಪಾದನೆ ಹೊರಿಸಲಾಗಿದೆ. ಬ್ಯಾಂಕುಗಳಿಂದ ಸಾರ್ವಜನಿಕರು ಹೆಚ್ಚು ಹೆಚ್ಚು ನಿರೀಕ್ಷಿಸುತ್ತಿರುವಂತೆ ಏರುತ್ತಿರುವ ಕೆಲಸದ ಒತ್ತಡದಲ್ಲಿ ಹದಗೆಟ್ಟ ಸಾಲಗಳನ್ನು ನಿರ್ವಹಿಸಲು ಹೆಣಗುತ್ತಿರುವ ಬ್ಯಾಂಕುಗಳ ಕ್ಷೇತ್ರ ಸಿಬ್ಬಂದಿಯ ಮನಃಸ್ವಾಸ್ಥ್ಯ ಕದಡಿದೆ, ಆತ್ಮವಿಶ್ವಾಸ ಮರೆಯಾಗಿದೆ. ಬ್ಯಾಂಕ್ ಉದರಿಯ ಉಪಯೋಗ, ಸಾಲದ ಮರುಪಾವತಿ ಮೊದಲಾದ ವಿಷಯಗಳಲ್ಲಿ ವಿವಿಧ ಹಿತಾಸಕ್ತಿಗಳು ಫಲಾನುಭವಿಗಳನ್ನು ತಪ್ಪು ದಾರಿಗೆ ಎಳೆಯುತ್ತಿವೆ. ಮಧ್ಯವರ್ತಿಗಳ ಹಾವಳಿ

ಹೆಚ್ಚುತ್ತಿದೆ. ಸರಕಾರದ ಯೋಜನೆಗಳಡಿ ನೀಡಲಾಗುತ್ತಿರುವ ಸಾಲದ ಮರುಪಾವತಿ ದರವಂತೂ ತೀರ ಕಡಿಮೆ. ಈ ಸಾಲಗಳು ಕೆಟ್ಟರೆ ಉದರಿ ಖಾತರಿ ನಿಗಮದಿಂದ 'ಹಕ್ಕು' (Claim) ಪಾವತಿಯಾಗಬಹುದೆಂಬ ಭ್ರಮೆಯೂ ಈಗೀಗ ದೂರವಾಗುತ್ತಿದೆ. ಅದು ಪಾವತಿಯಾಗಬೇಕಾದರೆ, ಸಂಬಂಧಿತ ಸಾಲದ ಉಸ್ತುವಾರಿ ಚೆನ್ನಾಗಿ ನಡೆದಿರಬೇಕು. ಫಲಾನುಭವಿಯನ್ನು ಗುರುತಿಸುವುದು, ಸಾಲ ಮಂಜೂರು, ಉದರಿಯ ಉಪಯೋಗ ಮುಂತಾದವುಗಳಲ್ಲಿ ಅಲಕ್ಷ್ಯವಿಲ್ಲವೆಂದು ಸಾಧಿಸಬೇಕಾಗುತ್ತದೆ. ಹೀಗಾಗಿ, ಇಂದಿನ ಸ್ಥಿತಿಯಲ್ಲಿ ಹೊರಬರುವ ಇಂಥ ಹೊಸ ಯೋಜನೆ ಬ್ಯಾಂಕಿನ ಲಾಭಪ್ರದತೆಯನ್ನು ಕುಂಠಿತಗೊಳಿಸುವ ವಿಷಯದಲ್ಲಿ ಸಂದೇಹವಿರಬೇಕಾದ ಅಗತ್ಯವಿಲ್ಲ.

ಅಪಾರ ಸಾರ್ವಜನಿಕ ಹಣ ದುರುಪಯೋಗವಾಗುವುದನ್ನು ಪ್ರತ್ಯಕ್ಷ ಕಂಡರೂ ಅಸಹಾಯಕರಂತಿರುವ ಬ್ಯಾಂಕರರು ಬ್ಯಾಂಕಿಂಗ್ ವ್ಯವಸ್ಥೆಗೆ ಒದಗಿದ ಈ ದುಃಸ್ಥಿತಿಯಿಂದ ಅದನ್ನು ಪಾರು ಮಾಡುವ ದಿಸೆಯಲ್ಲಿ ಚಿಂತನೆ ಹರಿಸಬೇಕಾಗಿದೆ. ಹೊಸ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಬ್ಯಾಂಕುಗಳಿಗೆ ನಿಜವಾಗಿ ಸಾಧ್ಯವಾಗಬೇಕಾದರೆ ಅವು ರಾಜಕೀಯ ಹಸ್ತಕ್ಷೇಪದಿಂದ ಸಂಪೂರ್ಣವಾಗಿ ಮುಕ್ತವಾಗಬೇಕು, ಕದಡಿರುವ ವಾತಾವರಣ ತಿಳಿಯಾಗಬೇಕು. ಅದಿಲ್ಲದೆ ಪರಿಸ್ಥಿತಿ ಹೀಗೇ ಮುಂದುವರಿದರೆ ಸುಂದರವಾದ ಯೋಜನೆಗಳು ವಾಸ್ತವದಲ್ಲಿ ನಿಷ್ಪ್ರಯೋಜಕವಾಗುವುದಿರಲಿ, ಅಪಾಯಕಾರಿಯಾಗುವುದು ನಿಸ್ಸಂದೇಹ.

ಬಡವರಿಗೆ ಸಾಮಾಜಿಕ ನ್ಯಾಯ ದೊರಕಿಸುವ ಯೋಜನೆಗಳ ಹೆಸರಿನಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ನಡೆಯುತ್ತಿರುವ ಅಪಾಯಕಾರಿ ದೊಂಬರಾಟದಲ್ಲಿ ಬ್ಯಾಂಕುಗಳ ಜೀವಂತಿಕೆ ಪಣವಾಗಿದೆಯೆಂಬುದನ್ನು ಯಾವ ಪ್ರಜ್ಞಾವಂತನೂ ಮರೆಯುವಂತಿಲ್ಲ.

ಅನುಬಂಧ 1

ಪಟ್ಟಣದ ಬಡಜನರ ಸ್ವೋದ್ಯೋಗ ಕಾರ್ಯಕ್ರಮದಲ್ಲಿ (SEPUP) ಸಾಲ ಪಡೆಯಲು ಅರ್ಹವಾಗುವ ಕೆಲವು ಚಟುವಟಿಕೆಗಳು

1 ಸೈಕಲ್ ರಿಕ್ಷಾ/ಎಳೆಯುವ ರಿಕ್ಷಾ
2 ನೇಯ್ಗೆ
3 ಚಮ್ಮಾರಿಕೆ
4 ಮರಗೆಲಸ
5 ಕುಂಭಕಾರಿಕೆ
6 ಪುಸ್ತಕಕ್ಕೆ ರಟ್ಟು ಕಟ್ಟುವಿಕೆ
7 ತರಕಾರಿ ಮಾರುವಿಕೆ
8 ಸೈಕಲ್ ಷಾಪ್
9 ದೋಭಿ ಕೆಲಸ
10 ಕಡಲೆಕಾಯಿ ಮಾರುವಿಕೆ
11 ಕಮ್ಮಾರಿಕೆ
12 ಗಾರೆ ಕೆಲಸ
13 ಚಿತ್ರದ ಕುರ್ಚಿ ಹೆಣೆತ
14 ಪಾನ್ ಬೀಡಾ ಅಂಗಡಿ
15 ಸ್ಕೂಟರ್ ರಿಪೇರಿ
16 ಪೀಠೋಪಕರಣ ತಯಾರಿಕೆ
17 ಬಣ್ಣ ಬಳಿಯುವಿಕೆ
18 ಚಹಾ ಅಂಗಡಿ
19 ಸ್ಟೌವ್ ಮತ್ತು ಪ್ರೆಷರ್ ಕುಕರ್ ರಿಪೇರಿ
20 ಬೆಸುಗೆ/ಫ್ಯಾಬ್ರಿಕೇಷನ್
21 ಜೇಡಿಮಣ್ಣಿನ ಬೊಂಬೆ ತಯಾರಿಕೆ
22 ಕಾಗದದ ಚೀಲ/ಪಾಲಿಥೀನ್ ಚೀಲ ಮಾರಾಟ
23 ಪತ್ರಿಕೆ ಹಾಗೂ ಪುಸ್ತಕದ ಅಂಗಡಿ
24 ಹಣ್ಣು ಮಾರುವಿಕೆ
25 ಹಣ್ಣಿನ ರಸ ಮಾರುವಿಕೆ
26 ಸಿಂಪಿಗ/ಸಿದ್ಧ ಉಡುಪು ತಯಾರಿಕೆ
27 ಕಾರ್ಡ್‌ಬೋರ್ಡ್ ಪೆಟ್ಟಿಗೆ ತಯಾರಿಕೆ
28 ಊದುಕಡ್ಡಿ ತಯಾರಿಕೆ
29 ಟೈರ್ ರೀಟ್ರೆಡಿಂಗ್
30 ಪೇಪರ್ ಹುಡುಗ
31 ಪಾಲಿಷ್ ಹುಡುಗ
32 ಹಾಲು ಮಾರಾಟ
33 ಮೀನು ಮಾರಾಟ
34 ಬೀಡಿ ಸುತ್ತುವಿಕೆ

ಅನುಬಂಧ 2

ಘೋಷಣಾ ಪತ್ರದ ಮಾದರಿ

ನಾನು, ಶ್ರೀ.........ಅವರ ಮಗ......... ವಯಸ್ಸು.........ಭಾರತ ಸರಕಾರದ ಪಟ್ಟಣ ಪ್ರದೇಶದ ಬಡಜನರಿಗಾಗಿ ಸ್ವಯಂ ಉದ್ಯೋಗ ಕಾರ್ಯಕ್ರಮದ ಮೇರೆಗೆ ರೂ.......(ರೂಪಾಯಿ ....) ಸಾಲಕ್ಕಾಗಿ ಈ ಮೂಲಕ ಅರ್ಜಿ ಹಾಕಿಕೊಳ್ಳುತ್ತೇನೆ.

ಈ ಸಾಲವನ್ನು ಮಂಜೂರು ಮಾಡುವ ಸಂಬಂಧದಲ್ಲಿ ನಾನು ಈ ಮುಂದಿನಂತೆ ಘೋಷಿಸುತ್ತೇನೆ :

1 ನಾನು.........ಊರಿನ ಶಾಶ್ವತ ನಿವಾಸಿಯಾಗಿದ್ದು, ದಿನಾಂಕ......ರಿಂದ ಈ ಪಟ್ಟಣದಲ್ಲಿ ವಾಸವಾಗಿದ್ದೇನೆ.

2 ನನ್ನ ಹೆಸರು ನಮೂದಾಗಿರುವ,......... ಊರಿನ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಕಛೇರಿ ನೀಡಿರುವ ಪಡಿತರ ಕಾರ್ಡ್ ಸಂಖ್ಯೆ.........ರಲ್ಲಿ ಸೇರಿರುವ ನನ್ನ ಕುಟುಂಬದ ಸದಸ್ಯರೆಲ್ಲರ ಒಟ್ಟು ಆದಾಯ ತಿಂಗಳಿಗೆ...... ರೂ.

3 ಪಟ್ಟಣ ಪ್ರದೇಶದ ಬಡ ಜನರಿಗಾಗಿ ಸ್ವಯಂ ಉದ್ಯೋಗ ಯೋಜನೆ ಅಥವಾ ಬೇರೆ ಯಾವುದೇ ಉದ್ಯೋಗ ಕಲ್ಪಿಸುವ ಯೋಜನೆಯಡಿ ಬರುವಂಥ ಯಾವುದೇ ಚಟುವಟಿಕೆಯ ಸಂಬಂಧದಲ್ಲಿ ನಾನು ಬ್ಯಾಂಕ್/ಉದರಿ ಸಂಸ್ಥೆಯ ಸಾಲಗಾರನಲ್ಲ.

4 ನಾನು ಯಾವುದೇ ಬ್ಯಾಂಕ್ ಅಥವಾ ಯಾವುದೇ ಉದರಿ ಸಂಸ್ಥೆಯ ಕಟಬಾಕಿದಾರನಲ್ಲ.

ಸಾಲಗಾರನ ಹೆಸರು :

ವಿಳಾಸ : ಸಾಲಗಾರನ ಸಹಿ

ಭಾರತದಲ್ಲಿ ವಿದ್ಯುನ್ಮಾನ ಬ್ಯಾಂಕಿಂಗು

[8ನೆಯ ಪುಟದಿಂದ ಮುಂದುವರಿದುದು]

ಭಾರತೀಯ ಸ್ಟೇಟ್ ಬ್ಯಾಂಕು ಕ್ರಿ.ಶ. 2000ದ ವೇಳೆಗೆ ಉಪಗ್ರಹದ ಮೂಲಕ ತನ್ನೆಲ್ಲ ಶಾಖೆಗಳನ್ನು ಒಂದು ಗಣಕಜಾಲದಲ್ಲಿ ಒಗ್ಗೂಡಿಸುವ ಮಹತ್ವಾಕಾಂಕ್ಷೆಯ ಕಾರ್ಯಕ್ರಮವನ್ನು ಹಾಕಿಕೊಂಡಿದೆಯಂತೆ.

ಇದಕ್ಕೆ ತಗಲುವ ವೆಚ್ಚವನ್ನು ಗ್ರಾಹಕರು ಭರಿಸಬೇಕಲ್ಲ ಎಂದರೆ, ಸೇವೆ ಉತ್ತಮಗೊಂಡರೆ ಗ್ರಾಹಕರು ಅದರ ವೆಚ್ಚವನ್ನು ಭರಿಸಲು ಅಷ್ಟಾಗಿ ಚಿಂತಿಸುವುದಿಲ್ಲ. ಇದು ಎಲ್ಲ ಕ್ಷೇತ್ರದಲ್ಲಿಯೂ ನಿಜ.

ನಮ್ಮ ವಿದ್ಯುನ್ಮಾನ ಬ್ಯಾಂಕಿಂಗ್ ತನ್ನ ಎಲ್ಲ ಆರಂಭಿಕ ಚಡಪಡಿಕೆಗಳನ್ನು, ಗೊಂದಲಗಳನ್ನು ನಿವಾರಿಸಿಕೊಂಡು ವಿದ್ಯುನ್ಮಾನ ಬ್ಯಾಂಕಿಂಗಿನಲ್ಲಿಯೇ ತನ್ನ ಉಜ್ವಲ ಭವಿಷ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವುದರಲ್ಲಿ ಸಂದೇಹವೇ ಇಲ್ಲ.

ಭಾರತದ ಗ್ರಾಹಕರಿಗೆ ಇದರ ಲಾಭ ದೊರಕಲಿ

ಅಮೆರಿಕದ ಬ್ಯಾಂಕಿಂಗ್ ವ್ಯವಸ್ಥೆ

ಭಾರತದಂತೆ ಅಮೆರಿಕವೂ ದೊಡ್ಡ ದೇಶ, ಭಾರತಕ್ಕಿಂತ ದೊಡ್ಡ ದೇಶ. ಅತ್ಯಂತ ಆಧುನಿಕವಾದ ಆ ದೇಶದ ಬ್ಯಾಂಕಿಂಗ್ ವ್ಯವಸ್ಥೆ ನಮ್ಮದಕ್ಕಿಂತ ಎಷ್ಟು ಭಿನ್ನ? ಅಮೆರಿಕದಿಂದ ನಾವು ಕಲಿಯಬೇಕಾದ ಪಾಠವೇನು?

ಅಮೆರಿಕದಲ್ಲಿ ಬ್ಯಾಂಕಿಂಗ್ ವ್ಯವಸ್ಥೆ 18ನೆಯ ಶತಮಾನದಲ್ಲಿ ಪ್ರಾರಂಭವಾಯಿತು. ಅಮೆರಿಕದ ಪ್ರಥಮ ಬ್ಯಾಂಕಾದ ಬ್ಯಾಂಕ್ ಆಫ್ ನಾರ್ತ್ ಅಮೆರಿಕ ಫಿಲಿಡೆಲ್ಫಿಯಾದಲ್ಲಿ ಸ್ಥಾಪಿತವಾಯಿತು. 1863ರಲ್ಲಿ ಅಮೆರಿಕದ ಕಾಂಗ್ರೆಸ್ ರಾಷ್ಟ್ರೀಯ ಬ್ಯಾಂಕಿಂಗ್ ಅಧಿನಿಯಮವನ್ನು ಜಾರಿಗೆ ತಂದಿತು. 1913ರಲ್ಲಿ ಅಮೆರಿಕದ ಕಾಂಗ್ರೆಸ್ಸು ಫೆಡರಲ್ ರಿಸರ್ವ್ ಅಧಿನಿಯಮವನ್ನು ಜಾರಿಗೆ ತಂದಿತು. ಈ ಅಧಿನಿಯಮಕ್ಕನುಗುಣವಾಗಿ ಅಮೆರಿಕದ ಇಂದಿನ ಬ್ಯಾಂಕಿಂಗ್ ವ್ಯವಸ್ಥೆ ಕಾರ್ಯ ನಿರ್ವಹಿಸುತ್ತಿದೆ.

ಏಕಕ ಬ್ಯಾಂಕಿಂಗ್ ವ್ಯವಸ್ಥೆ

ಅಮೆರಿಕದಲ್ಲಿ ಏಕಕ ಬ್ಯಾಂಕಿಂಗ್ ವ್ಯವಸ್ಥೆ ಅಸ್ತಿತ್ವದಲ್ಲಿದೆ. ಏಕಕ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಪ್ರತಿಯೊಂದು ಬ್ಯಾಂಕು ತನ್ನದೇ ಆದ ವೈಯಕ್ತಿಕ ಅಸ್ತಿತ್ವ ಹೊಂದಿರುತ್ತದೆ. ಈ ವ್ಯವಸ್ಥೆಯಲ್ಲಿ ಬೇರೆ ಬೇರೆ ಏಕಕ (unit) ಬ್ಯಾಂಕುಗಳು ಕಾರ್ಯ ನಿರ್ವಹಿಸುತ್ತವೆ. ಇದಕ್ಕೆ ವಿರುದ್ಧವಾದ ಶಾಖಾ ಬ್ಯಾಂಕಿಂಗ್ (Branch Banking) ಪದ್ಧತಿಯನ್ನು ಭಾರತದಲ್ಲಿ ಕಾಣುತ್ತೇವೆ. ನಮ್ಮ ದೇಶದಲ್ಲಿ 28 ರಾಷ್ಟ್ರೀಕೃತ ಬ್ಯಾಂಕುಗಳು ದೇಶದ ಹೆಚ್ಚಿನ ವಾಣಿಜ್ಯ ಮತ್ತು ಬ್ಯಾಂಕ್ ವ್ಯವಹಾರಗಳನ್ನು ತಮ್ಮ ಹತೋಟಿಯಲ್ಲಿ ಇಟ್ಟುಕೊಂಡಿವೆ. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಸಾವಿರಾರು ಬ್ಯಾಂಕುಗಳಿದ್ದು, ಅವುಗಳಲ್ಲಿ ಪ್ರತಿ ಬ್ಯಾಂಕೂ ಸಾಮಾನ್ಯವಾಗಿ ಕೆಲವೇ ಶಾಖೆಗಳನ್ನು ಹೊಂದಿರುತ್ತದೆ.

ಅಮೆರಿಕದಲ್ಲಿ ಎರಡು ಬಗೆಯ ವಾಣಿಜ್ಯ ಬ್ಯಾಂಕುಗಳು ಕಾರ್ಯ ನಿರ್ವಹಿಸುತ್ತವೆ. ಮೊದಲನೆಯ ಬಗೆಯ ಬ್ಯಾಂಕುಗಳಾದ ರಾಷ್ಟ್ರೀಯ ಚಾರ್ಟರ್ಡ್ ಬ್ಯಾಂಕುಗಳು ದೇಶದ ಉದ್ದಗಲಕ್ಕೂ ವ್ಯವಹಾರ ನಡೆಸಲು ಪರವಾನಗಿ ಪಡೆದಿರುತ್ತವೆ. ಅಮೆರಿಕನ್ ಎಕ್ಸ್‌ಪ್ರೆಸ್ ಬ್ಯಾಂಕ್, ಸಿಟಿ ಬ್ಯಾಂಕ್ ಮುಂತಾದ ರಾಷ್ಟ್ರೀಯ ಚಾರ್ಟರ್ಡ್ ಬ್ಯಾಂಕುಗಳು ದೇಶದ ಉದ್ದಗಲಕ್ಕೂ ವಾಣಿಜ್ಯ ವ್ಯವಹಾರಗಳನ್ನು ನಡೆಸುತ್ತವೆ. ಇವು ಯಾವುದೇ ರಾಜ್ಯದಲ್ಲಿ ಶಾಖೆಗಳನ್ನು ತೆಗೆಯಬಹುದು. ಎರಡನೆಯ ಪ್ರಕಾರದ ಬ್ಯಾಂಕುಗಳಾದ ರಾಜ್ಯ ಚಾರ್ಟರ್ಡ್ ಬ್ಯಾಂಕುಗಳು ಆಯಾ ರಾಜ್ಯಗಳಲ್ಲಿ ಮಾತ್ರ ವ್ಯವಹಾರ ನಡೆಸಲು ಪರವಾನಗಿ ಪಡೆದಿರುತ್ತವೆ. ರಾಷ್ಟ್ರೀಯ ಮತ್ತು ರಾಜ್ಯ ಚಾರ್ಟರ್ಡ್ ಬ್ಯಾಂಕುಗಳು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವಾಣಿಜ್ಯ ವ್ಯವಹಾರಕ್ಕೆ ಸಾಲ ಕೊಡುತ್ತವೆ. ಇವು ದೊಡ್ಡ ಗ್ರಾಹಕರ ಅಗತ್ಯಗಳನ್ನು ಪೂರೈಸುತ್ತವೆ. ಇವುಗಳಲ್ಲದೆ ಸ್ಥಳೀಯ ಜನರ ವೈಯಕ್ತಿಕ ಉಳಿತಾಯ, ಠೇವಣಿ ಮತ್ತು ಸಾಲಗಳ ಅಗತ್ಯವನ್ನು ಪೂರೈಸುವ ಅನೇಕ ಸಣ್ಣ ಬ್ಯಾಂಕುಗಳು ಇವೆ. ಉಳಿತಾಯ ಬ್ಯಾಂಕ್ ಮತ್ತು ಸಾಲ ಕೊಡುವ ಸಂಘಗಳು ಸಾಮಾನ್ಯ ಜನರ ಬ್ಯಾಂಕಿಂಗ್ ಅಗತ್ಯಗಳನ್ನು ಪೂರೈಸುತ್ತವೆ. ಇವುಗಳ ಪ್ರಮುಖ ವ್ಯವಹಾರವೆಂದರೆ ಅನುಭೋಗ ಸಾಲ ಮತ್ತು ಅಡವಾನ ಸಾಲ ನೀಡುವುದಾಗಿದೆ. ಮನೆ ಖರೀದಿ, ಕಾರು ಖರೀದಿ ಮುಂತಾದವುಗಳಿಗೆ ಈ ಬ್ಯಾಂಕುಗಳು ಸಾಲ ನೀಡುತ್ತವೆ.

ದೊಡ್ಡ ದೊಡ್ಡ ಕಂಪನಿಗಳು ಮತ್ತು ಸಂಸ್ಥೆಗಳು ತಮ್ಮ ಉದ್ಯೋಗಿಗಳಿಗೆ ಬ್ಯಾಂಕಿಂಗ್ ಸೌಲಭ್ಯ ನೀಡಲು ಉದರಿ ಸಂಘಗಳನ್ನು (Credit Unions) ನಡೆಸುತ್ತವೆ.

ಫೆಡರಲ್ ರಿಸರ್ವ್ ಬ್ಯಾಂಕ್ ವ್ಯವಸ್ಥೆ

ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಬ್ಯಾಂಕುಗಳು ಫೆಡರಲ್ ರಿಸರ್ವ್ ಬ್ಯಾಂಕ್ ನಿಯಂತ್ರಣಕ್ಕೊಳಪಟ್ಟಿವೆ. ಫೆಡರಲ್ ರಿಸರ್ವ್ ಬೋರ್ಡ್ ಎಂಬ ಮಂಡಳಿ ಇಡೀ ದೇಶದ ಆರ್ಥಿಕ ವ್ಯವಸ್ಥೆಯ ಮೇಲ್ವಿಚಾರಣೆ ಮಾಡುತ್ತದೆ. ಈ ವ್ಯವಸ್ಥೆಯಲ್ಲಿ 13 ಫೆಡರಲ್ ರಿಸರ್ವ್ ಬ್ಯಾಂಕುಗಳಿದ್ದು ಫೆಡರಲ್ ರಿಸರ್ವ್ ಬೋರ್ಡಿನ ಮೇಲ್ವಿಚಾರಣೆಯಲ್ಲಿ ಒಂದು ಪರಿಪೂರ್ಣ ಕೇಂದ್ರೀಯ ಬ್ಯಾಂಕಿನ ಹಾಗೆಯೇ ಇವು ಕಾರ್ಯ ನಿರ್ವಹಿಸುತ್ತವೆ. ಇವುಗಳಿಗೆ ಫೆಡರಲ್ ರಿಸರ್ವ್ ಬೋರ್ಡ್ ಆರ್ಥಿಕ ನೀತಿ ನಿರೂಪಣೆಯ ಮಾರ್ಗದರ್ಶನವನ್ನು ನೀಡುತ್ತದೆ. ಈ ಬ್ಯಾಂಕುಗಳು ಕಾರ್ಯ ನಿರ್ವಹಿಸುತ್ತಿರುವ ರಾಜ್ಯಗಳಲ್ಲಿ ಇರುವ ವಾಣಿಜ್ಯ ಬ್ಯಾಂಕುಗಳು ಮತ್ತು ಉದರಿ ಸಂಘಗಳು ಹೊಸ ಶಾಖೆಯನ್ನು ತೆರೆಯಬೇಕಾದರೆ ಸಂಬಂಧಪಟ್ಟ ಫೆಡರಲ್ ರಿಸರ್ವ್ ಬ್ಯಾಂಕಿನ ಪರವಾನಗಿ ತೆಗೆದುಕೊಳ್ಳಬೇಕಾಗುತ್ತದೆ. ಫೆಡರಲ್ ರಿಸರ್ವ್ ಬೋರ್ಡ್ ಸರಕಾರದ ಎಲ್ಲಾ ನೀತಿ ನಿರೂಪಣೆ ಸಂಸ್ಥೆಗಳ ನಿಕಟ ಸಂಪರ್ಕವನ್ನಿಟ್ಟುಕೊಂಡಿರುತ್ತದೆ. ಫೆಡರಲ್ ರಿಸರ್ವ್ ಬ್ಯಾಂಕುಗಳ ಒಟ್ಟಾರೆ ಆರ್ಥಿಕ ನೀತಿ ನಿರ್ಧಾರ ಕಾರ್ಯವನ್ನು ಫೆಡರಲ್ ಓಪನ್ ಮಾರ್ಕೆಟ್ ಸಮಿತಿ ಎಂಬ ಸಮಿತಿ ನಿರ್ವಹಿಸುತ್ತದೆ. ಈ ಸಮಿತಿಯಲ್ಲಿ ಫೆಡರಲ್ ರಿಸರ್ವ್ ಬೋರ್ಡಿನ ಸದಸ್ಯರು ಹಾಗೂ ಫೆಡರಲ್ ರಿಸರ್ವ್ ಬ್ಯಾಂಕುಗಳ ಅಧ್ಯಕ್ಷರುಗಳು ಸದಸ್ಯರಾಗಿರುತ್ತಾರೆ.

ಠೇವಣಿ ವಿಮಾ ಯೋಜನೆ

ಅಮೆರಿಕದಲ್ಲಿ ಸಣ್ಣ ಬ್ಯಾಂಕುಗಳ ಸಂಖ್ಯೆ ಹೆಚ್ಚು. ಅನೇಕ ಬ್ಯಾಂಕುಗಳು ಹಿಂದೆ ದಿವಾಳಿ ತೆಗೆದಿದ್ದುಂಟು. ಬ್ಯಾಂಕ್ ಠೇವಣಿದಾರರ ಹಿತರಕ್ಷಣೆಗಾಗಿ 1934ರಲ್ಲಿ ಫೆಡರಲ್ ಠೇವಣಿ ವಿಮಾ ನಿಗಮವನ್ನು (Federal Deposit Insurance Corporation) ಸ್ಥಾಪಿಸಲಾಯಿತು. ಈ ನಿಗಮ ಪ್ರತಿ ಖಾತೆಗೂ ಒಂದು ಲಕ್ಷ ಡಾಲರುಗಳ ವರೆಗೆ ಖಾತರಿಯನ್ನು ಕೊಡುತ್ತದೆ. ಸುಮಾರು 14,000 ವಾಣಿಜ್ಯ ಮತ್ತು ಉಳಿತಾಯ ಬ್ಯಾಂಕುಗಳು ಈ ನಿಗಮದ ಸದಸ್ಯ ಬ್ಯಾಂಕುಗಳಾಗಿವೆ. ಫೆಡರಲ್ ಉಳಿತಾಯ ಮತ್ತು ಸಾಲ ವಿಮಾ ನಿಗಮ (The Federal Savings and Loan Insurance Corporation) ಮತ್ತು ರಾಷ್ಟ್ರೀಯ ಉದರಿ ಸಂಘ ಶೇರು ವಿಮಾ ನಿಧಿ (The national Credit Union Share Insurance Fund)—ಈ ಎರಡು ಸಂಸ್ಥೆಗಳು ಉಳಿತಾಯ ಮತ್ತು ಸಾಲ ಸಂಘಗಳಲ್ಲಿ ಹಾಗೂ ಉದರಿ ಸಂಘಗಳಲ್ಲಿರುವ ಠೇವಣಿಗಳಿಗೆ ಪ್ರತಿ ಖಾತೆಗೂ ಒಂದು ಲಕ್ಷ ಡಾಲರುಗಳ ವರೆಗೆ ಖಾತರಿ ಕೊಡುತ್ತವೆ. ಪ್ರತಿಯೊಂದು ಬ್ಯಾಂಕು ಅಥವಾ ಉದರಿ ಸಂಘ ಈ ನಿಗಮಗಳ ಸದಸ್ಯತ್ವ ಹೊಂದಬೇಕೆಂಬ ಕಡ್ಡಾಯವಿಲ್ಲ. ಆದ್ದರಿಂದ ಇವುಗಳ ಸದಸ್ಯತ್ವವನ್ನು ಹೊಂದಿಲ್ಲದ ಬ್ಯಾಂಕುಗಳ ಗ್ರಾಹಕರು ಆ ಬ್ಯಾಂಕುಗಳು ಅಥವಾ ಉದರಿ ಸಂಘಗಳು ಮುಳುಗಿದಲ್ಲಿ ತಮ್ಮ ಠೇವಣಿ ಕಳೆದುಕೊಳ್ಳುವ ಸಾಧ್ಯತೆ ಇದೆ.

[16ನೆಯ ಪುಟ ನೋಡಿ]

ಎಚ್. ವೆಂಕಟರಾವ್
ಮೈಸೂರು ಬ್ಯಾಂಕ್
ಬಳ್ಳಾರಿ ಶಾಖೆ, ಬಳ್ಳಾರಿ

ಗ್ರಾಮೀಣ ಸಾಲ ವಸೂಲಿ: ಕೆಲವು ಚಿಂತನೆಗಳು

ಸಾಲವನು ಕೊಂಬಾಗ ಹಾಲೋಗರುಂಡಂತೆ, ಸಾಲಿಗನು ಬಂದು ಎಳೆವಾಗ ಕಿಬ್ಬದಿಯ ಕೀಲು ಮುರಿದಂತೆ ಎಂಬ ಸರ್ವಜ್ಞ ವಚನ ಈಗ ಸುಳ್ಳಾಗುತ್ತಿದೆ. ಸಾಲಿಗ ಸಾಲವನ್ನು ವಸೂಲು ಮಾಡುವುದೇ ಈಗ ಕಿಬ್ಬದಿಯ ಕೀಲು ಮುರಿದುಕೊಳ್ಳುವಷ್ಟು ಕಷ್ಟವಾದ್ದು.

ಸಾಲವನ್ನು ಕೊಡುವುದು ಬ್ಯಾಂಕುಗಳ ಕರ್ತವ್ಯವಾದಂತೆ, ಸಾಲವನ್ನು ಮರುಪಾವತಿ ಮಾಡುವುದು ಸಾಲಪಡೆದವರ ಕರ್ತವ್ಯ. ಆದರೆ ಪರಿಪೂರ್ಣ ಮರುಪಾವತಿ ಅಪೂರ್ವ; ಮುಖ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲಿ ವಿಚಾರಗಳ ಅರಿವು ಇಲ್ಲದಿರುವುದರಿಂದ ಸಮಯಕ್ಕೆ ಸರಿಯಾಗಿ ಮರುಪಾವತಿಯಾಗದೆ ಇರಬಹುದು; ಇದಕ್ಕೆ ವಿರುದ್ಧವಾಗಿ ಜನರಿಗೆ ಬ್ಯಾಂಕುಗಳ 'ತಿಳಿವಳಿಕೆ' ಜಾಸ್ತಿಯಾದಂತೆ, ಉದ್ದೇಶಪೂರ್ವಕ ಸುಸ್ತಿ ಹೆಚ್ಚುತ್ತಿದೆ. ಕೆಲವು ಸಂದರ್ಭಗಳಲ್ಲಿ ಬ್ಯಾಂಕುಗಳಿಗೆ ಪುನರ್ಧನ ದೊರೆತರೂ ಆ ನೆರವನ್ನು ಬ್ಯಾಂಕುಗಳು ಹಿಂತಿರುಗಿಸಬೇಕಾಗಿರುವುದರಿಂದ, ಸಾಲಪಡೆದವನು ಮರುಪಾವತಿ ಮಾಡುವುದೇ ಮುಖ್ಯವಾದ ಆಧಾರವಾಗಿದೆ. ಸಾಲಮೇಳಗಳು ಸಾಮಾನ್ಯವಾದ ಸಂಗತಿಯಾಗಿರುವ ಈ ದಿನಗಳಲ್ಲಿ ಸಾಲಗಳ ಮರುಪಾವತಿಗೆ ಇನ್ನಿಲ್ಲದ ಪ್ರಾಮುಖ್ಯ ಬರುತ್ತಲಿದೆ.

ಸಾಲ ಸುಸ್ತಿಯ ಕಾರಣಗಳು

ಸಾಲವೊಂದನ್ನು ನೀಡಲು ಹಲವಾರು ವಿಚಾರಗಳನ್ನು ಬ್ಯಾಂಕುಗಳು ಪರಿಶೀಲಿಸಬೇಕಾಗುತ್ತದೆ. ಸಾಲದ ಪ್ರಸ್ತಾಪ ಮುಂದಿಡಲ್ಪಟ್ಟಾಗ ಅದನ್ನು ಕೂಲಂಕಷವಾಗಿ ಪರಿಶೀಲಿಸಿ, ಉದ್ದೇಶದ ತಥ್ಯತೆ, ಸಾಲ ಪಡೆಯುವವನ ಪ್ರಾಮಾಣಿಕತೆ, ಮರುಪಾವತಿಯ ಸಾಧ್ಯತೆ, ಯೋಜನೆಗೆ ಬೇಕಾಗಬಹುದಾದ ಮೊತ್ತ, ಮರುಪಾವತಿಯ ಅವಧಿ ಇತ್ಯಾದಿ ಹಲವು ವಿಚಾರಗಳನ್ನು ಬ್ಯಾಂಕ್ ಅಧಿಕಾರಿಗಳು ಪರಿಶೀಲಿಸಬೇಕಾಗುತ್ತದೆ. ಕೆಲವು ಬಾರಿ ಇಂತಹ ಪರಿಶೀಲನೆ ನಡೆಯದಿದ್ದಾಗ ಸಾಲದ ದುರುಪಯೋಗವಾಗಿ, ಮರುಪಾವತಿ ಕಷ್ಟಸಾಧ್ಯ. ಈಗಿನ ಸಾಲಮೇಳಗಳಲ್ಲಿ ನೀಡಿದ ಸಾಲಗಳಿಗೆ ಈ ಮಾತು ಹೆಚ್ಚು ಅನ್ವಯವಾಗುತ್ತದೆ. ರಾಜಕಾರಣಿಗಳು ಸೂಚಿಸುವ ನೂರಾರು ಜನರಿಗೆ ಕಿರು ಅವಧಿಯಲ್ಲಿ ಕಡ್ಡಾಯವಾಗಿ ಸಾಲ ನೀಡಬೇಕಾಗಿರುವ ಬ್ಯಾಂಕ್ ಅಧಿಕಾರಿಗಳಿಂದ ಪೂರ್ಣಪ್ರಮಾಣದ ಪರಿಶೀಲನೆ ಅಸಾಧ್ಯ. ಸುಸ್ತಿ ಸಾಲಗಳಿಗೆ ಇಂತಹ ಲೋಪದೋಷಗಳು ಮುಖ್ಯವಾಗುತ್ತವೆ.

ಸರ್ಕಾರ ಸೂಚಿಸುವ ಸಾಲ ಪ್ರಸ್ತಾಪಗಳು ತತ್ವದಲ್ಲಿ ಗಟ್ಟಿಯಾಗಿದ್ದರೂ ಪ್ರಾಯೋಗಿಕವಾಗಿ ಟೊಳ್ಳಾಗಿರುವುದು ವಾಸ್ತವವಾಗಿರುವಾಗ, ಅಂತಹ ಸಾಲಗಳ ಮರುಪಾವತಿಯೂ ಕಷ್ಟದಲ್ಲಿದೆ.

ಪ್ರಸ್ತುತ ವಸೂಲಿ ವ್ಯವಸ್ಥೆ

ಸುಸ್ತಿ ಸಾಲಗಳು ಖಾತೆಯಲ್ಲಿ ಮುಂದುವರಿದಾಗ, ಸಾಲ ಪಡೆದವನ ಮನವೊಲಿಸಿ ವಸೂಲಿಗೆ ಪ್ರಯತ್ನಿಸುವ ಯತ್ನ ವಿಫಲವಾದಾಗ, ನ್ಯಾಯಾಲಯಕ್ಕೆ ಮೊರೆ ಹೋಗುವುದು ಮಾತ್ರ ಬ್ಯಾಂಕಿಗೆ ಉಳಿದಿರುವ ದಾರಿ. ಆದರೆ ನ್ಯಾಯಾಲಯದಲ್ಲಿ ದಾವೆ ಇತ್ಯರ್ಥವಾಗುವುದು ಬಹಳ ನಿಧಾನದ ಕ್ರಿಯೆಯಾಗಿರುತ್ತದೆ. ಇದರಿಂದ ಬ್ಯಾಂಕರ್ ತುಂಬ ತೊಡಕುಗಳನ್ನು ಎದುರಿಸಬೇಕಾಗುತ್ತದೆ. ಮೊದಲನೆಯದಾಗಿ, ಸಾಲ ಪಡೆದವನು ನೀಡಿರುವ ತಗಾದೆ ಪತ್ರಗಳು ಚಾಲ್ತಿಯಲ್ಲಿರಬೇಕು. ಬ್ಯಾಂಕು ಮತ್ತು ಸಾಲ ಪಡೆದವನ ಮಧ್ಯೆ ಸ್ನೇಹಪರ ಬಾಂಧವ್ಯ ಇಲ್ಲದಿದ್ದರೆ, ಸಾಲ ಪಡೆದವನು ಸಾಲದ ಪುನರುಜ್ಜೀವನ ಪತ್ರಕ್ಕೆ ಸಹಿ ಹಾಕದೆ ಬ್ಯಾಂಕಿಗೆ ತೊಂದರೆ ಕೊಡುವ ಸಾಧ್ಯತೆ ಇರುತ್ತದೆ.

ಬ್ಯಾಂಕು ಸಾಲದ ವಸೂಲಿಗಾಗಿ ನ್ಯಾಯಾಲಯದಲ್ಲಿ ದಾವೆ ಹೂಡಿದಾಗ, ಅದಕ್ಕೆ ಪ್ರತಿಯಾಗಿ ಸಾಲವನ್ನೇ ಮನ್ನಾ ಮಾಡಬೇಕೆಂದು ಸಾಲ ಪಡೆದವನು ವಾದಿಸುವುದೂ ಇದೆ. ಕೆಲವು ತಾಂತ್ರಿಕ ಕಾರಣಗಳಿಂದಾಗಿ ಅವರಿಗೆ ಜಯ ದೊರೆಯಲೂಬಹುದು. ಇಂಗ್ಲಿಷ್ ಬರದ ಸಾಲಿಗ ತನಗೆ ಆ ಭಾಷೆ ಬರುವುದಿಲ್ಲವೆಂಬ ವಾದವನ್ನು ಮುಂದೊಡ್ಡಿ, ಇಂಗ್ಲಿಷ್ ಮುದ್ರಿತ ನಮೂನೆಗಳಿಗೆ ಸಹಿ ಮಾಡಿಸಿಕೊಂಡು ವಿಚಾರಗಳನ್ನು ವಿವರಿಸದೆ ಬ್ಯಾಂಕಿನವರು ಮೋಸ ಮಾಡಿದರೆಂದು ವಾದಿಸಲೂಬಹುದು. ಬ್ಯಾಂಕಿನ ವ್ಯವಹಾರಗಳಲ್ಲಿ ಪ್ರಾದೇಶಿಕ ಭಾಷೆಯ ಪೂರ್ಣಬಳಕೆ ಅನಿವಾರ್ಯವಾಗುವುದೆಂಬುದನ್ನು ಇಂತಹ ಪ್ರಕರಣಗಳು ಎತ್ತಿಹಿಡಿಯುತ್ತವೆ. ಕಾಲಕಾಲಕ್ಕೆ ಬದಲಾಗುವ ರಿಸರ್ವ್ ಬ್ಯಾಂಕ್ ನಿಯಂತ್ರಿತ ಬಡ್ಡಿದರಗಳಿಗೆ ತನ್ನ ಜವಾಬ್ದಾರಿಯಿಲ್ಲ ಮತ್ತು ಆ ವಿಚಾರವನ್ನು ತನಗೆ ತಿಳಿಸಲಿಲ್ಲವೆಂದು ಸಾಲಿಗ ವಾದಿಸಬಹುದು. ಬಡ್ಡಿ ದರ ಜಾಸ್ತಿಯೆಂದು ಸಹ ಆತ ವಾದಿಸಬಹುದು. ಮರುಪಾವತಿಯನ್ನು ಮುಂದೂಡುವ ಉದ್ದೇಶದಿಂದಲೇ ಸಾಲ ಪಡೆದವನು ನ್ಯಾಯಾಲಯದಲ್ಲಿ ಕೊಕ್ಕೆ ಹಾಕಿ ಕೂರಬಹುದು. ಈ ಮಧ್ಯೆ ಸಾಕಷ್ಟು ಕಾಲ ಸರಿದು ಹೋಗಿದ್ದು, ಆ ಸಮಯದಲ್ಲಿ ಸಾಲಕ್ಕೆ ಆಧಾರವಾಗಿದ್ದ ಆಸ್ತಿಯನ್ನೇ ಸಾಲ ಪಡೆದವನು ಮಾರಲು ಸಾಧ್ಯವಾಗಬಹುದು. ಈ ಮಧ್ಯೆ ಸಂಬಂಧಪಟ್ಟ ದಾಖಲೆ ಪತ್ರಗಳು ವಾಯಿದೆ ಮೀರಿದವಾದಾಗಲೂ ದಾವೆ ಬ್ಯಾಂಕಿಗೆ ವ್ಯತಿರಿಕ್ತವಾಗಿ ಬರಬಹುದು.

ಎಲ್ಲ ವಿಚಾರಗಳೂ ಸರಿಯಾಗಿದ್ದು, ತನ್ನ ಪರವಾದ ತೀರ್ಪನ್ನು ಬ್ಯಾಂಕು ಪಡೆದರೂ, ಅದನ್ನು ಜಾರಿಗೆ ತರಲು ಬ್ಯಾಂಕು ಪುನಃ ನ್ಯಾಯಾಲಯದ ಅನುಮತಿಯನ್ನು ಪಡೆಯಬೇಕಾಗುತ್ತದೆ. ಸಾಲದ ವಜಾಕ್ಕಾಗಿ ಆಸ್ತಿಯನ್ನು ಮಾರಲಾಗುತ್ತಿದೆಯೆಂದು ತಿಳಿದಾಗ, ಸಾಲಪಡೆದವನ ಮತ್ತು ಖರೀದಿಸುವವರ ಒಳಸಂಚಿನಿಂದಾಗಿ, ಆಸ್ತಿಯನ್ನು ಖರೀದಿಸಲು ಯಾರೂ ಮುಂದೆ ಬರದಿರಬಹುದು. ಅಥವಾ ತೀರ ಕಡಿಮೆ ದರಕ್ಕೆ ಆಸ್ತಿಯ ಖರೀದಿ ಪ್ರಸ್ತಾಪ ಬಂದು, ಅದರಿಂದ ಸಾಲವೇ ತೀರದಿರುವ ಸಂದರ್ಭ ಉಂಟಾಗಬಹುದು.

ಈಗ ಚಾಲ್ತಿಯಲ್ಲಿರುವ ಸಾಲ ವಸೂಲಿ ವಿಧಾನಗಳ ವೈಫಲ್ಯಗಳು ಇದರಿಂದ ತಿಳಿಯುತ್ತವೆ. ಉದ್ದೇಶಪೂರ್ವಕವಾಗಿ ಸಾಲಕ್ಕೆ ಮರುಪಾವತಿ ಮಾಡದೆ ವಂಚಿಸುವ ಹಲವಾರು ಪ್ರಯತ್ನಗಳು ಸಫಲವಾಗುವ ಸಾಧ್ಯತೆಗಳು ಈಗಿನ ವ್ಯವಸ್ಥೆಯಲ್ಲಿ ಬಹಳ ಇವೆ. ಸಾರ್ವಜನಿಕರ ಹಣ ದುರುಪಯೋಗವಾಗದಂತೆ ತಡೆಯಲು ವಸೂಲಿ ವಿಧಾನಗಳನ್ನು ಇನ್ನೂ ಕಠಿಣಗೊಳಿಸುವ ಆವಶ್ಯಕತೆ ಇದೆ.

ವಸೂಲಿಯನ್ನು ಉತ್ತಮಪಡಿಸಲು ಕೆಲವು ಸಲಹೆಗಳು

ಸಾಲವನ್ನು ಸರ್ಕಾರಕ್ಕೆ ಬರಬೇಕಾಗಿರುವ ಬಾಕಿ ಎಂದು ಪರಿಗಣಿಸಿ, ಆದಾಯ ತೆರಿಗೆ. ಅಥವಾ

ಮು. ಶಶಿಧರ
ಮೈಸೂರು ಬ್ಯಾಂಕು
ಕಣಕಟ್ಟೆ 573 144

ಮಾರಾಟ ತೆರಿಗೆಯನ್ನು ವಸೂಲು ಮಾಡಲು ಬಳಸುವ ತೀವ್ರ ಮತ್ತು ಕಠಿಣವಾದ ವಿಧಾನಗಳನ್ನು ಬ್ಯಾಂಕ್ ಸಾಲ ವಸೂಲಿಗೂ ಬಳಸುವ ಕುರಿತು ವಿಚಾರ ಮಾಡಬೇಕಾಗಿದೆ. ಸಾಲಕ್ಕೆ ಆಧಾರವಾಗಿ ಕೊಟ್ಟ ಆಸ್ತಿಯನ್ನು ಮಾರಲು ಸಾಲಗಾರನಿಗೆ ಅವಕಾಶ ಸಿಗುವ ಮುಂಚೆಯೇ ಅದನ್ನು ವಿಲೇವಾರಿ ಮಾಡಿ ತನ್ನ ಸಾಲಕ್ಕೆ ಹಾಕಿಕೊಳ್ಳಲು ಬ್ಯಾಂಕಿಗೆ ಅಧಿಕಾರ ಕೊಟ್ಟರೆ, ಉದ್ದೇಶಪೂರ್ವಕ ಸುಸ್ತಿದಾರಿಕೆಯನ್ನು ಹದ್ದುಬಸ್ತಿನಲ್ಲಿಡಬಹುದು.

ಸಾಲವನ್ನು ಮಂಜೂರು ಮಾಡುವಾಗ ಸಾಲ ಪಡೆಯುವವನ ಪ್ರಾಮಾಣಿಕತೆ ಮತ್ತು ಪ್ರಸ್ತಾಪದ ಪರಿಶೀಲನೆ ಸರಿಯಾಗಿ ನಡೆದಿದ್ದರೆ, ಸಾಲದ ವಸೂಲಿ ಕಷ್ಟವಾಗಲಾರದು. ಆದ್ದರಿಂದ ಸಾಲದ ಪ್ರಸ್ತಾಪಗಳನ್ನು ವಿವರವಾಗಿ ಪರಿಶೀಲಿಸುವ ಬ್ಯಾಂಕುಗಳ ಕೆಲಸವನ್ನು ಅವಸರಗೊಳಿಸುವ ಅಥವಾ ಕಾಲಾವಕಾಶವನ್ನು ಮೊಟಕುಗೊಳಿಸುವ ಒತ್ತಡವನ್ನು ಎಂದೂ ತರಬಾರದು. ರಾಜಕೀಯ ಉದ್ದೇಶದ ಸಾಲಗಳ ಹಂಚಿಕೆ ಇಂತಹ ಪರಿಶೀಲನೆಗೆ ಅವಕಾಶ ಕೊಡುತ್ತಲಿಲ್ಲ. ಬಡಜನರನ್ನು ಉದ್ಧಾರ ಮಾಡಬೇಕೆಂಬ ಸರ್ಕಾರದ ಆಶಯ ಉದಾತ್ತವಾದುದೇ. ಆದರೆ ಸಾಲವೆಂಬ ಹೆಸರಿನಲ್ಲಿ ಹಣ ಹಂಚಲು ಬ್ಯಾಂಕನ್ನು ದುರುಪಯೋಗ ಮಾಡಿಕೊಂಡಾಗ, ಸಾಲದ ಪರಿಕಲ್ಪನೆಯೇ ಬದಲಾಗತೊಡಗುತ್ತದೆ. ಬಡಜನರಿಗೆ ಮತ್ತು ಅನುಕೂಲವಾದ ರಾಜಕೀಯ ಬೆಂಬಲಿಗರಿಗೆ ಹಣವನ್ನು ಹಂಚಲು ಬ್ಯಾಂಕುಗಳೇ ಬೇಕಾಗಿಲ್ಲ. ಅದನ್ನು ನೇರವಾಗಿ ಸರ್ಕಾರವೇ ಮಾಡಬಹುದು. ತೀರ ಕಡಿಮೆ ಅವಧಿಯಲ್ಲಿ ನೂರಾರು ಸಾಲಗಳನ್ನು ನೀಡಬೇಕೆಂದು ಒತ್ತಾಯಿಸುವಾಗ ತಕ್ಕಷ್ಟು ಸಿಬ್ಬಂದಿ ಇದ್ದು, ಸಾಲ ಪ್ರಸ್ತಾಪಗಳ ಪರಿಶೀಲನೆ ನಡೆಯುವುದನ್ನು ಖಾತರಿಪಡಿಸಿಕೊಳ್ಳಬೇಕು. ಒಂದೇ ಪ್ರದೇಶದಲ್ಲಿ ನೂರಾರು ಹಸುಗಳನ್ನು ಅಥವಾ ಕುರಿಗಳನ್ನು ಕೊಳ್ಳಲು ಸಾಲ ನೀಡುವಾಗ, ವೈದ್ಯಕೀಯ ಸೌಲಭ್ಯ, ಮೇವು ಮೊದಲಾದವು ದೊರೆಯುವವೆಂದು ಖಾತರಿಪಡಿಸಿಕೊಳ್ಳಬೇಕು. ಅಪಾತ್ರರಿಗೆ ಸಾಲ ನೀಡುವಂತೆ ರಾಜಕೀಯ ಪಕ್ಷಗಳು ಬ್ಯಾಂಕನ್ನು ಒತ್ತಾಯಿಸಬಾರದು.

ಸಾಲ ವಸೂಲಿಗೆ ಬ್ಯಾಂಕುಗಳು ನ್ಯಾಯಾಲಯಕ್ಕೆ ಮೊರೆಹೊಗುವ ಈಗಿನ ವಿಧಾನದಲ್ಲಿ ಇರುವ ಲೋಪದೋಷಗಳನ್ನು ಸರಿಪಡಿಸಿ, ಇಡೀ ಪ್ರಕ್ರಿಯೆಯನ್ನು ಸರಳಗೊಳಿಸಬೇಕು. ಸಾಲಕ್ಕೆ ಸಂಬಂಧಿಸಿದ ದಾವೆಗಳನ್ನು ಒಂದೆರಡು ತಿಂಗಳುಗಳಲ್ಲಿ ಖಂಡಿತವಾಗಿ ಇತ್ಯರ್ಥಗೊಳಿಸುವ ವ್ಯವಸ್ಥೆಯನ್ನು ಸ್ಥಾಪಿಸಬೇಕು. ಇದಕ್ಕಾಗಿಯೇ ಜಿಲ್ಲಾ ಮಟ್ಟಗಳಲ್ಲಿ ಪ್ರತ್ಯೇಕ ನ್ಯಾಯಾಲಯವನ್ನು ಸ್ಥಾಪಿಸುವ ವಿಚಾರವನ್ನು ಪರಿಶೀಲಿಸಬೇಕು.

ಕೆಲವು ಸರಕಾರಗಳು ಆಗಿಂದಾಗ್ಗೆ ಸಾಲವನ್ನು ಅಥವಾ ಬಡ್ಡಿಯನ್ನು ಮನ್ನಾ ಮಾಡುವ ಪರಿಪಾಠವನ್ನು ಬೆಳೆಸಿಕೊಂಡಿವೆ. ಇದರಿಂದ ಸಾಲಗಾರರಲ್ಲಿ ಮರುಪಾವತಿ ಮಾಡುವ ಶಕ್ತಿಯಿದ್ದರೂ, ಮನ್ನಾ ಆಗಬಹುದೆಂಬ ಆಶೆಯಿಂದ ಮರುಪಾವತಿಯನ್ನೇ ನಿಲ್ಲಿಸಿ, ಸಾಲದ ಕಲ್ಪನೆಯನ್ನೇ ಹುಸಿಮಾಡುವ ಸಾಧ್ಯತೆ ಇರುತ್ತದೆ. ಸಾಲಗಳ ಮನ್ನಾ ಮಾಡುವಿಕೆಯೇ ಇರಬಾರದು.

ಕೊಟ್ಟ ಸಾಲಗಳು ಕಾಲಕ್ಕೆ ಸರಿಯಾಗಿ ವಸೂಲಿಯಾಗುವುದು ಬ್ಯಾಂಕುಗಳ ಮತ್ತು ದೇಶದ ಆರ್ಥಿಕ ಹಿತಾಸಕ್ತಿಯಿಂದ ಬಹು ಮುಖ್ಯ. ಇದಕ್ಕಾಗಿ ಸಾಲ ವಸೂಲಿಯ ಕುರಿತು ಹೆಚ್ಚಿನ ಚಿಂತನೆಗಳಾಗಬೇಕಾದುದು ಮುಖ್ಯ. ●

ಅಮೆರಿಕದ ಬ್ಯಾಂಕಿಂಗ್ ವ್ಯವಸ್ಥೆ

[14ನೆಯ ಪುಟದಿಂದ ಮುಂದುವರಿದುದು]

ಬಡ್ಡಿದರದ ಸಂರಚನೆ

ಅಮೆರಿಕದಲ್ಲಿ ಚಲ ಬಡ್ಡಿದರ ವ್ಯವಸ್ಥೆ ಇದೆ. ಬ್ಯಾಂಕ್ ಉದರಿಗೆ ಬೇಡಿಕೆ ಹೆಚ್ಚಾದಾಗ ಸಾಲದ ಮೇಲಿನ ಬಡ್ಡಿ ದರಗಳು ಹೆಚ್ಚಾಗುವುವು. ಬ್ಯಾಂಕ್ ಉದರಿಗೆ ಬೇಡಿಕೆ ತಗ್ಗಿದಾಗ ಮುಂಗಡಗಳ ಮೇಲಿನ ಬಡ್ಡಿ ದರಗಳು ಕಡಿಮೆಯಾಗುತ್ತವೆ. ಠೇವಣಿಗಳ ಮೇಲಿನ ಬಡ್ಡಿ ದರಗಳು ಇದೇ ರೀತಿ ಬದಲಾಗುತ್ತಿರುತ್ತವೆ.

ಗಣಕೀಕರಣ

ಬ್ಯಾಂಕಿಂಗ್ ವ್ಯವಹಾರಗಳು ಹೆಚ್ಚಿದುದರಿಂದ ಹಾಗೂ ಗ್ರಾಹಕರ ಸೇವೆಯ ಗುಣಮಟ್ಟವನ್ನು ಕಾಯ್ದುಕೊಳ್ಳಲು ಮತ್ತು ಉತ್ತಮಗೊಳಿಸಲು ಬ್ಯಾಂಕುಗಳು ಗಣಕಗಳನ್ನು ಉಪಯೋಗಿಸುತ್ತವೆ.

ಯಾಂತ್ರೀಕರಣದಿಂದ ಮತ್ತು ಮುಂದುವರಿದ ಸಂಪರ್ಕ ವ್ಯವಸ್ಥೆಯಿಂದ ಬ್ಯಾಂಕುಗಳು ಖಾತೆದಾರರಿಗೆ ಅತ್ಯುತ್ತಮ ಸೇವೆ ಸಲ್ಲಿಸಲು ಸಾಧ್ಯವಾಗಿದೆ. ಅತ್ಯಂತ ಕಡಿಮೆ ಮತ್ತು ಸರಳ ನಿಯಮಗಳ ಹಾಗೂ ಸರಳ ವಿಧಾನಗಳ ಬಳಕೆಯಿಂದ ಕಡಿಮೆ ಕಾಗದಗಳ ಸೃಷ್ಟಿ. (ಕೆಲವು ಸಲ ದೂರವಾಣಿಗಳ ಮೂಲಕ ವ್ಯವಹಾರಗಳು ಇತ್ಯರ್ಥ) ಹಾಗೂ ಕಂಪ್ಯೂಟರುಗಳ ಮೂಲಕ ಕೇಂದ್ರೀಕೃತ ಲೆಕ್ಕ ಪದ್ಧತಿಯನ್ನು ಅನುಸರಿಸಲಾಗುತ್ತದೆ. ಎಪ್ಪತ್ತರ ದಶಕದ ಆದಿಭಾಗದಲ್ಲಿ ಚೆಕ್ಕುಗಳಿಗೆ ಅಗ್ಗದ ಪರ್ಯಾಯವಾಗಿ ಉದರಿ ಕಾರ್ಡುಗಳ ಬಳಕೆಯನ್ನು ಬ್ಯಾಂಕುಗಳು ಜಾರಿಗೆ ತಂದುವು. ಅನೇಕ ಗ್ರಾಹಕರು ಉದರಿ ಕಾರ್ಡುಗಳನ್ನು ತಮ್ಮ ದೈನಂದಿನ ವ್ಯವಹಾರಗಳಲ್ಲಿ ಬಳಸುತ್ತಾರೆ. ಗ್ರಾಹಕರಿಗೆ ವಾರದ ಎಲ್ಲಾ ದಿನಗಳಲ್ಲೂ, ದಿನದ 24 ಘಂಟೆಗಳಲ್ಲಿ, ಒಂದು ಮಿತಿಯೊಳಗೆ ಬ್ಯಾಂಕಿಂಗ್ ಸೌಲಭ್ಯ ದೊರೆಯುವ ವ್ಯವಸ್ಥೆ ಇದೆ. ಈ ಉದ್ದೇಶಕ್ಕಾಗಿ ಬ್ಯಾಂಕಿನ ಹೊರಗೆ ಮತ್ತು ಅಂಗಡಿ ಸಮುಚ್ಚಯಗಳಲ್ಲಿ ಸ್ವಯಂಚಲಿ ಸರಾಫ್ ಯಂತ್ರಗಳನ್ನು (Automatic teller machines) ಸ್ಥಾಪಿಸಲಾಗಿದೆ. ವ್ಯವಹಾರಗಳನ್ನು ಗಣಕೀಕರಿಸುವುದರಿಂದ ಖಾತೆಗಳ ತಃಖ್ತೆಯನ್ನು ಕಾಲಕ್ಕೆ ಸರಿಯಾಗಿ ತಯಾರಿಸುವುದು ಸುಲಭವಾಗಿದೆ. ನಗದು ವಹಿವಾಟುಗಳು ತುಂಬಾ ಕಡಿಮೆ. ದೊಡ್ಡ ಮೊಬಲಗಿನ ಚೆಕ್ಕುಗಳ ಪಾವತಿಯನ್ನು ತ್ವರಿತಗೊಳಿಸಲು ತೀರುವೆ ಮನೆಯ ಸ್ವತಶ್ಚಲಿ ಪಾವತಿ ಪದ್ಧತಿ (Clearing house automated Payment System) ವ್ಯವಸ್ಥೆ ಇದೆ. ಈ ವ್ಯವಸ್ಥೆಯಲ್ಲಿ ಸದಸ್ಯ ಬ್ಯಾಂಕುಗಳ ನಿಧಿಗಳನ್ನು ಕಂಪ್ಯೂಟರ್ ಜಾಲದ ಮೂಲಕ ಅಂದಂದೇ ವರ್ಗಾಯಿಸಲು ಸಾಧ್ಯವಾಗಿದೆ. ಆಧುನಿಕ ತಂತ್ರಜ್ಞಾನದ ಬಳಕೆಯಿಂದ ಬ್ಯಾಂಕುಗಳು ತಮ್ಮ ವಹಿವಾಟನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಸಾಧ್ಯವಾಗಿದೆ. ಗ್ರಾಹಕರಿಗೆ ಉತ್ತಮ ಸೇವಾ ಸೌಲಭ್ಯವನ್ನು ಒದಗಿಸುವುದರಲ್ಲಿ ಸಫಲವಾಗಿದ್ದು, ಅಧಿಕ ಉತ್ಪಾದಕತೆ ಮತ್ತು ಅಧಿಕ ಲಾಭವನ್ನು ಗಳಿಸುವುದರಲ್ಲಿ ಯಶಸ್ವಿಯಾಗಿವೆ. ●

ಗುಣಮಟ್ಟ ವಲಯ

ಉದ್ಯೋಗಿಗಳು ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ತಂತಮ್ಮ ಕಾರ್ಯ ನಿರ್ವಹಣೆಯ ಮಟ್ಟದಲ್ಲಿ ಸಮಿತಿಗಳನ್ನು ರಚಿಸಿಕೊಂಡು ಆಗಾಗ್ಗೆ ಕಲೆತು ಸಮಾಲೋಚನೆ ನಡೆಸಿ ಆಡಳಿತವರ್ಗದೊಂದಿಗೆ ಸಹಕರಿಸಿ ಗುಣಮಟ್ಟವನ್ನು ಹೆಚ್ಚಿಸುವ ಜಪಾನೀ ಪರಿಕಲ್ಪನೆ ನಮ್ಮ ದೇಶಕ್ಕೆ ಎಷ್ಟರ ಮಟ್ಟಿಗೆ ಅನ್ವಯವಾದೀತು?

'ಶ್ರೀ……ಅವರೆ ಉತ್ಪಾದನ ವಿಧಾನ ಸುಧಾರಿಸಲು ನೀವು ನೀಡಿದ್ದ ಸಲಹೆಯನ್ನು ಆಡಳಿತವರ್ಗ ಒಪ್ಪಿದೆ. ಇದಕ್ಕಾಗಿ ನಿಮಗೆ ಪ್ರಶಸ್ತಿಯೂ ಲಭಿಸಿದೆ. ಅಭಿನಂದನೆಗಳು.' ದೊಡ್ಡ ಕಂಪನಿಯ ಮುಖ್ಯಸ್ಥನೊಬ್ಬ ಕೆಳಗಿನ ಸ್ತರದ ಕುಶಲ ಕಾರ್ಮಿಕನನ್ನು ಉದ್ದೇಶಿಸಿ ಇಂಥ ಮಾತುಗಳನ್ನಾಡುವುದು ಜಪಾನ್, ಅಮೆರಿಕಾದಂಥ ಕೈಗಾರಿಕಾ ದೇಶಗಳಲ್ಲಿ ಸರ್ವೇಸಾಮಾನ್ಯ. ಉದ್ಯೋಗಿಯ ಪ್ರತಿಭೆಗೂ ಮನ್ನಣೆಯ ಮಣೆ ನೀಡಬೇಕಾದ ಔಚಿತ್ಯ, ಅಗತ್ಯಗಳನ್ನು ಆ ದೇಶಗಳು ಬಹಳ ಹಿಂದೆಯೇ ಗ್ರಹಿಸಿದ್ದುವು. ಭಾರತದ ಹಲವು ಕಂಪನಿಗಳಲ್ಲೂ ಈ ರೀತಿ ಉದ್ಯೋಗಿ ಸಲಹಾ ಯೋಜನೆ ಜಾರಿಯಲ್ಲಿದೆ.

ಮುಂದೆ ಉದ್ಯೋಗಿಗಳನ್ನು ಆಡಳಿತದಲ್ಲಿ ಹೆಚ್ಚು ಹೆಚ್ಚು ತೊಡಗಿಸಲು ಅನುಕೂಲವಾಗುವಂತೆ ಭಾಗೀದಾರಿ ವ್ಯವಸ್ಥಾಪನದ (Participative Management) ಆಲೋಚನೆಯನ್ನು ಕಾರ್ಯರೂಪಕ್ಕೆ ತರಲಾಯಿತು. ಉದ್ಯೋಗಿಗಳ ಪ್ರತಿನಿಧಿಗಳಿಗೆ ಆಡಳಿತ ಮಂಡಳಿಯಲ್ಲಿ ಪ್ರಾತಿನಿಧ್ಯ ನೀಡಿದುದರಿಂದ ಕೈಗಾರಿಕಾ ಬಾಂಧವ್ಯ ಸುಧಾರಿಸಿತು.

ಉದ್ಯೋಗಿ ಸಲಹಾ ಯೋಜನೆ, ಆಡಳಿತ ಮಂಡಳಿಯಲ್ಲಿ ಪ್ರಾತಿನಿಧ್ಯ ಮುಂದುವರಿದ ದೇಶಗಳ ಪ್ರಯೋಗಶೀಲತೆ ಇಲ್ಲಿಗೇ ನಿಲ್ಲಲಿಲ್ಲ. ಉದ್ಯೋಗಿಗಳನ್ನು ಕೇವಲ ಕೆಲಸ ಮಾಡುವ ಯಂತ್ರಗಳು ಎಂದಷ್ಟೇ ಭಾವಿಸದೆ, ಸಂಸ್ಥೆಯ ಸರ್ವತೋಮುಖ ಅಭಿವೃದ್ಧಿಯಲ್ಲಿ ಅವರೂ ಭಾಗಿಗಳು ಎನ್ನುವ ಭಾವನೆ ಬೇರೂರಿಸಲು ಸತತವಾದ ಪ್ರಯತ್ನಗಳು ನಡೆಯುತ್ತಲೇ ಹೋದುವು.

ಗುಣಮಟ್ಟ ವಲಯದ ಉಗಮ

ಗುಣಮಟ್ಟ ವಲಯದ (ಕ್ವಾಲಿಟಿ ಸರ್ಕಲ್) ಸ್ಥಾಪನೆ ಸುಧಾರಣೆಯ ನಿಟ್ಟಿನಲ್ಲಿ ಮತ್ತೊಂದು ಹೆಜ್ಜೆಯೆನಿಸಿತು. ಮಾನವ ಸಂಪನ್ಮೂಲ ಅಭಿವೃದ್ಧಿಯ ವಿಷಯದಲ್ಲಿ ಹಲವಾರು ಪ್ರಯೋಗಗಳನ್ನು ನಡೆಸಿರುವ ಜಪಾನ್ ದೇಶವೇ ಗುಣಮಟ್ಟ ವಲಯದ ಪರಿಕಲ್ಪನೆಗೂ ಜನ್ಮ ನೀಡಿದೆ. ಗುಣಮಟ್ಟ ವಲಯವೆಂದರೆ ಉದ್ಯೋಗಿಗಳು ತಮ್ಮ ಕಾರ್ಯವ್ಯಾಪ್ತಿಯಲ್ಲಿ, ಅಂದರೆ ತಂತಮ್ಮ ವಿಭಾಗ, ಕಾರ್ಯಾಗಾರದ ಮಟ್ಟದಲ್ಲಿ, ಸಮಿತಿಗಳನ್ನು ರಚಿಸಿಕೊಳ್ಳುವುದು. ಈ ಸಮಿತಿಗಳು ಆಗಾಗ್ಗೆ ಕಲೆತು ಚರ್ಚಿಸಿ ಉತ್ಪಾದನ ವಿಧಾನದಲ್ಲಿ ಸುಧಾರಣೆಗಳು, ಲೋಪದೋಷಗಳು ಮುಂತಾದುವನ್ನು ಚರ್ಚಿಸಿ ಆಡಳಿತ ವರ್ಗಕ್ಕೆ ಸಲಹೆಗಳನ್ನು ನೀಡುತ್ತವೆ. ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಗೆ ಆಡಳಿತವರ್ಗದ ಇಂಥ ಸಮಿತಿಗಳಿಂದ ಬಹಳ ಅನುಕೂಲವಾಗುತ್ತದೆ. ಸಾಮಾನ್ಯವಾಗಿ ಕಂಪನಿಗಳಲ್ಲಿ ತೀರ್ಮಾನಗಳು ಮೇಲಿನ ಆಡಳಿತ ವರ್ಗದಲ್ಲೇ ಕೇಂದ್ರೀಕೃತವಾಗಿರುವುದರಿಂದ, ಅದನ್ನು ಕೆಲಸಗಾರರ ಮಟ್ಟಕ್ಕೂ ವಿಕೇಂದ್ರೀಕರಿಸುವುದೇ ಗುಣಮಟ್ಟ ವಲಯದ ಪ್ರಧಾನ ಉದ್ದೇಶವಾಗಿದೆ.

ಉದ್ಯೋಗಿಗಳು ತಮ್ಮ ಕಾರ್ಯಪರಿಸರದಲ್ಲಿ ತಲೆಹಾಕುವ ಸಮಸ್ಯೆಗಳನ್ನು ತಮ್ಮತಮ್ಮಲ್ಲೇ ಚರ್ಚೆಯ ಮೂಲಕ ಪರಿಹರಿಸಿಕೊಳ್ಳುವುದರಿಂದ ಪರಸ್ಪರ ಅರಿವು ಹೆಚ್ಚುತ್ತದೆ. ತಮ್ಮ ಅನಿಸಿಕೆಗಳಿಗೂ ಬೆಲೆ ಇದೆ ಎಂಬ ಆತ್ಮವಿಶ್ವಾಸ ಉದ್ಯೋಗಿಗಳಲ್ಲಿ ಮೂಡುತ್ತದೆ. ಸಂಘಶಕ್ತಿಯ ಮಹತ್ವವನ್ನೂ ಪರಿಚಯಮಾಡಿಕೊಡುತ್ತದೆ. ಸಂಸ್ಥೆಗೆ ಪರಿಪೂರ್ಣ ವ್ಯವಸ್ಥಾಪನ ಸಿದ್ಧಾಂತವೊಂದನ್ನು ಒದಗಿಸುತ್ತದೆ.

ಬ್ಯಾಂಕುಗಳಲ್ಲಿ ಗುಣಮಟ್ಟ ವಲಯ

ಗುಣಮಟ್ಟ ವಲಯದ ಪರಿಕಲ್ಪನೆ ಆರಂಭವಾದದ್ದು ಕಾರ್ಖಾನೆಗಳಲ್ಲಿ. ಉತ್ಪಾದಿತ ವಸ್ತುಗಳ ಗುಣಮಟ್ಟವನ್ನು ಸುಧಾರಿಸಲು ಗುಣಮಟ್ಟ ನಿಯಂತ್ರಣ ವಲಯಗಳು (ಕ್ವಾಲಿಟಿ ಕಂಟ್ರೋಲ್ ಸರ್ಕಲ್) ಸ್ಥಾಪಿತವಾದುವು. ಆದರೆ 'ನಿಯಂತ್ರಣ' ಎಂಬ ಪದದ ಬಗ್ಗೆ ಕಾರ್ಮಿಕ ವರ್ಗಕ್ಕೆ ಉಂಟಾದ ಅಪನಂಬಿಕೆ, ಹಿಂಜರಿಕೆ ದೂರ ಮಾಡಲು 'ಗುಣಮಟ್ಟ ವಲಯ' ಎಂಬ ಹೆಸರನ್ನು ಉಳಿಸಿಕೊಳ್ಳಲಾಯಿತು. ಉತ್ಪನ್ನದ ಗುಣಮಟ್ಟವನ್ನಾಗಲಿ, ಸಂಖ್ಯೆಯನ್ನಾಗಲಿ ಕಾರ್ಖಾನೆಗಳಲ್ಲಿ ನಿರ್ದಿಷ್ಟ ಮಾನದಂಡದಿಂದ ಅಳೆಯಲು ಸಾಧ್ಯ. ಆದರೆ ಬ್ಯಾಂಕುಗಳಲ್ಲಿ ಗುಣಮಟ್ಟ ವಲಯದ ಬಗ್ಗೆ ಆಲೋಚಿಸಿದರೆ ಹಲವಾರು ತೊಡಕುಗಳು ಎದುರಾಗುತ್ತವೆ.

1 ಬ್ಯಾಂಕುಗಳಲ್ಲಿ ಉತ್ಪಾದಿತವಾಗುವ ವಸ್ತುವೆಂದರೆ 'ಸೇವೆ' ಮತ್ತು ಸೇವೆ ಒಂದೇ. ಅದನ್ನು ನಿರ್ದಿಷ್ಟ ಮಾನದಂಡಗಳಿಂದ ಅಳೆಯಲಾಗದು.

2 ಬ್ಯಾಂಕುಗಳ ಆಡಳಿತ ಬಹುಮಟ್ಟಿಗೆ ವಿಕೇಂದ್ರೀಕೃತ ವ್ಯವಸ್ಥೆ. ಗುಣಮಟ್ಟ ವಲಯ ಶಾಖಾಮಟ್ಟದಲ್ಲಿ ಕೆಲಸ ನಿರ್ವಹಿಸಿದರೆ, ತೀರ್ಮಾನ ತೆಗೆದುಕೊಳ್ಳುವ ಆಡಳಿತ ಕಛೇರಿ ಎಲ್ಲೋ ದೂರ ಇರುತ್ತದೆ. ಆದರೆ ಬಹುಪಾಲು ಕಾರ್ಖಾನೆಗಳಲ್ಲಿ ಎಲ್ಲ ಒಂದೇ ಸೂರಿನಡಿ ಇರುತ್ತದೆ.

3 ಬ್ಯಾಂಕುಗಳಲ್ಲಿ ಶಾಖಾ ಮಟ್ಟದಲ್ಲಿ ವರ್ಗಾವರ್ಗಿ ಬಹಳ ಹೆಚ್ಚು. ಇದರಿಂದ ಗುಣಮಟ್ಟ ವಲಯ ಸಮಿತಿಯ ಸದಸ್ಯತ್ವದಲ್ಲೂ ಬದಲಾವಣೆ ಹೆಚ್ಚು. ಸದಸ್ಯತ್ವಕ್ಕೆ ಸೇರಲು ಯಾವುದೇ ನಿರ್ಬಂಧವಿಲ್ಲ. ಹಾಗಾಗಿ ಗುಣಮಟ್ಟ ವಲಯದಲ್ಲಿ ಸ್ಥಿರತೆ ಕಾಣಲು ಕಷ್ಟಸಾಧ್ಯ.

4 ಕಾರ್ಖಾನೆಗಳಲ್ಲಿ ಗುಣಮಟ್ಟ ವಲಯವೆಂದರೆ ಉದ್ಯೋಗಿ/ಕಾರ್ಮಿಕರು ರೂಪಿಸಿಕೊಂಡ ಬೇಡಿಕೆ. ಅಲ್ಲಿ ಮೇಲಧಿಕಾರಿಗಳಿಗೆ ಪ್ರವೇಶವಿಲ್ಲ. ಇಬ್ಬರ ಕರ್ತವ್ಯಗಳೂ ನಿರ್ದಿಷ್ಟವಾಗಿ ರೂಪುಗೊಂಡಿರುತ್ತದೆ. ಆದರೆ ಬ್ಯಾಂಕುಗಳಲ್ಲಿ ಕಾರ್ಯವಿಧಾನ ಉದ್ಯೋಗಿ, ಅಧಿಕಾರಿ, ವ್ಯವಸ್ಥಾಪಕ ವರ್ಗ ಈ ಮೂರೂ ಸ್ತರಗಳಲ್ಲಿ ಪರಸ್ಪರ ಹೆಣೆದುಕೊಂಡಿರುತ್ತದೆ. ಸಣ್ಣ ಶಾಖೆಯಲ್ಲಿ ಒಬ್ಬ ಉದ್ಯೋಗಿ ಹಲವಾರು ವಿಭಾಗಗಳ ಕೆಲಸ ನಿರ್ವಹಿಸಬೇಕಾಗುತ್ತದೆ. ಒಂದೊಂದು ವಿಭಾಗಕ್ಕೂ ಒಂದೊಂದು ಗುಣಮಟ್ಟ ವಲಯ ಸ್ಥಾಪಿಸಬೇಕಾಗುತ್ತದೆ. ಇದೂ ಒಂದು ಸಮಸ್ಯೆ.

ಆದ್ದರಿಂದ ಬ್ಯಾಂಕುಗಳಲ್ಲಿ ಗುಣಮಟ್ಟ ವಲಯ ರಚಿಸುವಾಗ ಈ ತೊಡಕುಗಳನ್ನು ಗಮನದಲ್ಲಿರಿಸಿಕೊಂಡು ನಿರ್ದಿಷ್ಟ ಕಾರ್ಯಕ್ರಮ ರೂಪಿಸಿಕೊಳ್ಳಬೇಕು.

ಬ್ಯಾಂಕುಗಳಲ್ಲಿ ಅನುಷ್ಠಾನ ಹೇಗೆ?

ವ್ಯವಸ್ಥಾಪನೆ: ಮೇಲಿನ ವ್ಯವಸ್ಥಾಪಕವರ್ಗ ಮೊದಲ ಹೆಜ್ಜೆಯಾಗಿ ಉದ್ಯೋಗಿಗಳು ನೀಡುವ ಸಲಹೆಯನ್ನು ರಚನಾತ್ಮಕವಾಗಿ ಪರಿಶೀಲಿಸಬೇಕು. ಉನ್ನತವ್ಯವಸ್ಥಾಪಕವರ್ಗ ಮತ್ತು ಉದ್ಯೋಗಿಗಳು
[18ನೆಯ ಪುಟ ನೋಡಿ

ಕೆ. ಎನ್. ಮಹಾಬಲ
ಭಾರತೀಯ ಸ್ಟೇಟ್ ಬ್ಯಾಂಕ್
ಬನಶಂಕರಿ ಎರಡನೆ ಹಂತ
ಬೆಂಗಳೂರು 560 070

ಗುತ್ತಿಗೆ ಕಂಪನಿಗಳು

ಈಚೆಗೆ ಭಾರತದಲ್ಲಿ ಹುಟ್ಟಿಕೊಂಡು ಬೆಳೆಯುತ್ತಿರುವ ಗುತ್ತಿಗೆ ಕಂಪನಿಗಳು ಒಂದು ದೃಷ್ಟಿಯಲ್ಲಿ ಬ್ಯಾಂಕುಗಳೊಂದಿಗೆ ಸ್ಪರ್ಧೆ ನಡೆಸುತ್ತಿವೆ, ಇನ್ನೊಂದು ದೃಷ್ಟಿಯಲ್ಲಿ ಅವಕ್ಕೆ ಪೂರಕವಾಗಿವೆ. ಬ್ಯಾಂಕುಗಳೂ ಈ ವ್ಯವಹಾರದಲ್ಲಿ ಆಸಕ್ತಿ ತಳೆಯುತ್ತಿವೆ.

ಮ. ಮ. ಗೋಖಲೆ
ಮೈಸೂರು ಬ್ಯಾಂಕ್
ಮೈಸೂರು ಮುಖ್ಯ ಶಾಖೆ

ಈಚಿನ ವರ್ಷಗಳಲ್ಲಿ ಬ್ಯಾಂಕುಗಳಿಗೆ ಸ್ಪರ್ಧಿಗಳಾಗಿ ಹಾಗೂ ಪೂರಕ ಸಂಸ್ಥೆಗಳಾಗಿ ಅನೇಕ ರೀತಿಯ ಹಣಕಾಸು ಸಂಸ್ಥೆಗಳು ಭಾರತೀಯ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಪ್ರಾರಂಭವಾಗುತ್ತಿವೆ, ಸ್ಥಾಪನೆಯಾಗಿವೆ. ಇವುಗಳಲ್ಲಿ ಚಿಟ್ ಫಂಡ್ ಯಾ ಚೀಟಿ ವ್ಯವಹಾರದ ಸಂಸ್ಥೆಗಳು, ಖಾಸಗಿ ಹಾಗೂ ಸರ್ಕಾರಿ ಕಂಪನಿಗಳು, ಹಣಕಾಸು ಕಾರ್ಪೊರೇಷನ್ನುಗಳು ಮತ್ತು ಗುತ್ತಿಗೆ ಕಂಪನಿಗಳು ಮುಖ್ಯವಾಗಿವೆ. ಈ ಸಂಸ್ಥೆಗಳು ಬ್ಯಾಂಕುಗಳ ಮೂಲತತ್ತ್ವವಾದ 'ಠೇವಣಿ ಹಾಗೂ ಸಾಲ' ವ್ಯವಹಾರದ ಜತೆಗೆ ಇತರ ಸಂಬಂಧಪಟ್ಟ ವ್ಯವಹಾರಗಳನ್ನೂ ಮಾಡುತ್ತಿವೆ. ಕೇಂದ್ರ ಸರ್ಕಾರದ ಕೆಲವು ಸಡಿಲವಾದ ನೀತಿ ನಿಯಮಾವಳಿಗಳಿಂದ ಬ್ಯಾಂಕೇತರ ಸಂಸ್ಥೆಗಳ ಕಡೆಗೆ ಜನರ ಒಲವು ಜಾಸ್ತಿ

ಗುಣಮಟ್ಟ ವಲಯ

[17ನೆಯ ಪುಟದಿಂದ ಮುಂದುವರಿದಿದೆ]

—ಇವರಿಬ್ಬರ ನಡುವೆ ಕಾರ್ಯನಿರ್ವಹಿಸಬೇಕಾಗಿರುವ ಮಧ್ಯಮ ವ್ಯವಸ್ಥಾಪಕ ವರ್ಗಕ್ಕೆ ಗುಣಮಟ್ಟ ವಲಯದ ಬಗ್ಗೆ ಸ್ಪಷ್ಟ ತಿಳುವಳಿಕೆಯನ್ನು ನೀಡಬೇಕು. ಏಕೆಂದರೆ ಗುಣಮಟ್ಟ ವಲಯದ ಸ್ಥಾಪನೆಯಿಂದ ಮಧ್ಯಮ ವ್ಯವಸ್ಥಾಪಕವರ್ಗದ ಲೋಪದೋಷಗಳು ಮೇಲಿನ ವ್ಯವಸ್ಥಾಪಕವರ್ಗಕ್ಕೆ ನೇರವಾಗಿ ತಿಳಿಯುತ್ತವೆಂಬ ಅಳುಕು ಇರುತ್ತದೆ. ಅದು ದೂರವಾಗಬೇಕು. ಗುಣಮಟ್ಟ ವಲಯದ ಸ್ಥಾಪನೆ ಅವರಿಗೆ ದೈನಂದಿನ ಸಮಸ್ಯೆಗಳಿಂದ ಬಿಡುವು ದೊರಕಿಸುತ್ತದೆ. ಆ ಬಿಡುವನ್ನು ಸಂಸ್ಥೆಯ ರಚನಾತ್ಮಕ ಕಾರ್ಯಗಳಿಗೆ ಅವರು ಬಳಸಿಕೊಳ್ಳಬಹುದು.

ಕಾರ್ಮಿಕ ಸಂಘ : ಗುಣಮಟ್ಟ ವಲಯದಲ್ಲಿ ಪಾಲ್ಗೊಳ್ಳುವಿಕೆ ಐಚ್ಛಿಕವಾದುದು. ಇದು ಯಾವುದೇ ಕಾರ್ಮಿಕ ಸಂಘದ ವಿರೋಧಿ ಅಲ್ಲ ಎಂದು ಉದ್ಯೋಗಿಗಳಿಗೆ ಮನವರಿಕೆ ಮಾಡಿಕೊಡುವುದೂ ಮುಖ್ಯ. ಗುಣಮಟ್ಟ ವಲಯದ ಉದ್ದೇಶ ಉದ್ಯೋಗಿಗಳ 'ಕಾರ್ಯ ಸಂಸ್ಕೃತಿ'ಯ ಉತ್ತೇಜನ ಮಾತ್ರ. ವೇತನ ವಿಮರ್ಶೆ, ಕುಂದುಕೊರತೆಗಳು, ಬಡ್ತಿ, ವರ್ಗಾವಣೆ ಮುಂತಾದ ಸಮಸ್ಯೆಗಳನ್ನು ಮುಂದೆಯೂ ಕಾರ್ಮಿಕ ಸಂಘಗಳೇ ನಿರ್ವಹಿಸುತ್ತವೆ ಎಂಬುದನ್ನೂ ದೃಢಪಡಿಸಬೇಕು.

ಆರಂಭದಲ್ಲಿ ಸಣ್ಣದಾದ, ಅಂದರೆ ಸುಲಭವಾಗಿ ಪರಿಹರಿಸಬಹುದಾದ ಸಮಸ್ಯೆಯೊಂದನ್ನು ಎತ್ತಿಕೊಳ್ಳುವುದು ಒಳ್ಳೆಯದು. ಇದರಿಂದ ಸಮಸ್ಯೆಯ ಪರಿಹಾರ, ಮತ್ತು ಅದರ ಅನುಷ್ಠಾನ ಎಲ್ಲರಲ್ಲೂ ಆತ್ಮವಿಶ್ವಾಸವನ್ನು ಮೂಡಿಸುತ್ತದೆ.

ತರಬೇತಿ : ಗುಣಮಟ್ಟ ವಲಯದ ಚಟುವಟಿಕೆಗೆ ಸಂಬಂಧಿಸಿದ ಎಲ್ಲರೂ, ಅಂದರೆ ಮೇಲ್ವಿಚಾರಕರು, ವ್ಯವಸ್ಥಾಪಕರು, ಉದ್ಯೋಗಿಗಳು, ವಿಶೇಷ ತರಬೇತಿಯನ್ನು ಪಡೆಯುವುದೂ ಉಪಯುಕ್ತ. ಈ ತರಬೇತಿಯಲ್ಲಿ ಗುಂಪು ಚಲನಶೀಲತೆ (ಗ್ರೂಪ್ ಡೈನಮಿಕ್ಸ್), ನಾಯಕತ್ವಗುಣ, ಸಮಸ್ಯಾಪರಿಹಾರ ಮುಂತಾದ ವಿಶಿಷ್ಟ ಅಂಶಗಳು ಅಡಕವಾಗಿರಬೇಕು.

ಸಂಯೋಜನೆ : ವಿವಿಧ ಶಾಖೆ/ಬ್ಯಾಂಕುಗಳಲ್ಲಿ ಕ್ರಿಯಾಶೀಲವಾಗಿರುವ ಗುಣಮಟ್ಟ ವಲಯದ ಚಟುವಟಿಕೆಗಳನ್ನು ಸಂಯೋಜಿಸುವುದೂ ಅಷ್ಟೇ ಮುಖ್ಯವಾದುದು. ದೇಶಾದ್ಯಂತ ಇಂಥ ಸಂಯೋಜನೆ ಕಷ್ಟಕರವಾದುದು. ಆದರೆ ಒಂದು ನಗರ/ವಲಯ ಮಟ್ಟದಲ್ಲಿ ಮಾದರಿ ಸಮೀಕ್ಷೆ ನಡೆಸಬಹುದು. ಗುಣಮಟ್ಟ ವಲಯದ ಕಾರ್ಯದ ಪರಿಶೀಲನೆ, ಪರ್ಯಾವರ್ತನೆ ಸಂಸ್ಥೆಗೆ ಅನೇಕ ರೀತಿಯಲ್ಲಿ ನೆರವಾಗಬಲ್ಲದು. ಬ್ಯಾಂಕಿನ ಧ್ಯೇಯೋದ್ದೇಶಗಳು, ಗ್ರಾಹಕ ದೃಷ್ಟಿಕೋನ, ಸ್ಪರ್ಧಾತ್ಮಕ ಸ್ಥಿತಿ, ಮಾನವ ಸಂಪನ್ಮೂಲದ ಉತ್ತಮ ಬಳಕೆ, ವೆಚ್ಚ-ಅನುಕೂಲ ಅಧ್ಯಯನ ಮುಂತಾದ ಅಂಶಗಳನ್ನು ವಿಶ್ಲೇಷಿಸುವುದು ಇದರಿಂದ ಸಾಧ್ಯವಾಗುತ್ತದೆ.

ಅಡ್ಡಿ ಆತಂಕಗಳು : ಭಾರತದಂತಹ ಸಂಕೀರ್ಣ ದೇಶದಲ್ಲಿ ಗುಣಮಟ್ಟ ವಲಯದ ಪರಿಕಲ್ಪನೆಯನ್ನು ಬೇರೂರಿಸುವಾಗ ಹಲವಾರು ತೊಡಕುಗಳು ಎದುರಾಗುತ್ತವೆ.

1 ಕಾರ್ಮಿಕ ಮನೋಭಾವ : ಜಪಾನ್ ದೇಶದಲ್ಲಿ ಗುಣಮಟ್ಟ ವಲಯದ ಪರಿಕಲ್ಪನೆ ಯಶಸ್ಸು ಕಂಡಿರುವುದು ನಿಜವಾದರೂ ಜಪಾನಿ ಕಾರ್ಮಿಕನ ಉಳಿಗಮಾನ್ಯ ಮನೋಭಾವಕ್ಕೂ ಭಾರತೀಯ ಕಾರ್ಮಿಕನ ಪ್ರಜಾಪ್ರಭುತ್ವವಾದಿ ಮನೋಭಾವಕ್ಕೂ ಬಹಳ ಅಂತರವಿರುವುದನ್ನು ಗಮನಿಸಲೇಬೇಕು. 'ಗುಣಮಟ್ಟ ವಲಯ'ವೆಂದರೆ ಉದ್ಯೋಗಿಗಳನ್ನು ಕಾರ್ಮಿಕ ಸಂಘದ ವಿರುದ್ಧ ಎತ್ತಿಕಟ್ಟುವ ಆಡಳಿತ ವರ್ಗದ ಯತ್ನ ಎಂಬ ಭೀತಿ ದೂರವಾಗಬೇಕು.

2 ಸಮರ್ಪಣ ಮನೋಭಾವ : ಮತ್ತೊಮ್ಮೆ ಜಪಾನ್ ಕಾರ್ಮಿಕನೊಡನೆ ಹೋಲಿಸಿದಾಗ ಭಾರತದ ಕಾರ್ಮಿಕರಲ್ಲಿ ಹಲವಾರು ವ್ಯತ್ಯಾಸಗಳಿವೆ. ಜಪಾನ್‌ನಲ್ಲಿ ಶಿಕ್ಷಣಕ್ಕೂ ಉದ್ಯೋಗಕ್ಕೂ ಬೇರ್ಪಡಿಸಲಾಗದ ಸಂಬಂಧವಿದೆ. ಇದರಿಂದ ಉದ್ಯೋಗಿ ಸಂಸ್ಥೆಗೆ ತನ್ನನ್ನು ತಾನೇ ಸಮರ್ಪಿಸಿಕೊಳ್ಳಲು ಸಾಧ್ಯ. ಆದರೆ ಭಾರತದಲ್ಲಿ ಹಾಗಿಲ್ಲ. ಒಬ್ಬ ವಿಜ್ಞಾನದ ವಿದ್ಯಾರ್ಥಿ ಪರಿಸ್ಥಿತಿಯ ಒತ್ತಡಕ್ಕೆ ಮಣಿದು ಬ್ಯಾಂಕ್ ಕೆಲಸಕ್ಕೆ ಸೇರಿದರೆ ಉದ್ಯೋಗದ ಅತೃಪ್ತಿಯ ಬಲೆಯನ್ನು ಕಿತ್ತು ಹೊರಬಂದು ಸಂಸ್ಥೆಗೆ ಅರ್ಪಿಸಿಕೊಳ್ಳಲು ಅವನಿಗೆ ಹಲವಾರು ವರ್ಷಗಳೇ ಬೇಕಾಗುತ್ತವೆ.

3 ಯಾಂತ್ರಿಕ ದೃಷ್ಟಿ : ಮತ್ತೊಂದು ಅಂಜಿಕೆಯೆಂದರೆ ಗುಣಮಟ್ಟ ವಲಯದ ಫಲಿತಾಂಶಗಳಿಗೆ ಸಂಬಂಧಿಸಿದುದು. ಇದರ ಕಾರ್ಯಕಲಾಪಗಳು ಈಗಿರುವ ಹಲವಾರು ಸಮಿತಿಗಳಂತೆ (ಗ್ರಾಹಕ ಸಮಿತಿ, ಗ್ರಾಹಕ ಸಮಾಲೋಚನಾ ಸಭೆ ಇತ್ಯಾದಿ) ಮಾಮೂಲೀ ಕಲಾಪವಾಗುವ ಅಪಾಯವೂ ಇದ್ದೇ ಇದೆ.

ವಿಫಲತೆ : 'ಗುಣಮಟ್ಟ ವಲಯ' ಸ್ಥಾಪಿತವಾಗಿ ಯಾವುದೇ ಕಾರಣಕ್ಕೆ ಸೋಲನ್ನು ಅನುಭವಿಸಿದರೆ ಅದರ ಪರಿಣಾಮಗಳೂ ಗಂಭೀರವಾದವು. ಕೈಗಾರಿಕಾ ಬಾಂಧವ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತವೆ. ಪರಸ್ಪರ ದೋಷಾರೋಪಣೆಯೂ ನಡೆಯಬಹುದು.

ಇಷ್ಟೆಲ್ಲ ತೊಡಕುಗಳಿದ್ದರೂ ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ಒಳ್ಳೆಯ ಪಾತ್ರ ವಹಿಸಬಲ್ಲ ಗುಣಮಟ್ಟ ವಲಯದ ಬಗ್ಗೆ ಆಶಾದಾಯಕ ಅಭಿಪ್ರಾಯ ಹೊಂದಲು ಸಾಧ್ಯ. 1980ರಲ್ಲಿ ಜಪಾನಿನ ಫ್ಯೂಜಿ ಬ್ಯಾಂಕ್ ತನ್ನ ಅನೇಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಗುಣಮಟ್ಟ ವಲಯ ನೆರವಾಯಿತು. ಇಂಥ ಉತ್ತೇಜನಕರ ಬೆಳವಣಿಗೆಯಿಂದ ಸ್ಫೂರ್ತಿಗೊಂಡು ಮುನ್ನಡೆದರೂ 'ಗುಣಮಟ್ಟ ವಲಯ' ಭಾರತದಂಥ ದೇಶದಲ್ಲೂ ಯಶಸ್ಸು ಕಂಡೀತು. ●

ಯಾಗಿ, 'ಕೇವಲ ಸಾಲಕ್ಕಾಗಿ ಬ್ಯಾಂಕ್' ಎಂಬ ಪರಿಪಾಟಿ ಜನರಲ್ಲಿ ಬೆಳೆಯುತ್ತಿರುವುದು ಬ್ಯಾಂಕ್ ತಜ್ಞರು ಚಿಂತಿಸಬೇಕಾದ ವಿಷಯ.

ಈ ಲೇಖನದಲ್ಲಿ ಬ್ಯಾಂಕುಗಳ ಮೂಲತತ್ತ್ವವನ್ನೇ ಆಧರಿಸಿ, ಬ್ಯಾಂಕುಗಳಿಗೆ ಪೂರಕವಾಗಿ, ಬ್ಯಾಂಕಿನ ಸಹ ಸಂಸ್ಥೆಗಳಾಗಿ ಬೆಳೆದು ಜನಪ್ರಿಯವಾಗುತ್ತಿರುವ 'ಲೀಸಿಂಗ್ ಕಂಪನಿ' ಹಾಗೂ ಅದರ ವ್ಯವಹಾರಕ್ಕೆ ಸಂಬಂಧಿಸಿದ ಕೆಲವು ಅಂಶಗಳನ್ನು ತಿಳಿಸುವ ಪ್ರಯತ್ನ ಮಾಡಲಾಗಿದೆ.

ವ್ಯವಹಾರದ ಸ್ವರೂಪ

'ಲೀಸಿಂಗ್' ಎಂಬುದಕ್ಕೆ ಕನ್ನಡದಲ್ಲಿ 'ಗುತ್ತಿಗೆ' ಎಂಬ ಅರ್ಥ ಇದೆ. ಕೆಲವು ಕಡೆ ಇದನ್ನು 'ಭೋಗ್ಯ' ಎಂಬ ಹೆಸರಲ್ಲಿ ಕರೆಯುತ್ತಾರೆ. ಗುತ್ತಿಗೆ ವ್ಯವಹಾರದಲ್ಲಿ ಗುತ್ತಿಗೆದಾರ (Lessee) ಗುತ್ತಿಗೆದಾತನಿಂದ (Lessor) ಒಂದು ಒಪ್ಪಂದದ ಮೇಲೆ ಒಂದು ಸ್ಥಿರಾಸ್ತಿ ಯಾ ಚರಾಸ್ತಿಯ ಹಕ್ಕನ್ನು ಪಡೆಯುತ್ತಾನೆ. ಈ ಒಪ್ಪಂದದ ಪ್ರಕಾರ ನಿಗದಿಪಡಿಸಿದ ಬಾಡಿಗೆಯನ್ನು (Lease Rent) ನಿಗದಿತ ಅವಧಿಯಲ್ಲಿ ಕೊಡುತ್ತಿರುತ್ತಾನೆ. ಆಸ್ತಿಯ ಸಂಪೂರ್ಣ ಒಡೆತನ ಗುತ್ತಿಗೆದಾತನದ್ದೇ ಆಗಿದ್ದು ಕೇವಲ ಅದನ್ನು ಉಪಯೋಗಿಸುವ ಯಾ ಭೋಗಿಸುವ ಹಕ್ಕು ಮಾತ್ರ ಗುತ್ತಿಗೆದಾರನದ್ದಾಗಿರುತ್ತದೆ. ಇದೇ ರೀತಿಯ ಇನ್ನೊಂದು ವಿಧಾನವಾದ 'ಬಾಡಿಗೆ ಕೊಳ್ಳಿಕೆ'ಯಲ್ಲಿ (Hire-Purchase System) ಸಂಪೂರ್ಣ ಕಂತು ಹಣ ಪಾವತಿಯಾದ ಮೇಲೆ ವ್ಯಕ್ತಿಗೆ ಆಸ್ತಿಯ ಒಡೆತನ ವರ್ಗಾವಣೆ ಹೊಂದುತ್ತದೆ.

ನಮ್ಮ ದೇಶದಲ್ಲಿ ಗುತ್ತಿಗೆ ಪದ್ಧತಿ ಒಂದು ಅಥವಾ ಇನ್ನೊಂದು ರೀತಿಯಲ್ಲಿ ಹಲವಾರು ವರ್ಷಗಳಿಂದ ಬಳಕೆಯಲ್ಲಿದೆ. ಬಲು ಹಿಂದಿನ ಕಾಲದಲ್ಲಿ ಹಳ್ಳಿಗಳಲ್ಲಿ ವ್ಯವಸಾಯಕ್ಕೆ ಸಂಬಂಧಪಟ್ಟ ಕೃಷಿ ಭೂಮಿ, ಎತ್ತು, ಎತ್ತಿನ ಗಾಡಿಗಳನ್ನು ಗುತ್ತಿಗೆಯ ಮೇಲೆ ಬಳಸುವ ಪದ್ಧತಿ ಇತ್ತು. ಹಿಂದುಳಿದ ಗ್ರಾಮೀಣ ಪ್ರದೇಶಗಳಲ್ಲಿ ಈಗಲೂ ಈ ಬಳಕೆ ಜಾರಿಯಲ್ಲಿದೆ. ಅಂತೆಯೇ ನಗರ ಪ್ರದೇಶದಲ್ಲಿ ಮನೆ, ಭೂಮಿ, ಕಛೇರಿ, ಕಾರ್ಖಾನೆ, ಪೀಠೋಪಕರಣಗಳಲ್ಲದೆ ಅನೇಕ ಬಳಕೆಯ ಸರಂಜಾಮುಗಳನ್ನು ಗುತ್ತಿಗೆ ರೀತಿಯಲ್ಲಿ ಪಡೆದು ಉಪಯೋಗಿಸುವುದನ್ನು ನಾವು ಕಾಣುತ್ತೇವೆ. ನಮ್ಮ ದೇಶದಲ್ಲಿ ದೂರವಾಣಿ ವ್ಯವಸ್ಥೆ ಇದಕ್ಕೊಂದು ಉತ್ತಮ ಉದಾಹರಣೆ. ಈ ವ್ಯವಸ್ಥೆಯಲ್ಲಿ ದೂರವಾಣಿ ಉಪಕರಣ ದೂರವಾಣಿ ಇಲಾಖೆಯ ಒಡೆತನದಲ್ಲಿದ್ದು, ಅದನ್ನು ನಿಗದಿತ ಬಾಡಿಗೆಯಲ್ಲಿ ಉಪಯೋಗಿಸುವ ಹಕ್ಕುಮಾತ್ರ ಗ್ರಾಹಕನದಾಗಿರುತ್ತದೆ.

ಜಾರಿಗೆ ಕಾರಣಗಳು

ಗುತ್ತಿಗೆ ಪದ್ಧತಿ ಜಾರಿಗೆ ಬರಲು ಅನೇಕ ಅಂಶಗಳು ಕಾರಣವಾಗಿವೆ. ಅವುಗಳಲ್ಲಿ ಮುಖ್ಯವಾದದ್ದು ಜನರ ವರಮಾನದ ಇತಿಮಿತಿ. ಈಗಿನ ಯಾಂತ್ರಿಕ ಯುಗದಲ್ಲಿ ಯಂತ್ರಗಳು ಹಾಗೂ ಇದರ ಬಿಡಿಭಾಗಗಳನ್ನು ಅವುಗಳ ವಿಪರೀತ ಬೆಲೆಗಳಿಂದಾಗಿ ಖರೀದಿ ಮಾಡುವುದು ಒಮ್ಮೆಗೇ ಕಷ್ಟ. ಆದ್ದರಿಂದ ಗುತ್ತಿಗೆ ಕಂಪನಿಗಳ ಸ್ಥಾಪನೆ ಪ್ರಾರಂಭ ಆಯಿತೆನ್ನಬಹುದು.

ಅದೇ ರೀತಿಯಲ್ಲಿ ವಿಜ್ಞಾನ ಪ್ರಗತಿ ಪಥದಲ್ಲಿರುವ ನಾವು ನಮ್ಮಲ್ಲಿ ದೊರಕುವ ಸೀಮಿತ ಬಂಡವಾಳ ಹೊಸ ಯಂತ್ರಗಳನ್ನು ಅಧಿಕ ಬೆಲೆಗಳಲ್ಲಿ ಕೊಳ್ಳುವುದರಿಂದ ನಷ್ಟ ಸಂಭವವನ್ನು ಎದುರಿಸಬೇಕಾಗಬಹುದು. ಅದರಂತೆ ಹೊಸ ಹೊಸ ಉಪಜ್ಞೆಗಳ (Inventions) ಈ ಯುಗದಲ್ಲಿ ಇಂದು ತೆಗೆದುಕೊಂಡ ಯಂತ್ರ ನಾಳೆ ಹಳತಾಗುವ ಸಾಧ್ಯತೆಗಳಿವೆ. ಕೊಂಡ ಯಂತ್ರಗಳ ಉಪಯೋಗವನ್ನು ಪೂರ್ಣ ಪ್ರಮಾಣದಲ್ಲಿ ಸಾಧಿಸಲಾಗುವುದಿಲ್ಲ. ಈ ಕಾರಣಗಳಿಂದ ದೊಡ್ಡ ಕಾರ್ಖಾನೆಗಳಲ್ಲಿ ದೊಡ್ಡ ಹೊಸ ಯಂತ್ರಗಳನ್ನು ಖರೀದಿಸುವವರೇ ಗುತ್ತಿಗೆ ಕಂಪನಿಗಳನ್ನು ಆಶ್ರಯಿಸುತ್ತಿದ್ದಾರೆ.

ಸ್ವಾತಂತ್ರ್ಯಾನಂತರದ ಭಾರತದಲ್ಲಿ ಸರ್ಕಾರ ದೊಡ್ಡ ಹಾಗೂ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಒತ್ತು ಕೊಟ್ಟಿತು. ಇದರಿಂದಾಗಿ ಅನೇಕ ಕೈಗಾರಿಕೆಗಳು ಅಗಾಧ ಪ್ರಮಾಣದಲ್ಲಿ ಅಸ್ತಿತ್ವಕ್ಕೆ ಬಂದಿವೆ. ನಮ್ಮ ದೇಶ ಮುಂದುವರಿಯುತ್ತಿರುವ ರಾಷ್ಟ್ರವಾಗಿದ್ದು, ಮೂಲ ಬಂಡವಾಳದ ಕೊರತೆಯಿಂದ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಬ್ಯಾಂಕುಗಳು ಈ ಕೊರತೆಯನ್ನು ನೀಗುವಲ್ಲಿ ತಮ್ಮ ಪಾಲಿನ ಕೆಲಸವನ್ನು ಮಾಡುತ್ತಿದ್ದರೂ ಮೇಲೆ ತಿಳಿಸಿದ ಕಾರಣಗಳಿಂದಾಗಿ ಗುತ್ತಿಗೆ ಕಂಪನಿಗಳು ಹುಟ್ಟಿಕೊಂಡುವು, ಹುಟ್ಟಿಕೊಳ್ಳುತ್ತಿವೆ.

ಬೆಳವಣಿಗೆ

ಭಾರತದಲ್ಲಿ ಈಚೆಗೆ ಅಸ್ತಿತ್ವಕ್ಕೆ ಬಂದ ಸಂಸ್ಥೆಗಳು ಗುತ್ತಿಗೆ ವಹಿವಾಟುಗಳನ್ನು ಭಾರತದ ಕೈಗಾರಿಕಾ ಕ್ಷೇತ್ರದಲ್ಲಿ ಜನಪ್ರಿಯವಾಗಿಸಿವೆ. 1982ರಲ್ಲಿ ಮೂರು ಗುತ್ತಿಗೆ ವ್ಯವಹಾರ ಕಂಪನಿಗಳಿದ್ದುದು 1985ರಲ್ಲಿ ಇವುಗಳ ಸಂಖ್ಯೆ 200ರ ಗಡಿ ದಾಟಿದೆ.

ಗುತ್ತಿಗೆ ವ್ಯವಹಾರದಲ್ಲಿ ಹಣಕಾಸು ಗುತ್ತಿಗೆ (Financial Lease), ಪರಿಚಾಲನಾ ಗುತ್ತಿಗೆ (Operating Lease), ಬಿಕರಿ ನೆರವು ಗುತ್ತಿಗೆ (Sales Aid Lease) ಮತ್ತು ಅಂತಾರಾಷ್ಟ್ರೀಯ ಗುತ್ತಿಗೆ (International Lease) ಮುಂತಾದ ಅನೇಕ ಬಗೆಗಳಿವೆ.

ಪಾಶ್ಚಾತ್ಯ ದೇಶಗಳಲ್ಲಿ ವಾಣಿಜ್ಯ ಬ್ಯಾಂಕುಗಳು ಮತ್ತು ಇತರ ಹಣಕಾಸು ಸಂಸ್ಥೆಗಳು ನೇರವಾಗಿ ಅಥವಾ ತಮ್ಮ ಸಹ ಸಂಸ್ಥೆಗಳ ಮೂಲಕ ಗುತ್ತಿಗೆ ವ್ಯವಹಾರವನ್ನು ನಡೆಸುತ್ತವೆ. ಅಲ್ಲಿ ಈ ವ್ಯವಹಾರದಲ್ಲಿ ಹೆಚ್ಚುವರಿ ಬಂಡವಾಳಕ್ಕೆ (Surplus Capital) ಸಿಗುವ ಸಿದ್ಧ ಮಾರುಕಟ್ಟೆ ಹಾಗೂ ಕರವಿನಾಯಿತಿ ಬಲು ಸಹಕಾರಿಯಾಗಿದೆ. ಈ ಅನುಕೂಲಗಳು ನಮ್ಮ ದೇಶದಲ್ಲಿ ಇಲ್ಲ. ಹೆಚ್ಚುವರಿ ಬಂಡವಾಳ ಸಿಗುವುದಂತೂ ಕಲ್ಪನೆಯ ಮಾತು. ಆದರೂ ಇಲ್ಲಿ ಗುತ್ತಿಗೆ ಕಂಪನಿಗಳ ವ್ಯವಹಾರ ಅಭಿವೃದ್ಧಿಯಾಗಿದೆ. ಈ ವ್ಯವಹಾರದಲ್ಲಿರುವ ಹೆಚ್ಚಿನ ಲಾಭಾಂಶ, ವಾಣಿಜ್ಯ ಬ್ಯಾಂಕುಗಳಲ್ಲಿ ಆಗುವ ವಿಪರೀತ ವೆಚ್ಚ ಮತ್ತು ದುರಸ್ತಿ ಖರ್ಚು (Maintenance expenditure) ಇವು ಗುತ್ತಿಗೆ ಕಂಪನಿಗಳ ಸ್ಥಾಪನೆಗೆ ಕಾರಣವಾದುವೆನ್ನಬಹುದು.

ಬ್ಯಾಂಕುಗಳ ಪಾತ್ರ

1949ರ ಬ್ಯಾಂಕಿಂಗ್ ಅಧಿನಿಯಮದ ಪ್ರಕರಣ 8ರಲ್ಲಿ ಬ್ಯಾಂಕುಗಳು ಚರಾಸ್ತಿಯ ವ್ಯವಹಾರ ಮಾಡುವುದನ್ನು ನಿರ್ಬಂಧಿಸಲಾಗಿದೆ. ಭದ್ರತೆಗೋಸ್ಕರ (Security) ಪಡೆದ ಚರಾಸ್ತಿಗಳನ್ನು ಈ ನಿರ್ಬಂಧ ಹೊರತುಪಡಿಸಿದೆ. 1972ರ ಬ್ಯಾಂಕಿಂಗ್ ಆಯೋಗದ ಶಿಫಾರಸಿನ ಮೇರೆಗೆ ಬ್ಯಾಂಕಿಂಗ್ ಅಧಿನಿಯಮದಲ್ಲಿ ಪ್ರಕರಣ 19 (1)ನ್ನು ಸೇರಿಸಿ, ಬ್ಯಾಂಕುಗಳಿಗೆ ತಮ್ಮ ಸಹಸಂಸ್ಥೆಗಳ ಮೂಲಕ ಗುತ್ತಿಗೆ ವ್ಯವಹಾರ ಮಾಡಲು ಅನುಮತಿ ನೀಡಲಾಯಿತು. ಈ ನಿಯಮದ ಪ್ರಕಾರ 51% ಷೇರು ಬಂಡವಾಳದ ಅಥವಾ 30% ಇನ್ನಿತರ ಬಂಡವಾಳದ ಮೂಲಕ ವಾಣಿಜ್ಯ ಬ್ಯಾಂಕುಗಳು ಗುತ್ತಿಗೆ ಕಂಪನಿಗಳನ್ನು ಪ್ರಾರಂಭಿಸಬಹುದು. ಆದರೆ ಭಾರತೀಯ ರಿಸರ್ವ್ ಬ್ಯಾಂಕಿನ ಆದೇಶದಂತೆ ಈ ಕಂಪನಿಗಳಲ್ಲಿ ವಾಣಿಜ್ಯ ಬ್ಯಾಂಕಿನ ಧನ ವಿನಿಯೋಜನೆ ತನ್ನ ಪಾವತಿಯಾದ ಬಂಡವಾಳದ ಶೇಕಡ 10ಕ್ಕಿಂತ ಜಾಸ್ತಿ ಇರಬಾರದು. ಬ್ಯಾಂಕಿನ ಗುತ್ತಿಗೆ ವ್ಯವಹಾರದ ಸಹಸಂಸ್ಥೆಗಳು ಇನ್ನಾವುವೇ ಗುತ್ತಿಗೆ ಕಂಪನಿಗಳಿಗೆ/ಸಂಸ್ಥೆಗಳಿಗೆ ಹಣ ಸಹಾಯ ಮಾಡಬಾರದು, 'ಬಾಡಿಗೆ ಕೊಳ್ಳಿಕೆ' (Hire purchase) ವ್ಯವಹಾರ ನಡೆಸಬಾರದು. ಆದರೆ ಸಾರ್ವಜನಿಕರಿಂದ ಠೇವಣಿಗಳ ಮೂಲಕ, ಡಿಬೆಂಚರುಗಳ ಮೂಲಕ, ಬ್ಯಾಂಕ್ ಸಾಲ ರೂಪದಲ್ಲಿ ಆರ್ಥಿಕ ಬಲವನ್ನು ಪಡೆಯಬಹುದು. ಜನರಿಂದ ಶೇಖರಿಸಿದ ಠೇವಣಿಗಳಿಗೆ ಗರಿಷ್ಠ ಬಡ್ಡಿದರ 15ರಷ್ಟನ್ನು ಕೊಡುವ ಅಧಿಕಾರ ಗುತ್ತಿಗೆ ಕಂಪನಿಗಳಿಗೆ ಇದೆ. ಠೇವಣಿಗಳ ಗರಿಷ್ಠ ಅವಧಿ 36 ತಿಂಗಳುಗಳು ಮಾತ್ರ.

ಗುತ್ತಿಗೆ ಕಂಪನಿ ವ್ಯವಹಾರ ಭಾರತ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಹೊಸ ಪ್ರವೇಶವಾಗಿದೆ. ಇದನ್ನು ನಡೆಸುವರಿಗೆ ಹೆಚ್ಚಿನ ಪರಿಣತಿ ಹಾಗೂ ವಿಶಿಷ್ಟ ಹೊಣೆಗಾರಿಕೆ ಅತ್ಯಂತ ಮುಖ್ಯ. 1984ರಿಂದೀಚೆಗೆ, ಅಂತರರಾಷ್ಟ್ರೀಯ ಹಣಕಾಸು ನಿಗಮದ (I.F.C) ಸಹಾಯದಲ್ಲಿ, ಉತ್ತರ ಭಾರತದಲ್ಲಿ ಪಂಜಾಬ್ ನ್ಯಾಶನಲ್ ಬ್ಯಾಂಕ್ ಹಾಗೂ ಜನರಲ್ ಮೋಟಾರ್ ಫೈನಾನ್ಸ್ ಕಂಪನಿಯ ಜತೆ, ದಕ್ಷಿಣ ಭಾರತದಲ್ಲಿ

ಭಾರತೀಯ ಸ್ಟೇಟ್ ಬ್ಯಾಂಕ್ ಹಾಗೂ ಸುಂದರಂ ಫೈನಾನ್ಸ್ ಜೊತೆ, ಪಶ್ಚಿಮದಲ್ಲಿ ಬ್ಯಾಂಕ್ ಆಫ್ ಇಂಡಿಯಾ ಮತ್ತು ಟ್ವೆಂಟಿಯತ್ ಸೆಂಚುರಿ ಲೀಸಿಂಗ್ ಕಂಪನಿಯ ಜೊತೆ ಹಾಗೂ ಪೂರ್ವ ಭಾಗದಲ್ಲಿ ಅಲಹಾಬಾದ್ ಬ್ಯಾಂಕ್ ಮತ್ತು ಖಾಸಗಿ ವಲಯದ ಒಂದು ಕಂಪನಿಯ ಸಹಭಾಗಿತ್ವದಲ್ಲಿ ಲೀಸಿಂಗ್ ಸಂಸ್ಥೆಗಳ ಸ್ಥಾಪನೆಗೆ ಪ್ರಯತ್ನಗಳು ನಡೆದಿವೆ. ಅನೇಕ ರಾಷ್ಟ್ರೀಕೃತ ಬ್ಯಾಂಕುಗಳು ಲೀಸಿಂಗ್ ವ್ಯವಹಾರದ ಕಡೆ ಆಕರ್ಷಿತವಾಗಿ ಸಹ ಸಂಸ್ಥೆಗಳ ಸ್ಥಾಪನೆಗೆ ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿಗಾಗಿ ಕೇಳಿಕೊಂಡಿವೆ. ಈ ನಿಟ್ಟಿನಲ್ಲಿ ಪ್ರಥಮ ಪ್ರಯತ್ನಗಳಾಗಿವೆ.

ಬ್ರೆಜಿಲ್, ಕೊರಿಯಾ ಹಾಗೂ ಫಿಲಿಪೀನ್ಸ್ ದ್ವೀಪಗಳಲ್ಲಿ ಲೀಸಿಂಗ್ ಸಂಸ್ಥೆಗಳ ಹುಟ್ಟಿಗೆ ಅಂತಾರಾಷ್ಟ್ರೀಯ ಹಣಕಾಸು ನಿಗಮ ಕಾರಣೀಭೂತವಾಗಿ ಅವುಗಳ ಏಳಿಗೆಯನ್ನು ಅಲ್ಲಿ ಸಾಧಿಸಲಾಗಿದೆ. ಈ ಏಳಿಗೆಯನ್ನು ಗಮನಿಸಿ, ಭಾರತದಲ್ಲೂ ನಿಗಮದ ಅನುಭವ ಹಾಗೂ ಪರಿಣತಿಯನ್ನು ಪಡೆಯುವಲ್ಲಿ ಸರ್ಕಾರ ಪ್ರಯತ್ನ ನಡೆಸಿದೆ.

ಬ್ಯಾಂಕುಗಳ ಅರ್ಹತೆ

ಭಾರತೀಯ ಅರ್ಥವ್ಯವಸ್ಥೆಯಲ್ಲಿ ಪರಿಣತಿ ಪಡೆದಿರುವ ವಾಣಿಜ್ಯ ಬ್ಯಾಂಕುಗಳಿಗೆ ಲೀಸಿಂಗ್ ಕಂಪನಿಗಳನ್ನು ಸಹ ಸಂಸ್ಥೆಗಳಾಗಿ ನಡೆಸಲು ಅನುಮತಿಯನ್ನು ಕೊಡುವುದು ಅನೇಕ ವಿಧದಲ್ಲಿ ಸೂಕ್ತ. ಏಕೆಂದರೆ ಇಂದಿನ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಆರ್ಥಿಕ ತಜ್ಞರಿದ್ದಾರೆ, ಪರಿಣತ, ಅನುಭವಿ ಸಿಬ್ಬಂದಿ ಸೌಕರ್ಯವಿದೆ. ಭಾರತದ ಆರ್ಥಿಕ ಸ್ಥಿತಿಗತಿಗಳ ಮಾಹಿತಿ ಸಿಗುತ್ತದೆ. ವ್ಯವಸಾಯ ಹಾಗೂ ಕೈಗಾರಿಕಾ ಕ್ಷೇತ್ರದಲ್ಲಿ ವಹಿವಾಟನ್ನು ನಡೆಸಿದ ಅನುಭವ ಚೆನ್ನಾಗಿದೆ. ಇಷ್ಟಲ್ಲದೆ ಸಾರ್ವಜನಿಕರಿಗೆ ಇಂದು ಬ್ಯಾಂಕುಗಳು ಅವರ ಜೀವನದಲ್ಲಿ ಒಂದು ಜೀವನಾಡಿಯಾಗಿ ಕೆಲಸ ಮಾಡುತ್ತಿದ್ದು, ಬ್ಯಾಂಕುಗಳು ಯಾವುದೇ ಕೆಲಸ ಮಾಡಿದರೂ ಅದಕ್ಕೆ ಜನಮನ್ನಣೆ ಖಂಡಿತ ದೊರೆಯುತ್ತದೆ. ಬ್ಯಾಂಕುಗಳಿಗೆ ಕೂಡ ಗುತ್ತಿಗೆ ವ್ಯವಹಾರದಲ್ಲಿ ಬರುವ ಹೆಚ್ಚಿನ ಲಾಭಾಂಶ ಹಾಗೂ ಭದ್ರತಾ ದೃಷ್ಟಿಯಿಂದ ಸಾಲ ವಿನಿಯೋಜನೆ ಬಹು ಅನುಕೂಲಕರ ಅಂಶಗಳು.

ವಾಣಿಜ್ಯೋದ್ಯಮಿಗಳಿಗೆ ಗುತ್ತಿಗೆ ಕಂಪನಿಗಳಿಂದ ಅನೇಕ ಉಪಯೋಗಗಳು ಇವೆ. ಬ್ಯಾಂಕ್ ಸಾಲ ತೆಗೆದುಕೊಳ್ಳುವಾಗ ಬೇಕಾದ 'ಸ್ವಭಾಗ' (Margin) ಬಂಡವಾಳದ ಅನುಪಸ್ಥಿತಿ, ಪ್ರಾರಂಭಿಕ ವಿನಿಯೋಜನೆಯಲ್ಲಿ (Intial investment)ಕಡಿತ, ಚರಾಸ್ತಿಗಳ ಮೇಲೆ ಸುಲಭ ಹಾಗೂ ಸಂದರ್ಭೋಚಿತ ಧನಸಹಾಯದ ಸೌಕರ್ಯ, ಆದಾಯ ಆಧಾರಿತ ಬಾಡಿಗೆ ದರದ ವಿಷ್ಕರ್ಷೆ, ಬಾಡಿಗೆ ದರದ (Lease rent) ಮೇಲೆ ಕರ ವಿನಾಯಿತಿ ಮುಂತಾದ ಕಾರಣಗಳಿಂದ ಸಣ್ಣ ಹಾಗೂ ಮಧ್ಯಮ ಕೈಗಾರಿಕಾ ಸಂಸ್ಥೆಗಳಲ್ಲಿ ಗುತ್ತಿಗೆ ಕಂಪನಿಗಳ ವಹಿವಾಟು ಬೆಳೆಯಲು ಕಾರಣವಾಯಿತು.

ಗುತ್ತಿಗೆ ಕಂಪನಿಗಳ ಬೆಳವಣಿಗೆಯಿಂದಾಗಿ ಈಗ ವಾಣಿಜ್ಯ ಬ್ಯಾಂಕುಗಳು ಕೈಗಾರಿಕೋದ್ಯಮಿಗಳಿಗೆ ಸಹಾಯವನ್ನು ಮಾತ್ರ ನೀಡಬೇಕಾದ ಪರಿಸ್ಥಿತಿ ಒದಗಿಬಂದಿರುವುದು ಒಂದು ಆಶಾದಾಯಕ ಹೆಜ್ಜೆ. ಇದರಿಂದಾಗಿ ಇತರ ಬಗೆಯ ಸಾಲ ಹಾಗೂ ಮುಂಗಡಗಳ ಹಣವನ್ನು ಬೇರೆಡೆ ವಿನಿಯೋಗಿಸಬಹುದಾಗಿದೆ. ಈ ವಿಷಯದಲ್ಲಿ ಕೈಗಾರಿಕೋದ್ಯಮಗಳಿಂದ ಭಾರತೀಯ ಕೈಗಾರಿಕಾಭಿವೃದ್ಧಿ ಬ್ಯಾಂಕ್, ರಾಜ್ಯ ಹಣಕಾಸು ನಿಗಮ, ಜೀವವಿಮಾ ನಿಗಮ, ಹಾಗೂ ಯೂನಿಟ್ ಟ್ರಸ್ಟ್ ಮುಂತಾದ ಸಂಸ್ಥೆಗಳ ಮೇಲೆ ಸಾಲಗಳ ಒತ್ತಡ ಕಡಿಮೆಯಾಗಿರುವುದು ಕಂಡುಬಂದಿದೆ. ಬ್ಯಾಂಕುಗಳಲ್ಲಿ ಪ್ರಚಲಿತದಲ್ಲಿರುವ ಸಾಲ ಪಾವತಿ ಮತ್ತು ಮರುಪಾವತಿಗಳಲ್ಲಿನ ಕ್ಲಿಷ್ಟಕರರೀತಿ-ನೀತಿಗಳು, ಗುತ್ತಿಗೆ ಬ್ಯಾಂಕುಗಳ ವೈಶಿಷ್ಟ್ಯಪೂರ್ಣ ಸಾಲ ಕ್ರಮಗಳಿಂದಾಗಿ ಬ್ಯಾಂಕುಗಳು ಇತ್ತ ಕಡೆ ಗಮನ ಹರಿಸುವುದು ಅತ್ಯಗತ್ಯ. ಅಂದರೆ ಗುತ್ತಿಗೆ ಕಂಪನಿಗಳಲ್ಲಿನ ಸಾಲ ಕ್ರಮದಲ್ಲಿ ಚರಾಚರಾಸ್ತಿಗಳ ಒಡೆತನ ಕಂಪನಿಯದೇ ಆಗಿರುತ್ತದೆ. ಸಾಲ ಮರುಪಾವತಿಯ ವಿಷಯದಲ್ಲಿ ಯಾವುದೇ ತಕರಾರು ಹುಟ್ಟಿಕೊಳ್ಳಲು ಅವಕಾಶ ಇರುವುದಿಲ್ಲ.

ನಗರ ಪ್ರದೇಶಗಳಲ್ಲಿ ಮಾತ್ರ ಸೀಮಿತವಾಗಿ ಬೆಳೆದು ಬರುತ್ತಿರುವ ಗುತ್ತಿಗೆ ಕಂಪನಿ ವ್ಯವಹಾರವನ್ನು ಗ್ರಾಮೀಣ ಪ್ರದೇಶಗಳಿಗೂ ವ್ಯಾಪಿಸುವಂತೆ ಮಾಡಿ, ಅದಕ್ಕೆ ಸೂಕ್ತವಾದ ರೀತಿ-ನೀತಿ-ನಿಯಮಾವಳಿಗಳನ್ನು ಆವಿಷ್ಕರಿಸಿ, ಅದರ ಮೂಲಕ ಭಾರತದ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸುವುದು ಬ್ಯಾಂಕ್ ತಜ್ಞರ ಕರ್ತವ್ಯವಾಗಬೇಕು. ಭಾರತದ ಸರ್ವತೋಮುಖ ಅಭಿವೃದ್ಧಿ ಇದರಿಂದ ಸಾಧಿಸಲು ಸಹಾಯವಾಗಬೇಕು. ●

ಬ್ಯಾಂಕುಗಳಲ್ಲಿ ಆದಾಯ ಸೋರಿಕೆ

[22ನೆಯ ಪುಟದಿಂದ ಮುಂದುವರಿದುದು]

ಮಟ್ಟ ಎಂತಹುದು ಎಂಬುದನ್ನು ಪರಿಶೀಲಿಸಬೇಕಾಗುತ್ತದೆ. ಬ್ಯಾಂಕಿಂಗ್ ಸೇವಾ ನೇಮಕಾತಿ ಮಂಡಳಿಯಿಂದ ಆಯ್ಕೆಯಾಗಿ ಬ್ಯಾಂಕುಗಳನ್ನು ಸೇರುವ ಅಭ್ಯರ್ಥಿಗಳು ಕೆಲಸಕ್ಕೆ ಹೊಂದಿಕೊಂಡು ಸಮರ್ಪಕವಾಗಿ, ದಕ್ಷತೆಯಿಂದ ಕಾರ್ಯ ನಿರ್ವಹಿಸಲು ಸಾಕಷ್ಟು ಕಾಲಾವಕಾಶ ಬೇಕು, ತರಬೇತಿಯ ಆವಶ್ಯಕತೆಯೂ ಇದೆ. ಇಲ್ಲಿ ತರಬೇತಿ ಕೇಂದ್ರಗಳ ಹೊಣೆ ಹೆಚ್ಚಿನದಾಗಿದೆ. ಶಾಖಾ ಮಟ್ಟದಲ್ಲಿ ಸಹ ವ್ಯವಸ್ಥಾಪಕರು ಪರಿಚಾಲನೆಯಲ್ಲಿ ತಕ್ಕ ಮಾರ್ಪಾಟನ್ನು ಮಾಡಿಕೊಳ್ಳಬೇಕಾಗುತ್ತದೆ.

ಆದಾಯ ಸೋರಿಕೆ ಕ್ರಮೇಣ ಕಡಿಮೆಯಾಗುತ್ತ ಬಂದಾಗ, ಬ್ಯಾಂಕ್ ಸಿಬ್ಬಂದಿಗಳ ಕಾರ್ಯಕ್ಷಮತೆ, ಉತ್ಪಾದಕತೆಯ ಮಟ್ಟ ಬಹಳಷ್ಟು ಸುಧಾರಿಸುತ್ತವೆ ಎನ್ನಬಹುದು. ●

ಭವಿಷ್ಯದಲ್ಲಿ ಬ್ಯಾಂಕು

ಪೀಟರ್ ಎಸ್. ರೋಸ್

ಬ್ಯಾಂಕರುಗಳು ಮೂರು ಮೂಲಭೂತ ಅಂಶಗಳ ಬಗ್ಗೆ ರಚನಾತ್ಮಕ ರೀತಿಯಲ್ಲಿ ಆಲೋಚನೆ ಮಾಡುವುದನ್ನು ಕಲಿಯಬೇಕು. ಮುಂದಿನ ವರ್ಷಗಳಲ್ಲಿ ಅವರ ಯಶಸ್ಸಿನ ಅಥವಾ ಅಪಯಶಸ್ಸಿನ ನಿರ್ಣಯವಾಗತಕ್ಕದ್ದು ಈ ಉತ್ತರಗಳ ಆಧಾರದ ಮೇಲೆ. ಒಂದು ನಿರ್ಣಾಯಕ ಅಂಶವೆಂದರೆ ತಂತ್ರಜ್ಞಾನ—ಬ್ಯಾಂಕು ನಾಳಿನ ದಿನಗಳಲ್ಲಿ ಸ್ಪರ್ಧಾತ್ಮಕವಾಗಿರುವುದು ಸಾಧ್ಯವಾಗುವಂತೆ ಮಾಡಬಲ್ಲ ಯಾವ ಬಗೆಯ ಸೇವಾ ಉತ್ಪಾದನೆ ಮತ್ತು ಪೂರೈಕೆಯ ವಿಧಾನಗಳನ್ನು ಅದು ಇಂದು ಅಳವಡಿಸಿಕೊಳ್ಳಬೇಕು ಎಂಬುದು. ಎರಡನೆಯದು ಸಂಘಟನೆ—ಭವಿಷ್ಯದಲ್ಲಿ ವೆಚ್ಚಗಳ ಮೇಲೆ ಹತೋಟಿ ಸಾಧಿಸಲು ಹಾಗೂ ಮಾಹಿತಿಯನ್ನು ದಕ್ಷರೀತಿಯಲ್ಲಿ ಬಳಸಿಕೊಳ್ಳಲು ಸಹಾಯಕವಾಗುವಂತೆ ಯಾವ ರೀತಿಯಲ್ಲಿ ಜನರ, ಸ್ಥಳಗಳ, ಹಾಗೂ ವಸ್ತುಗಳ ಸಂರಚನೆಯನ್ನು ನಾವು ಇಂದು ರೂಪಿಸಬಲ್ಲೆವು ಎಂಬುದು. ಮೂರನೆಯದೆಂದರೆ ಬೆಲೆ ನಿಗದಿ—ಗತಿಶೀಲ ಹಣಕಾಸು ಮಾರುಕಟ್ಟೆಯ ಕ್ಷೇತ್ರದಲ್ಲಿ ನಮ್ಮ ಸೇವೆಗಳು ಲಾಭಪ್ರದವೂ ಸ್ಪರ್ಧಾತ್ಮಕವೂ ಆಗುವ ಭರವಸೆ ಇರುವಂತೆ ನಾವು ಅವುಗಳ ಮೌಲ್ಯ ನಿರ್ಧರಿಸಿ ನಿಗದಿ ಮಾಡುವುದು ಹೇಗೆ? ಯಾವುದೇ ಬ್ಯಾಂಕು, ಸಣ್ಣದಿರಲಿ ದೊಡ್ಡದಿರಲಿ, ಈ ಮೂರು ಮೂಲಭೂತ ಅಂಶಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳದೆ ಇರುವುದು ಸಾಧ್ಯವೇ ಇಲ್ಲ. ಅಲ್ಲದೆ, ಆ ತೀರ್ಮಾನಗಳಂತೆ ಇತ್ಯಾತ್ಮಕ ಕ್ರಮ ತೆಗೆದುಕೊಳ್ಳಲು ಬ್ಯಾಂಕರುಗಳು ಶೀಘ್ರವಾಗಿ ಒಮ್ಮನಸ್ಸಿನಿಂದ ತೊಡಗಬೇಕು. ಏಕೆಂದರೆ ಇಂದಿನ ಬ್ಯಾಂಕಿಂಗ್ ತಂತ್ರಜ್ಞಾನ, ಸಂಘಟನೆ ಮತ್ತು ಬೆಲೆ ನಿಗದಿ ವಿಧಾನಗಳು ನಾಳೆಗೂ ಸರಿಯೆನಿಸಲಾರವು. ಇದು ನಿಶ್ಚಿತವಾದ. ಹೆಚ್ಚುಹೆಚ್ಚು ಕಲಿಯಲು ಹಾಗೂ ಹೆಚ್ಚುಹೆಚ್ಚು ಸೇವೆ ನೀಡಲು ನಾವು ಸಿದ್ಧರಾಗಿರಬೇಕು,

ಬ್ಯಾಂಕುಗಳಲ್ಲಿ ಆದಾಯ ಸೋರಿಕೆ

ಪೆನ್ನಿಗಳನ್ನು ಕಡೆಗಣಿಸದಿದ್ದರೆ ಪೌಂಡುಗಳು ತಾವಾಗಿಯೇ ಕೂಡಿಬರುತ್ತವೆ ಎಂಬ ಅರ್ಥದ ಮಾತೊಂದು ಇಂಗ್ಲಿಷಿನಲ್ಲುಂಟು. ಪೈಸೆಯನ್ನು ಉಳಿಸಿದರೆ ರೂಪಾಯಿ ಲಾಭ ತಾನಾಗಿಯೇ ಬರುತ್ತದೆ ಎಂಬುದನ್ನು ಬ್ಯಾಂಕುಗಳು ಇಂದು ಅರಿಯಬೇಕಾಗಿದೆ. ಸೋರಿಕೆ ಎಲ್ಲಾಗುತ್ತದೆ, ಅದನ್ನು ನಿಲ್ಲಿಸುವುದು ಹೇಗೆ ಎಂಬುದನ್ನು ಈ ಲೇಖನ ಚರ್ಚಿಸುತ್ತದೆ.

ಗ್ರಾಹಕರಿಂದ ಠೇವಣಿಗಳನ್ನು ಸ್ವೀಕರಿಸುವುದು ಹಾಗೂ ಅವುಗಳಿಂದ ಸಾಲ ನೀಡಿಕೆ—ಇದು ಬ್ಯಾಂಕುಗಳ ಮುಖ್ಯ ಕಾರ್ಯಭಾರ. ಇದರ ಜೊತೆಗೆ ಬ್ಯಾಂಕುಗಳು ಹಣದ ವರ್ಗಾವಣೆ, ಬಿಲ್ಲು ಚೆಕ್ಕುಗಳ ವಸೂಲಿ, ವಟಾವಣೆ, ಭದ್ರ ಸುಫರ್ದು ಸೌಲಭ್ಯ, ಸರಕಾರಿ ವಹಿವಾಟು, ವಿದೇಶಿ ವಿನಿಮಯ ವಹಿವಾಟು ಮುಂತಾದ ಇತರ ಸೇವೆಗಳನ್ನು ನೀಡುತ್ತವೆ.

ಸ್ವೀಕರಿಸಿದ ಠೇವಣಿಗಳ ಮೇಲೆ ನೀಡುವ ಬಡ್ಡಿ, ನೀಡಿದ ಸಾಲಗಳ ಮೇಲೆ ವಿಧಿಸುವ ಬಡ್ಡಿ—ಇವುಗಳ ಅಂತರವೇ ಬ್ಯಾಂಕಿನ ಆದಾಯದ ಬಹು ಮುಖ್ಯ ಭಾಗ. ಜೊತೆಗೇ ಇತರ ಸೇವೆಗಳ ಮೇಲೆ ವಿಧಿಸುವ ಶುಲ್ಕವೂ ಒಂದು ಆದಾಯ ಮೂಲ.

ಬ್ಯಾಂಕುಗಳ ಸಾಲ ನೀಡಿಕೆ ರಿಸರ್ವ್ ಬ್ಯಾಂಕಿನಿಂದ ನಿಯಂತ್ರಿಸಲ್ಪಡುತ್ತದೆ. ಬ್ಯಾಂಕುಗಳು ಪರಿನಿಯತ ದ್ರವತ್ವ ಅನುಪಾತ ಹಾಗೂ ನಗದು ಮೀಸಲು ನಿಧಿಯನ್ನು ಹೊರತುಪಡಿಸಿ ಉಳಿದ ಹಣವನ್ನು ಸಾಲ ನೀಡಿಕೆಗೆ ಬಳಸಿಕೊಳ್ಳಬೇಕು. ತಾವು ನೀಡುವ ಸಾಲದಲ್ಲಿ ಶೇ. 40ರಷ್ಟನ್ನು ಆದ್ಯತಾವಲಯಕ್ಕೆ ನೀಡಬೇಕು. ಸರ್ಕಾರದ ಹಲವು ಯೋಜನೆಗಳನ್ವಯ ಕಡಿಮೆ ಬಡ್ಡಿದರದಲ್ಲಿ ಅವು ಸಾಲ ನೀಡಬೇಕಾಗುತ್ತದೆ. ಇವೆಲ್ಲವುಗಳ ಅನಂತರ ತುಸು ಹೆಚ್ಚಿನ ಬಡ್ಡಿದರದಲ್ಲಿ ಆಹಾರ ಧಾನ್ಯೇತರ, ವ್ಯಾಪಾರೋದ್ಯಮ ಚಟುವಟಿಕೆಗಳಲ್ಲಿ ತೊಡಗಿಸಲು ಬ್ಯಾಂಕುಗಳಿಗೆ ಉಳಿಯುವ ಹಣ ಪ್ರತಿಶತ ಬಹಳ ಕಡಿಮೆ. ಇದು ಬ್ಯಾಂಕುಗಳಿಗೆ ಹೆಚ್ಚಿನ ಆದಾಯ ದೊರಕಿಸಿಕೊಡುತ್ತದೆ. ಪಡೆಯಬಹುದಾದ ಆದಾಯವನ್ನು ಲೋಪವಿಲ್ಲದೆ ಪಡೆದುಕೊಳ್ಳುವುದು ಅತ್ಯಂತ ಅವಶ್ಯಕವಾಗಿದೆ. ಅಳಿಸಿಹಾಕುವ ಲೆಕ್ಕಕ್ಕೇ ಸೇರಿಸಬೇಕಾಗಬಹುದಾದ ಜಿಗುಟು ಹಾಗೂ ಅಸ್ಪಷ್ಟ ಖಾತೆಗಳ ಹೆಚ್ಚಿನ ಸಂಖ್ಯೆ, ಕೆಟ್ಟ ಹಾಗೂ ವಸೂಲಾಗದ ಸಾಲಗಳ ಸಂಖ್ಯೆಯ ಹೆಚ್ಚಳ, ಸಿಬ್ಬಂದಿ ವೇತನ ವೆಚ್ಚ ಹಾಗೂ ಇತರ ಪರಿಪಾಲನ ವೆಚ್ಚಗಳ ಆಧಿಕ್ಯ—ಇವು ಆದಾಯ ಸೋರಿಕೆಯನ್ನು ತಡೆಗಟ್ಟುವತ್ತ ಬ್ಯಾಂಕಿಂಗ್ ಉದ್ಯಮ ತನ್ನ ಗಮನ ಹರಿಸುವಂತೆ ಮಾಡಿವೆ.

ಸೋರಿಕೆಗೆ ಕಾರಣಗಳು

ಬ್ಯಾಂಕುಗಳ ಆದಾಯ ಸಂಪಾದನೆಯ ಹಂತದಲ್ಲಿ ಎಲ್ಲೆಲ್ಲಿ ಎಷ್ಟೆಷ್ಟರ ಮಟ್ಟಿಗೆ ಸೋರಿಕೆಯಾಗುತ್ತಿದೆ ಎಂಬುದನ್ನು ಗಮನಿಸಿದಾಗ ಅನೇಕ ಅಂಶಗಳು ಕಂಡುಬರುತ್ತವೆ. ಆದಾಯ ಸೋರಿಕೆಗೆ ಕಾರಣಗಳು ಅದಕ್ಷತೆ, ಬೇಜವಾಬ್ದಾರಿ, ನಿಯಮಗಳ ಸ್ಪಷ್ಟತೆಯ ಅಭಾವ ಇತ್ಯಾದಿ. ಜೊತೆಗೆ ಉದ್ದೇಶಪೂರ್ವಕ ತಪ್ಪುಗಳು, ಅಜಾಗರೂಕತೆಯಿಂದಾಗಿ ಸರಿಯಾದ ತಪಾಸಣೆ ಇಲ್ಲದೆ ಆಗುವ ತಪ್ಪುಗಳೂ ಕಾರಣಗಳಾಗುತ್ತವೆ. ಶಾಖೆಯ ಮಟ್ಟದಲ್ಲಿ ಸಿಬ್ಬಂದಿಗಳು ಮಾಡಿದ ಲೆಕ್ಕಾಚಾರವನ್ನು ಶಾಖೆಯ ಅಧಿಕಾರಿಗಳು ತಪಾಸಿಸಿ ಆದ ತಪ್ಪುಗಳನ್ನು ಸರಿಪಡಿಸಿರುತ್ತಾರಾದರೂ ಸಾಮಾನ್ಯವಾಗಿ ಈ ರೀತಿಯ ತಪ್ಪುಗಳು ಹೆಚ್ಚಾಗಿ ಸಿಗುವುದು ಶಾಖೆಗಳನ್ನು ತಪಾಸಣೆ ಮಾಡುವ ಅಂತರಿಕ ಲೆಕ್ಕ ಪರಿಶೋಧಕರಿಂದಲೇ. ಆಗ ಆಗಿ ಹೋಗಿರುವ ಲೋಪಗಳನ್ನು ಸರಿಪಡಿಸಿದರೂ ಅದನ್ನು ಪ್ರಾದೇಶಿಕ ಕಛೇರಿ, ವಲಯ ಕಛೇರಿ, ವಿಭಾಗೀಯ ಕಛೇರಿಗಳವರೆಗೆ ವರದಿ ಮಾಡುತ್ತಾರೆ. ಈ ಲೋಪಗಳು/ತಪ್ಪುಗಳು ಪುನಃ ಪುನಃ ಆಗಬಾರದೆಂಬುದೇ ವರದಿ ಮಾಡುವುದರ ಉದ್ದೇಶ. ಅಂತರಿಕ ಲೆಕ್ಕ ಪರಿಶೋಧಕರು ಗಮನಿಸಿರುವಂತೆ ಆದಾಯ ಸೋರಿಕೆಗೆ ಕಾರಣವಾಗುವ ಅಂಶಗಳನ್ನು ಈ ರೀತಿ ಪಟ್ಟಿ ಮಾಡಬಹುದು :

1 ಉಳಿತಾಯ ಖಾತೆಯೂ ಸೇರಿದಂತೆ ಎಲ್ಲ ರೀತಿಯ ಠೇವಣಿ ಖಾತೆಗಳ ಮೇಲೆ ಬಡ್ಡಿಯ ಹೆಚ್ಚಳ ಪಾವತಿ.

2 ನಗದು ದರಿ/ಮೀರೆಳೆತಗಳನ್ನೊಳಗೊಂಡಂತೆ ಎಲ್ಲ ರೀತಿಯ ಸಾಲಗಳ ಖಾತೆಗಳ ಮೇಲೆ ಕಡಿಮೆ ಬಡ್ಡಿ ವಿಧಿಸುವಿಕೆ.

3 ಚಾಲ್ತಿ ಖಾತೆಗಳ ಋಣಕೆ ಶಿಲ್ಕುಗಳು ಮತ್ತು ಅವಧಿ ಮೀರಿದ ಸಾಲಗಳ ಮೇಲೆ ಹೆಚ್ಚುವರಿ ಬಡ್ಡಿ ವಿಧಿಸದಿರುವುದು.

4 ವಟಾಯಿಸಲಾದ ಚೆಕ್ಕುಗಳ/ಬಿಲ್ಲುಗಳ/ಹುಂಡಿಗಳ ಮೇಲೆ ಹೆಚ್ಚುವರಿ ಬಡ್ಡಿಯನ್ನು ವಸೂಲು ಮಾಡದಿರುವುದು.

5 ಚೆಕ್ಕುಗಳನ್ನು/ಬಿಲ್ಲುಗಳನ್ನು ಹಿಂದಿರುಗಿಸಿದಾಗ ಸೇವಾ ಶುಲ್ಕವನ್ನು ವಸೂಲು ಮಾಡದಿರುವುದು.

6 ಎಲ್ಲ ರೀತಿಯ ಸಾಲದ ಖಾತೆಗಳಿಗೆ/ಚಾಲ್ತಿ ಖಾತೆಗಳಿಗೆ ಸೇವಾಶುಲ್ಕವನ್ನು ವಿಧಿಸದಿರುವುದು.

7 ಅಂಚೆ ವರ್ಗಾವಣೆ, ತಂತಿ ವರ್ಗಾವಣೆ, ತಗಾದೆ ಡ್ರಾಫ್ಟ್‌ಗಳ ನೀಡಿಕೆಗೆ ಪ್ರಧಾನ ಕಛೇರಿ ನಿಗದಿಪಡಿಸಿರುವುದಕ್ಕಿಂತ ಕಡಿಮೆ ವಿನಿಮಯದರವನ್ನು ಪಡೆಯುವುದು.

8 ಬ್ಯಾಂಕು ಜಾಮೀನಿನ ನವೀಕರಣ ಸಮಯದಲ್ಲಿ ಕಮಿಷನ್ ವಸೂಲು ಮಾಡದಿರುವುದು.

9 ಸರ್ಕಾರದಿಂದ ದೊರೆಯುವ ಬಡ್ಡಿ ಸಹಾಯಧನವನ್ನು ಕ್ರಮವಾಗಿ ಪಡೆಯದಿರುವುದು.

10 ಸುರಕ್ಷಾ ಠೇವಣಿ ಲಾಕರುಗಳ ಬಾಡಿಗೆಯ ಅಸಮರ್ಪಕ ವಸೂಲಾತಿ.

11 ಸರ್ಕಾರಿ ವಹಿವಾಟಿನಿಂದ ಬರಬೇಕಾದ ಕಮಿಷನನ್ನು ಸರಿಯಾಗಿ ಪಡೆಯದಿರುವುದು.

12 ವಿದೇಶಿ ವಿನಿಮಯ ವಹಿವಾಟಿನಲ್ಲಿ ಅಸಮಂಜಸ ದರ ನಿರ್ವಹಣೆ.

13 ಅಸಮರ್ಪಕ ನಗದು ನಿರ್ವಹಣೆ.

14 ಸವಕಳಿಯ ಮೌಲ್ಯವನ್ನು ಕಡಿಮೆ ಮಾಡುವುದು.

ಈ ಪಟ್ಟಿ ಇಷ್ಟಕ್ಕೇ ಸೀಮಿತವಲ್ಲ. ಇವು ಕೆಲವು ಸಾಮಾನ್ಯ ಲೋಪದೋಷಗಳು. ಇನ್ನು, ಆದಾಯವಾಗಬಹುದಾಗಿದ್ದ ಅಂಶಗಳು ಆಕರದಲ್ಲೇ ಸೋರಿಹೋಗುವ ಸಾಧ್ಯತೆಗಳು ಕಡಿಮೆಯೇನಿಲ್ಲ. ಬ್ಯಾಂಕುಗಳಲ್ಲಿ ಈ ರೀತಿ ಆದಾಯ ಸೋರಿಕೆಯಿಂದ ಕೋಟಿಗಟ್ಟಲೆ ಹಣ ಪೋಲಾಗುತ್ತಿದೆ. ಇದನ್ನು ಶೇಕಡಾವಾರು ಅಥವಾ ಅಂಕಿಅಂಶಗಳ ಮೂಲಕ ತಿಳಿಸಲು ಸಾಧ್ಯವಾಗಿಲ್ಲ.

ಎಂ. ಎಸ್. ಶಿವಕುಮಾರಸ್ವಾಮಿ
ಮೈಸೂರು ಬ್ಯಾಂಕು
ಬಿ.ಆರ್. ಪ್ರಾಜೆಕ್ಟ್ ಶಾಖೆ, ಶಿವಮೊಗ್ಗ ಜಿಲ್ಲೆ

ಬಡ್ಡಿ ದರಗಳ ಅವಾಂತರ

ಸ್ವಲ್ಪ ವಿವರವಾಗಿ ಪರಿಶೀಲಿಸಿದಾಗ ಆದಾಯ ಸೋರಿಕೆಗೆ ಕಂಡುಬರುವ ಪ್ರಮುಖ ಕಾರಣವೆಂದರೆ ಠೇವಣಿ ಮತ್ತು ಸಾಲದ ಮೇಲಿನ ಬಡ್ಡಿದರಗಳ ಅವಾಂತರ. ಈ ದರಗಳು ಆಗಾಗ್ಗೆ ಕಡಿಮೆ ಕಾಲಾವಧಿಯಲ್ಲೇ ಅನೇಕಬಾರಿ ಬದಲಾಗುತ್ತಿರುವುದು. ಇವು ರಿಸರ್ವ್ ಬ್ಯಾಂಕಿನ ಆದೇಶಗಳಿಗನುಗುಣವಾಗಿರುತ್ತವೆ. ಠೇವಣಿಯ ಮೇಲಿನ ದರಗಳು ಬದಲಾದಾಗ ಅವು ಹಾಲಿ ಇರುವ ಖಾತೆಗಳಿಗೆ ಅನ್ವಯಿಸದೆ, ಜಾರಿಗೆ ಬಂದ ದಿನಾಂಕದ ಅನಂತರ ತೆರೆಯುವ ಖಾತೆಗಳಿಗೆ ಮಾತ್ರವೇ ಅನ್ವಯವಾಗುತ್ತವೆ. ಖಾತೆಯನ್ನು ಪೂರ್ಣ ಅವಧಿಗೆ ಮೊದಲೇ ಮುಕ್ತಾಯ ಮಾಡಬೇಕಾದಂಥ ಸಂದರ್ಭದಲ್ಲಿ ತಪ್ಪು ಗ್ರಹಿಕೆಯಿಂದ ಹೆಚ್ಚಿನ ಬಡ್ಡಿದರ ಪಾವತಿ ಮಾಡುವ ಸಾಧ್ಯತೆಗಳು ಹೆಚ್ಚು. ಇನ್ನು ಸಾಲದ ಖಾತೆಗಳಲ್ಲಿ ಬದಲಾದ ಬಡ್ಡಿದರ, ಹಾಲಿ ಇರುವ ಖಾತೆಗಳಿಗೆ ನಿರ್ದಿಷ್ಟ ದಿನಾಂಕದಿಂದ ಪೂರ್ವಾನ್ವಯವಾಗಿ ಜಾರಿಗೆ ಬರುತ್ತದೆ. ಅಲ್ಲದೆ ಅದು ಸಾಲದ ಮೊತ್ತಕ್ಕನುಗುಣವಾಗಿ, ಸಾಲದ ವಲಯ/ಕ್ಷೇತ್ರಕ್ಕನುಗುಣವಾಗಿ ನಿಗದಿಗೊಳಿಸಲ್ಪಟ್ಟಿರುತ್ತದೆ. ಸಾಲದ ವಲಯ/ಕ್ಷೇತ್ರಗಳನ್ನು ವಿಂಗಡಿಸುವಾಗ ಆಗುವ ತಪ್ಪು ಗ್ರಹಿಕೆ ಕಡಿಮೆ ಬಡ್ಡಿಯ ವಸೂಲಾತಿಗೆ ಕಾರಣವಾಗಲೂಬಹುದು. ಈ ರೀತಿಯ ಬಡ್ಡಿ ದರಗಳು ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದು, ಯಾವೊಬ್ಬ ಬ್ಯಾಂಕರನಿಗೂ ಸುತ್ತೋಲೆಗಳನ್ನು ಪರಿಶೀಲಿಸದೆ ಬಡ್ಡಿದರಗಳನ್ನು ಹೇಳುವುದು ಕಷ್ಟಸಾಧ್ಯವಾಗುತ್ತದೆ. ಈಗಿರುವಂತೆ ಬಡ್ಡಿ ದರಗಳ ಸಂತೆಯಲ್ಲಿ (ಉದಾಹರಣೆಗೆ 10, 10.5, 11.50, 12, 12.5, 13, 15, 17.5 ಇತ್ಯಾದಿ.,) ಯಾವ ಖಾತೆಗೆ ಎಷ್ಟು ಬಡ್ಡಿದರ ಎಂಬುದನ್ನು ಹುಡುಕಲೇ ಸಿಬ್ಬಂದಿ ವರ್ಗದ ಬಹಳಷ್ಟು ಸಮಯ ವ್ಯಯವಾಗುತ್ತದೆ. ಅನಂತರ ವಿವಿಧ ರೀತಿಯ ವಿವಿಧ ಖಾತೆಗಳಿಗೆ ಬಡ್ಡಿ ವಿಧಿಸುವ ಕಾರ್ಯದ ಭಾರವನ್ನೂ ಅದರಲ್ಲಿನ ಲೆಕ್ಕಾಚಾರದ ಮಹತ್ವವನ್ನೂ ಯಾರಾದರೂ ಊಹಿಸಬಹುದು. ಇದು ಅನೇಕ ಲೋಪಗಳಿಗೆ, ತಪ್ಪುಗ್ರಹಿಕೆಗಳಿಗೆ ಕಾರಣವಾಗುತ್ತದೆ.

ತಡೆಗಟ್ಟುವ ಬಗೆ

ಬಡ್ಡಿದರದಲ್ಲಿ ಪದೇಪದೇ ಬದಲಾವಣೆಗಳನ್ನು ತರದಿರುವುದರಿಂದ ಅನೇಕ ಲೋಪಗಳನ್ನು ಸರಿಪಡಿಸಬಹುದು. ಒಂದೇ ಚೌಕಟ್ಟಿನ, ಅವಧಿಯಾಧಾರಿತ ಬಡ್ಡಿದರಗಳನ್ನು ನಿರ್ಧರಿಸುವುದು ಮತ್ತು ಅವನ್ನು ಕನಿಷ್ಠ 5 ವರ್ಷಗಳವರೆಗೆ ಬದಲಾಯಿಸದೆ ಇರುವುದು ಅವಶ್ಯಕವೆನ್ನಿಸುತ್ತದೆ. ಆಗ ಸರ್ಕಾರದ ಹಸ್ತಕ್ಷೇಪವಿರುವ ಇತರ ಠೇವಣಿಗಳ ಬಡ್ಡಿದರಗಳು ಸಹ ಅದೇ ರೀತಿ ಬದಲಾಗದಿರುವಂತೆ ನೋಡಿಕೊಳ್ಳಬೇಕಾಗುತ್ತದೆ. ಆದ್ಯತಾ ವಲಯದ ಸಾಲಗಳಿಗೆ ಒಂದೇ ರೀತಿಯ ಬಡ್ಡಿಯನ್ನು ವಿಧಿಸುವುದು ಮತ್ತು ಆದ್ಯತಾ ವಲಯದ್ದಲ್ಲದ ಸಾಲಗಳಿಗೆ ಸ್ವಲ್ಪ ಹೆಚ್ಚಿನ ಏಕರೀತಿಯ ಬಡ್ಡಿದರವನ್ನು ವಿಧಿಸುವುದೇ ಆದಲ್ಲಿ ಸಾಲದ ಖಾತೆಯ ಅಸಮರ್ಪಕ ವಿಂಗಡಣೆಯಿಂದುಂಟಾಗುವ ಲೋಪಗಳನ್ನು ಸರಿಪಡಿಸಬಹುದು. ಒಬ್ಬ ವ್ಯಕ್ತಿಗೆ ಅಥವಾ ಒಂದು ಘಟಕಕ್ಕೆ ಅವಧಿ ಸಾಲ ಹಾಗೂ ಬಂಡವಾಳ ಸಾಲಗಳೆರಡನ್ನೂ ನೀಡಿದಾಗ, ಅವಧಿ ಸಾಲ ಜಾರಿಯಲ್ಲಿರುವಾಗಲೇ ಬಂಡವಾಳ ಸಾಲದ ಮಿತಿಯನ್ನು ಹೆಚ್ಚು ಮಾಡಿದಾಗ ಒಟ್ಟು ಸಾಲದ ಮೊತ್ತ ಹೆಚ್ಚಾಗಿ ಬಡ್ಡಿದರದ ಹೆಚ್ಚಳವುಂಟಾಗುತ್ತದೆ. ಹೆಚ್ಚಳವನ್ನು ಇಲ್ಲಿ ಕೇವಲ ಬಂಡವಾಳ ಸಾಲಕ್ಕೆ ಅನ್ವಯಿಸಿ, ಅವಧಿ ಸಾಲಕ್ಕೆ ಅನ್ವಯಿಸದಿರುವುದೇ ಹೆಚ್ಚು. ಅವಧಿ ಸಾಲಕ್ಕೂ ಬಂಡವಾಳ ಸಾಲಕ್ಕೂ ಏಕರೀತಿಯ ಬಡ್ಡಿದರವನ್ನು ವಿಧಿಸುವುದರಿಂದ ಈ ರೀತಿಯ ತಪ್ಪುಗಳನ್ನು ಸರಿಪಡಿಸಬಹುದು.

ಯೋಜಿತ ರೀತಿಯಲ್ಲಿ ಕೆಲಸ ನಿರ್ವಹಿಸುವುದರಿಂದ ಕೆಲವು ತಪ್ಪುಗಳಾಗಲು ಅವಕಾಶವಾಗುವುದಿಲ್ಲ. ಈಗ ಬ್ಯಾಂಕುಗಳು ಆರು ತಿಂಗಳಿಗೊಮ್ಮೆ ತಮ್ಮಲ್ಲಿನ ಉಳಿತಾಯ ಖಾತೆಗಳಿಗೆ ಬಡ್ಡಿಯನ್ನು ನೀಡುತ್ತವೆ. ಆದರೆ ಅವು ಇನ್ನೊಂದು ವಾರದಲ್ಲಿ ಬಡ್ಡಿ ನೀಡಬೇಕು ಎಂದಾಗ ಅವಸರವಸರವಾಗಿ, ಕಳೆದ ಆರು ತಿಂಗಳ, ಬಡ್ಡಿಗೆ ಯೋಗ್ಯವಾದ ಶಿಲ್ಕನ್ನು (ಉತ್ಪನ್ನಗಳನ್ನು) ಲೆಕ್ಕಾಚಾರ ಮಾಡಿ ಬಡ್ಡಿ ನೀಡಬೇಕಾಗುತ್ತದೆ. ಅದು ಕೊನೇ ಗಳಿಗೆಯ ಕಾರ್ಯವಾಗಿ ತಪ್ಪುಗಳಾಗುವ ಸಾಧ್ಯತೆಗಳು ಬಹಳ ಹೆಚ್ಚು. ಇನ್ನು ಸಿಬ್ಬಂದಿಯ ಕೆಲಸಗಳನ್ನು ತಪಾಸಿಸುವ ಅಧಿಕಾರಿಗಳು ಸಹ ಬೇರೆ ಕೆಲಸ ಕಾರ್ಯಗಳ ಒತ್ತಡದಿಂದ ಅಥವಾ ಸಮಯಾಭಾವದಿಂದ ಅಥವಾ ತಮ್ಮ ಸಿಬ್ಬಂದಿಯ ಕಾರ್ಯಕ್ಷಮತೆಯ ಭರವಸೆಯ ಮೇಲೆ ಸರಿಯಾಗಿ ತಪಾಸಿಸದೆ ಇರುವ ಸಂದರ್ಭಗಳೇ ಹೆಚ್ಚು. ಇದರಿಂದ ಹೆಚ್ಚಿನ ಬಡ್ಡಿ ಪಾವತಿಯಾದಂಥ ಸಂದರ್ಭಗಳಲ್ಲಿ ಅವರೂ ಸಹ ಆದಾಯ ಸೋರಿಕೆಯನ್ನು ಗುರುತಿಸಲಾರದವರಾಗುತ್ತಾರೆ. ಅಂತೆಯೇ, ಸಾಲದ ಖಾತೆಗಳಲ್ಲಿಯೂ ಮೂರು/ಆರು ತಿಂಗಳುಗಳಿಗೊಮ್ಮೆ ಬಡ್ಡಿ ಹಾಕುವಾಗಿನ ಅವಾಂತರ ಏತಕ್ಕೂ ಬೇಡ. ಪ್ರತೀ ದಿನದ ಶಿಲ್ಕಿನ ಉತ್ಪನ್ನಗಳನ್ನು ಲೆಕ್ಕ ಹಾಕಬೇಕಾಗುತ್ತದೆ. ನಗದಿ ಸಾಲ, ಮೀರೆಳತಗಳ ವಿಚಾರದಲ್ಲಿಯಂತೂ ಬಹಳ ಕಷ್ಟವಾಗುತ್ತದೆ. ಇಲ್ಲಿ ಬಡ್ಡಿ ವಸೂಲು ಮಾಡುವಾಗ ಕಡಿಮೆಯಾಗುವ ಸಾಧ್ಯತೆಗಳುಂಟು. ದಿನವೂ ಅಥವಾ ವಾರಕ್ಕೊಮ್ಮೆಯಾದರೂ ಸಾಲದ ಖಾತೆಗಳಲ್ಲಿ ಉತ್ಪನ್ನಗಳ ಲೆಕ್ಕಾಚಾರ ಮಾಡುವುದು ಕೊನೇಗಳಿಗೆಯ ಕಷ್ಟವನ್ನು ತಪ್ಪಿಸುವುದಷ್ಟೇ ಅಲ್ಲದೆ, ಆದಾಯ ಸೋರಿಕೆಯನ್ನು ತಡೆಗಟ್ಟುವಲ್ಲಿ ಸಹಾಯಕವಾಗುತ್ತದೆ. ತಿಂಗಳು ಮುಗಿದ ತಕ್ಷಣವೇ ಬಡ್ಡಿಗೆ ಯೋಗ್ಯವಾದ ಶಿಲ್ಕನ್ನು (ಉತ್ಪನ್ನಗಳನ್ನು) ಉಳಿತಾಯ ಖಾತೆಗಳಲ್ಲಿ ಬರೆಯಬೇಕು. ಕೆಲವು ಸಣ್ಣ ಪುಟ್ಟ ವ್ಯತ್ಯಾಸಗಳಿದ್ದಲ್ಲಿ ಅವನ್ನು ತಕ್ಷಣವೇ ಬಗೆಹರಿಸಿಕೊಳ್ಳದಿದ್ದಲ್ಲಿ ಅನಂತರದ ದಿನಗಳಲ್ಲಿ ಅನೇಕ ಕಾರಣಗಳಿಂದ ಸಾಧ್ಯವಾಗುವುದೇ ಇಲ್ಲ. ಯಾವುದೇ ವ್ಯಕ್ತಿಯ ಖಾತೆಗೆ ಹೆಚ್ಚು ಬಡ್ಡಿ ನೀಡಿದರೆ ಅದನ್ನು ಸರಿಪಡಿಸುವಾಗ/ವಸೂಲು ಮಾಡುವಾಗ ಅನೇಕ ತೊಂದರೆಗಳಾಗುತ್ತವೆ. ಆ ವ್ಯಕ್ತಿಯ ಮರಣ, ದಿವಾಳಿಯಾಗುವಿಕೆ ಅಥವಾ ಅವನ ವಿಳಾಸ ಬದಲಾಗಿ ಸರಿಯಾದ ಮಾಹಿತಿ ದೊರೆಯದಿರುವಿಕೆಗಳು ಕಾರಣವಾಗಿ ವಸೂಲಾತಿ ಕಷ್ಟವಾಗಬಹುದು. ಇಲ್ಲವೇ ಕೆಲವೊಮ್ಮೆ ಅದನ್ನು ವಸೂಲು ಮಾಡಲು ಆಗುವ ಖರ್ಚು ಅದರಿಂದ ಉಂಟಾದ ಆದಾಯ ಸೋರಿಕೆಗಿಂತ ಹೆಚ್ಚಾಗಬಹುದು.

ಸಾಲ ಮುಂಗಡಗಳ ಸಂಖ್ಯೆ ಅಥವಾ ಮೊತ್ತಕ್ಕಿಂತ ಅವುಗಳ ಗುಣಮಟ್ಟದ ಕಡೆ ಹೆಚ್ಚಿನ ಗಮನ ಹರಿಸಬೇಕಾಗುತ್ತದೆ. ಸಾಲದ ಮೇಲಿನ ಬಡ್ಡಿ ವಿಧಿಸುವಿಕೆ ಅಸಮರ್ಪಕವಾಗುತ್ತಿದೆಯೆನ್ನುವ ಈ ಸಮಯದಲ್ಲೇ ನಾವು ಕೊಟ್ಟ ಸಾಲದ ಅಸಲೇ ಕೆಟ್ಟು ಹೋಗುತ್ತಿರುವುದರ ಬಗ್ಗೆಯೂ ಗಮನಿಸಬೇಕಾಗಿದೆ.

ಸಿಬ್ಬಂದಿಯ ಹೊಣೆಗಾರಿಕೆ

ಸಂಬಂಧಪಟ್ಟ ಸಿಬ್ಬಂದಿಯನ್ನು ಅವರಿಂದ ಉಂಟಾಗುವ ನಷ್ಟಕ್ಕೆ ಹೊಣೆಗಾರರನ್ನಾಗಿ ಮಾಡಿದಲ್ಲಿ ಅದು ಸಿಬ್ಬಂದಿ ಹೆಚ್ಚಿನ ರೀತಿಯಲ್ಲಿ ಜಾಗರೂಕರಾಗಿರುವಂತೆ ಮಾಡುತ್ತದೆ. ಇದು ಎಲ್ಲ ವರ್ಗದ ಸಿಬ್ಬಂದಿಯ ಕರ್ತವ್ಯ ನಿರ್ವಹಣೆಯಲ್ಲಿನ ಲೋಪವನ್ನು ಕುಂಠಿತಗೊಳಿಸುತ್ತದೆ. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಇತ್ತೀಚೆಗೆ ಬಳಕೆಗೆ ಬರುತ್ತಿರುವ ಖಾತಾನಮೂದು ಯಂತ್ರಗಳು, ಗಣಕಗಳು ಅನೇಕಲೋಪಗಳನ್ನು ತಡೆಯುವುದರಲ್ಲಿ ಯಶಸ್ವಿಯಾಗಿವೆ. ಇವುಗಳ ಸಮಯೋಚಿತ ಬಳಕೆ ಆದಾಯ ಸೋರಿಕೆಯ ತಡೆಗಟ್ಟುವಿಕೆಗೆ ಸಹಾಯಕವಾಗಬಲ್ಲದು. ಹಾಲಿ ಇರುವ ಸಿಬ್ಬಂದಿಗಳಲ್ಲಿ ಇತ್ತೀಚಿನ ದಿನಗಳಲ್ಲಿ ಕ್ಷೀಣಿಸುತ್ತಿರುವಂತೆ ಭಾಸವಾಗುವ ದಕ್ಷತೆ, ಕಾರ್ಯಕ್ಷಮತೆಗಳನ್ನು ಹೆಚ್ಚಿಸುವ ಕಾರ್ಯಗಳಾಗಬೇಕು. ಉತ್ಪಾದಕತಾ ಮಟ್ಟ ಉತ್ತಮಗೊಳ್ಳಬೇಕು. ಕಾರ್ಯಕ್ಷಮತೆಯ ಮಟ್ಟಕುಂಠಿತವಾದಾಗ ಅಸಮರ್ಪಕತೆ, ತಪ್ಪುಗಳ ಹೆಚ್ಚಳ ಉಂಟಾಗಿ ಬ್ಯಾಂಕುಗಳಲ್ಲಿ ಆದಾಯ ಸೋರಿಕೆ ಸಂಚಯಿತವಾಗುತ್ತಾಹೋದರೆ ಆಶ್ಚರ್ಯವೇನಿಲ್ಲ

ಬೃಹತ್ ಬೆಳವಣಿಗೆ ಹೊಂದಿ ದೇಶಾದ್ಯಂತ ಸುಮಾರು 53,000 ಶಾಖೆಗಳನ್ನು ಹೊಂದಿರುವ ಬ್ಯಾಂಕಿಂಗ್ ಉದ್ಯಮದ ಎಲ್ಲ ಸಿಬ್ಬಂದಿಗಳಿಗೆ ತರಬೇತಿ ದೊರೆಯುತ್ತಿದೆಯೇ, ಇದ್ದರೆ ಅದರ

[30ನೆಯ ಪುಟದ 1ನೆ ಅಂಕಣ ನೋಡಿ

ಬ್ಯಾಂಕಿಂಗ್ ಸುದ್ದಿಸಾರ

ಕೆ. ಎನ್. ಮಹಾಬಲ

ವ್ಯಾಪಾರ ಶಿಲ್ಕು ಪರಿಸ್ಥಿತಿ

ಕೇಂದ್ರ ವಾಣಿಜ್ಯ ಮಂತ್ರಾಲಯದ ಪ್ರಕಾರ ಚಾಲ್ತಿ ಆರ್ಥಿಕ ವರ್ಷದ ಮೊದಲರ್ಧದಲ್ಲಿ ಭಾರತದ ವ್ಯಾಪಾರ ಶಿಲ್ಕು ರೂ. 742.43 ಕೋಟಿಯಷ್ಟು ಹೆಚ್ಚಿ ಖೋತಾ ಪ್ರಮಾಣ ಗಣನೀಯವಾಗಿ ತಗ್ಗಿತು.

ರಫ್ತು ಒಟ್ಟು ರೂ. 5,85,744 ಕೋಟಿ ಮತ್ತು ಆಮದು ರೂ. 9,239.01 ಕೋಟಿ ಇದ್ದುವು. ರಫ್ತು ಪ್ರಮಾಣದಲ್ಲಿ ಶೇ. 17ರ ಹೆಚ್ಚಳ ಮತ್ತು ಆಮದು ಪ್ರಮಾಣದಲ್ಲಿ ಸ್ಥಿರತೆ (ಕೇವಲ ಶೇ. 1ರಷ್ಟು ಏರಿಕೆ) ಈ ಸುಧಾರಿಸಿದ ಪರಿಸ್ಥಿತಿಗೆ ಕಾರಣವೆನ್ನಲಾಗಿದೆ.

ಯೂನಿಟ್ ಸಂಬಂಧಿತ ವಿಮಾಯೋಜನೆ

ಯೂನಿಟ್ ಟ್ರಸ್ಟ್ ಆಫ್ ಇಂಡಿಯಾ ಇತ್ತೀಚೆಗೆ ಯೂನಿಟ್ ಸಂಬಂಧಿತ ವಿಮಾಯೋಜನೆಯ (U L I P) ಗರಿಷ್ಠ ಮೊತ್ತವನ್ನು ರೂ. 30,000 ಗಳಿಂದ ರೂ. 60,000ಗೆ ಏರಿಸಲು ತೀರ್ಮಾನಿಸಿದೆ. ವಯೋಮಿತಿಯ ವಿಷಯದಲ್ಲೂ ಕೆಲವೊಂದು ಬದಲಾವಣೆಗಳನ್ನು ಮಾಡಲಾಗಿದೆ. ಹತ್ತು ವರ್ಷದ ಸದಸ್ಯತ್ವಕ್ಕೆ ಈಗಿನ 45 ವರ್ಷದಿಂದ 50 ವರ್ಷಕ್ಕೆ ವಯೋಮಿತಿ ಏರಿಸಲಾಗಿದೆ. 15 ವರ್ಷದ ಸದಸ್ಯತ್ವಕ್ಕೆ ಈಗಿರುವಂತೆಯೇ 45 ವರ್ಷಗಳ ಗರಿಷ್ಠ ವಯೋಮಿತಿ ಮುಂದುವರಿಯುತ್ತದೆ.

ಕೆನರಾ ಬ್ಯಾಂಕ್ ಗುತ್ತಿಗೆ ಕಂಪನಿ ಸ್ಥಾಪನೆ

ಗುತ್ತಿಗೆ ಸಹಾಯಕ ಕಂಪನಿಯೊಂದನ್ನು (Leasing Subsidiary Company) ಹುಟ್ಟು ಹಾಕಿರುವ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಕೆನರಾ ಬ್ಯಾಂಕ್ ಮೊಟ್ಟಮೊದಲನೆಯದಾಗಿದೆ. (ಭಾರತೀಯ ಸ್ಟೇಟ್ ಬ್ಯಾಂಕ್‌ನ ಎಸ್‌ಬಿಐ ಕ್ಯಾಪಿಟಲ್ ಮಾರ್ಕೆಟ್ಸ್ ಈಗಾಗಲೇ ಕಾರ್ಯಪ್ರವೃತ್ತವಾಗಿದೆ) 'ಕ್ಯಾನ್ ಬ್ಯಾಂಕ್ ಲೀಸಿಂಗ್' ಎಂದು ಕರೆಯಲಾಗಿರುವ ಈ ಹೊಸ ಗುತ್ತಿಗೆ ಕಂಪನಿಯು ರೂ. 10 ಕೋಟಿ ಬಂಡವಾಳದ ಬುನಾದಿಯನ್ನು ಹೊಂದಿದೆ. ಗುತ್ತಿಗೆ ಕಾರ್ಯಾಚರಣೆಗಳು, ವಣಿಕ ಬ್ಯಾಂಕಿಂಗ್, ಅನಿವಾಸಿ ಭಾರತೀಯರ ವಿನಿಯೋಜನೆ, ವಿನಿಯೋಜನಾಸ್ಥಿತಿ ಕುರಿತ ವಾರ್ತಾಪತ್ರವೊಂದರ ಪ್ರಕಟಣೆ, ಷೇರು ಸಂಸ್ಕರಣ ವಿಭಾಗದ ಸ್ಥಾಪನೆ—ಮುಂತಾದುವು ಈ ಗುತ್ತಿಗೆ ಕಂಪನಿಯ ಕಾರ್ಯವ್ಯಾಪ್ತಿಯಲ್ಲಿವೆ.

ವಿದೇಶೀ ವಿನಿಮಯ ವಹಿವಾಟು: ಲಂಡನ್ ಮುಂಚೂಣಿಯಲ್ಲಿ

ವಿದೇಶೀ ವಿನಿಮಯ ವಹಿವಾಟಿನಲ್ಲಿ ಲಂಡನ್ ವಿಶ್ವದಲ್ಲೇ ಪ್ರಮುಖವಾದ ಸ್ಥಾನ ಹೊಂದಿದೆ. ಇತ್ತೀಚಿನ ಸಮೀಕ್ಷೆಯೊಂದರಂತೆ ಸರಾಸರಿ ವಹಿವಾಟು ದಿನವೊಂದಕ್ಕೆ 90 ಬಿಲಿಯನ್ ಡಾಲರ್‌ಗಳಿದ್ದವು. ನ್ಯೂಯಾರ್ಕ್ 50 ಬಿಲಿಯನ್, ಟೋಕಿಯೋ 48 ಬಿಲಿಯನ್‌ಗಳಿಂದ ನಂತರದ ಸ್ಥಾನಗಳನ್ನು ಪಡೆದವು.

ಲಂಡನ್ ನಗರದ ಈ ಹೆಗ್ಗಳಿಕೆಗೆ ಅದು ಅನುಕೂಲಕರ ಕಾಲವಲಯ ದಲ್ಲಿರುವುದು (Time zone), ಇಂಗ್ಲಿಷನ್ನು ಮುಖ್ಯ ವ್ಯವಹಾರ ಭಾಷೆಯ ನ್ನಾಗಿ ಹೊಂದಿರುವುದು, ಲಂಡನ್ ವ್ಯಾಪಾರಿಗಳ ಕೌಶಲ, ಆಳವಾಗಿ ರೂಪುಗೊಂಡಿರುವ ಅಲ್ಲಿನ ಮಾರುಕಟ್ಟೆಗಳು, ಅಲ್ಲಿರುವ ನಿಯಂತ್ರಣದ ವಾತಾವರಣ—ಇವೆಲ್ಲ ಕಾರಣವೆನ್ನಲಾಗಿದೆ.

ವಿಶ್ವ ಬ್ಯಾಂಕ್ ಬಡ್ಡಿದರ

8–1–87ರಿಂದ ಅನ್ವಯವಾಗುವಂತೆ ಅಭಿವೃದ್ಧಿಶೀಲ ದೇಶಗಳಿಗೆ ನೀಡುವ ಸಾಲಗಳ ಮೇಲಿನ ಬಡ್ಡಿದರವನ್ನು ವಿಶ್ವ ಬ್ಯಾಂಕ್ ಶೇಕಡ 8.23ರಿಂದ ಶೇಕಡ 7.92ಕ್ಕೆ ಇಳಿಸಿದೆ.

ದಕ್ಷಿಣ ಆಫ್ರಿಕಾ: ಬಾರ್ಕ್‌ಲೇಸ್ ಬ್ಯಾಂಕ್ ವಿನಿಯೋಜನೆಯಲ್ಲಿ ನಿರಾಸಕ್ತಿ

ಬಾರ್ಕ್‌ಲೇಸ್ ಬ್ಯಾಂಕ್ ದಕ್ಷಿಣ ಆಫ್ರಿಕಾದಲ್ಲಿನ ತಮ್ಮ ವಿನಿಯೋಜನೆ ಯನ್ನು ಹಿಂತೆಗೆದುಕೊಳ್ಳಲು ನಿರ್ಧರಿಸಿದೆ. ದೇಶದ ದೊಡ್ಡ ಬ್ಯಾಂಕ್ ಆಗಿ, ಸಾವಿರ ಶಾಖೆಗಳನ್ನೂ 25,000 ಉದ್ಯೋಗಿಗಳನ್ನೂ ಬಾರ್ಕ್‌ಲೇಸ್ ಬ್ಯಾಂಕ್ ದಕ್ಷಿಣ ಆಫ್ರಿಕಾದಲ್ಲಿ ಹೊಂದಿದೆ. 148 ವರುಷಗಳಿಂದ ದಕ್ಷಿಣ ಆಫ್ರಿಕಾದಲ್ಲಿ ಬ್ಯಾಂಕಿಂಗ್ ವ್ಯವಹಾರ ನಡೆಸುತ್ತಿರುವ ಬಾರ್ಕ್‌ಲೇಸ್ ಬ್ಯಾಂಕಿನ ಈ ನಿರ್ಧಾರ ದಕ್ಷಿಣ ಆಫ್ರಿಕಾಕ್ಕೆ ಆಘಾತ ನೀಡಬಲ್ಲದೆನ್ನಲಾಗಿದೆ.

ವಿಶ್ವ ವ್ಯಾಪಾರ ದೃಶ್ಯ, 1985-86

ಸುಂಕ ಮತ್ತು ವ್ಯಾಪಾರ ಕುರಿತ ಸಾರ್ವತ್ರಿಕ ಒಪ್ಪಂದದ (GATT) 1985–86ರ ವರದಿಯ ಪ್ರಕಾರ 1985ರಲ್ಲಿ ವಿಶ್ವ ವ್ಯಾಪಾರದ ಪ್ರಮಾಣ ದಲ್ಲಿ ಶೇ. 3 ಏರಿಕೆ ಕಂಡುಬಂದಿದೆ. 1984ರಲ್ಲಿ ಈ ಏರಿಕೆ ಶೇ. 95 ಇತ್ತು. ಒಟ್ಟು ವ್ಯಾಪಾರದ ಮೌಲ್ಯದಲ್ಲಿ ಶೇ. 1 ಹೆಚ್ಚಳ ಕಂಡಬಂದಿತು (1984ರಲ್ಲಿ ಇದು ಶೇಕಡ 5.5 ಇತ್ತು).

ಅಭಿವೃದ್ಧಿಶೀಲ ದೇಶಗಳ ರಫ್ತು ಆದಾಯದಲ್ಲಿ ಶೇ. 5.5ರಷ್ಟು ಕುಸಿತ ಕಂಡುಬಂದಿತು. ಹಾಗೆಯೇ ಆ ದೇಶಗಳ ಆಮದು ಮೌಲ್ಯ ಶೇಕಡ 6.5 ರಷ್ಟು ಇಳಿಯಿತು. ಅಭಿವೃದ್ಧಿಶೀಲ ದೇಶಗಳ ವ್ಯಾಪಾರ ಶಿಲ್ಕಿನಲ್ಲಿ 100 ಬಿಲಿಯನ್ ಡಾಲರ್‌ಗಳ ಖೋತಾ ಕಂಡುಬಂತು.

ವರದಿಯ ಪ್ರಕಾರ 1985ರಲ್ಲಿ ವಿಶ್ವವ್ಯಾಪಾರ ರಂಗದ ಎರಡು ಎದ್ದು ಕಾಣುವ ಅಂಶಗಳೆಂದರೆ ಒಂದು, ಅಭಿವೃದ್ಧಿಶೀಲ ದೇಶಗಳ ವ್ಯಾಪಾರ ಸಾಧನೆಯಲ್ಲಿ ಕುಸಿತ, ಮತ್ತೊಂದು ಬೃಹತ್ ಕೈಗಾರಿಕಾ ದೇಶಗಳಲ್ಲಿ ಕಂಡು ಬಂದಿರುವ ವ್ಯಾಪಾರ ಅಸಮತೋಲ.

ಮಾರ್ಚ್ 85 ಮತ್ತು 86ರ ನಡುವಣ ಅವಧಿಯಲ್ಲಿ ಡಾಲರ್‌ನ ವಾಸ್ತವ ವಿನಿಮಯ ದರ ಶೇ. 22ರ ಇಳಿಕೆಯನ್ನು ಕಂಡಿದ್ದರೆ ಯೆನ್ ಶೇ. 28 ಏರಿಕೆ ಯನ್ನೂ ಮಾರ್ಕ್ ಶೇಕಡ 6 ಹೆಚ್ಚಳವನ್ನೂ ಕಂಡವು.

ರಾಷ್ಟ್ರೀಯ ವರಮಾನ, ಉಳಿತಾಯ, ವಿನಿಯೋಜನೆ, 1985-86ರ ಚಿತ್ರ

ಕೇಂದ್ರೀಯ ಸಂಖ್ಯಾಶಾಸ್ತ್ರ ಸಂಸ್ಥೆಯ (Central Statistical Organisation CSO) ಕ್ಷಿಪ್ರ ಅಂದಾಜಿನಂತೆ 1985–86ರಲ್ಲಿ ರಾಷ್ಟ್ರೀಯ ವರಮಾನ ಶೇ. 5.1ರ ಬೆಳವಣಿಗೆ ಪಡೆದಿತ್ತು (1984–85ರಲ್ಲಿ ಇದು ಶೇ. 3.5 ಇತ್ತು) 1970–71ರ ಸ್ಥಿರ ವರ್ಷದ ಆಧಾರದಂತೆ ರಾಷ್ಟ್ರೀಯ ವರಮಾನದ ಒಟ್ಟು ಮೊತ್ತ ಸುಮಾರು ರೂ. 60,143 ಕೋಟಿ. (1984–85ರಲ್ಲಿ ರೂ. 57,243 ಕೋಟಿ). ಚಾಲ್ತಿ ಬೆಲೆಗಳಲ್ಲಿ ರಾಷ್ಟ್ರೀಯ ವರಮಾನ ರೂ. 1,95,707 ಆಗಿತ್ತು (ಚಾಲ್ತಿ ಬೆಲೆಯ ಪ್ರಕಾರ ಸುಮಾರು 2595.6) ಇದು 1984–85ರ ಮಟ್ಟಕ್ಕಿಂತ ಶೇಕಡ 3 ಹೆಚ್ಚು.

ಗ್ರಾಹಕ ಸೇವೆ— ಹೊಸ ಸವಾಲುಗಳು

ವೇಗದ, ಪೈಪೋಟಿಯ ಈ ಯುಗದಲ್ಲಿ ನಮ್ಮ ಬ್ಯಾಂಕುಗಳು ಉಳಿದು ಬೆಳೆಯಬೇಕಾದರೆ ಗ್ರಾಹಕ ಸೇವೆಗೆ ಅಗ್ರಮಾನ್ಯತೆ ನೀಡುವುದು ಅತ್ಯಗತ್ಯ. ಆದರೆ ಹೇಗೆ....?

ಗ್ರಾಹಕ ಸೇವೆ ಗ್ರಾಹಕನಷ್ಟೇ ಹಳೆಯ ಪದ. ಆದರೆ ಇದು ಎಸೆಯುತ್ತಿರುವ ಹೊಸ ಸವಾಲುಗಳನ್ನು ಎದುರಿಸಲು ಬ್ಯಾಂಕುಗಳು ಎಲ್ಲ ಬಗೆಯಲ್ಲಿ ಸಜ್ಜಾಗಬೇಕಿದೆ. ಇದಕ್ಕೆ ಮುಖ್ಯ ಕಾರಣ ಬ್ಯಾಂಕುಗಳಲ್ಲಿ ಇರುವ ಪರಸ್ಪರ ಪೈಪೋಟಿ. ಬ್ಯಾಂಕೊಂದು ಅಂಚೆ ಕಛೇರಿ ಆಗಿದ್ದಿದ್ದರೆ ಅಂತರ್ದೇಶೀ ಪತ್ರ ಖರ್ಚಾಗಲಿಲ್ಲವೆಂದು ಬ್ಯಾಂಕರ್ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಪರಸ್ಪರ ಪೈಪೋಟಿ ಇರುವ ಕ್ಷೇತ್ರದಲ್ಲಿ ವಸ್ತುವೊಂದು ಮಾರಾಟ ಆಗಬೇಕಾದರೆ ಆ ವಸ್ತುವಿನ ಬಗ್ಗೆ ಪ್ರಚಾರ, ಅದನ್ನು ಪಡೆಯಲು ಬರುವ ಗಿರಾಕಿಗೆ ಮನವೊಲಿಸುವ ರೀತಿ ಹಾಗೂ ಮಾರಾಟಾನಂತರದ ಸೇವೆ ಮುಖ್ಯ. ಪ್ರತಿಯೊಬ್ಬ ಗ್ರಾಹಕನೂ ತನಗೆ ಹೆಚ್ಚು ಸೌಲಭ್ಯ ದೊರೆಯಬಹುದಾದ ಬ್ಯಾಂಕಿಗೇ ಹೋಗುವುದು ಸಹಜ. ಸೌಲಭ್ಯ ಕಡಿಮೆ ಎನ್ನಿಸಿದಲ್ಲಿ ಬ್ಯಾಂಕಿಂದ ಬ್ಯಾಂಕಿಗೆ ಹಾರಬಲ್ಲ ಗ್ರಾಹಕ ಸರ್ವಸ್ವತಂತ್ರ. ಅವನ ಪಕ್ಷಾಂತರವನ್ನು ತಡೆಯಲು ಯಾವ ಕಾಯಿದೆಯಿಂದಲೂ ಸಾಧ್ಯವಿಲ್ಲ.

ಗ್ರಾಹಕ ಚಳವಳಿ

ಗ್ರಾಹಕ ತನಗೆ ಬ್ಯಾಂಕಿಂದ ದೊರೆಯಬೇಕಾದ ಸವಲತ್ತುಗಳ ಬಗ್ಗೆ, ವಿವಿಧ ಸೇವೆಗಳ ಬಗ್ಗೆ ಇಂದು ಬ್ಯಾಂಕರನಿಗಿಂತಲೂ ಹೆಚ್ಚು ಬಲ್ಲವನಾಗಿದ್ದಾನೆ. ಗ್ರಾಹಕ ಚಳವಳಿ ಒಂದು ಸ್ಪಷ್ಟ ರೂಪದಲ್ಲಿ ಇತ್ತೀಚೆಗೆ ಕಾಣಿಸಿಕೊಂಡಿದೆ. ರಾಷ್ಟ್ರೀಯ ಮಟ್ಟದಲ್ಲಿ ಠೇವಣಿದಾರರ ಸಂಘಗಳೂ ಸ್ಥಾಪಿತವಾಗಿವೆ. ಗ್ರಾಹಕ ತನ್ನ ಸವಲತ್ತುಗಳನ್ನು ಪಡೆಯಲು ಯಾವ ಮಟ್ಟದ ಚಳವಳಿಗೂ ಸಿದ್ಧ ಎಂಬುದಕ್ಕೆ ಇಲ್ಲೊಂದು ನಿದರ್ಶನ: ನಗರವೊಂದರಲ್ಲಿ ಬ್ಯಾಂಕೊಂದರ ದೊಡ್ಡ ಶಾಖೆ. ಅಲ್ಲಿನ ನೌಕರರು ಯಾವುದೋ ಆಂತರಿಕ ಸಮಸ್ಯೆಗಳ ಪರಿಹಾರಾರ್ಥ ಮುಷ್ಕರದಲ್ಲಿ ತೊಡಗಿ ನಿಧಾನ ತಂತ್ರ ಅನುಸರಿಸಿ ನಿಯಮಾನುಸಾರ (ಅಂದರೆ ಅವರ ನಿಯಮಾನುಸಾರ) ಕೆಲಸ ಮಾಡಲು ತೊಡಗಿ ಗ್ರಾಹಕರಿಗೆ ತಡ ಮಾಡುತ್ತಿದ್ದ ಸಮಯ. ಇದನ್ನು ಕಂಡ ಕೆಲವು ಗ್ರಾಹಕರು, ಸಿಟ್ಟಾದರು, ಒಟ್ಟಾದರು. ಬ್ಯಾಂಕ್ ನೌಕರರ ಈ ವಿಳಂಬ ನೀತಿಯ ವಿರುದ್ಧ ಸಿಡಿದೆದ್ದು, ಬ್ಯಾಡ್ಜುಗಳನ್ನು ಧರಿಸಿಕೊಂಡು ನೌಕರರಿಗೆ ಧಿಕ್ಕಾರ ಹಾಕಿದ್ದಲ್ಲದೆ ಬ್ಯಾಂಕಿಗೆ ಬರುವ ಎಲ್ಲ ಗ್ರಾಹಕರಿಗೂ ಈ ವಿಳಂಬ ನೀತಿಯ ಬಗ್ಗೆ ಮನದಟ್ಟು ಮಾಡಿಸಿ ಜನರನ್ನು ಬ್ಯಾಂಕಿನ ವಿರುದ್ಧ ಎತ್ತಿಕಟ್ಟುವಲ್ಲಿ ಸಫಲರಾದರು. ಆಂತರಿಕ ಸಮಸ್ಯೆಗಳಿಗಾಗಿ ಗ್ರಾಹಕರಿಗೆ ತೊಂದರೆ ನೀಡುವ ಪರಿಗೆ ಬಹಿಷ್ಕಾರ ಹಾಕಿ, ಇದು ಹೀಗೇ ಮುಂದುವರಿದಲ್ಲಿ ಎಲ್ಲ ಮಂದಿಯ ಖಾತೆಗಳನ್ನು ಹಿಂತೆಗೆದುಕೊಳ್ಳುವುದಾಗಿ ಬೆದರಿಸುವ ಮಟ್ಟಕ್ಕೆ ಹೋಗಿದ್ದರು.

ಅಂದ ಮೇಲೆ ಎಚ್ಚೆತ್ತ ಗ್ರಾಹಕನ ಜೊತೆ ವ್ಯವಹರಿಸಬೇಕಾದ ಈ ಕಾಲದಲ್ಲಿ ಬ್ಯಾಂಕರ್ ತನ್ನ ಸಂಸ್ಥೆಯ ಹಿತಾಸಕ್ತಿ ಕಡೆಗಣಿಸುವಂತಿಲ್ಲ.

ಗ್ರಾಹಕನೇ ಬ್ಯಾಂಕಿನ ಜೀವನಾಡಿ. ಈ ಜೀವನಾಡಿಯ ಮಿಡಿತ ಕ್ರಮಬದ್ಧವಾಗಿರಲು, ಲಯಬದ್ಧವಾಗಿರಲು ಕುಂದುಕೊರತೆಗಳ ತೊಂದರೆ ತಪ್ಪಬೇಕು. ಎಲ್ಲ ಬ್ಯಾಂಕುಗಳು ತಿಂಗಳಲ್ಲಿ ಒಂದೆರಡು ದಿನ ಸಲಹೆ/ದೂರು ಸ್ವೀಕರಿಸಲು ಗ್ರಾಹಕರನ್ನು ಬರಮಾಡಿಕೊಳ್ಳುತ್ತಿವೆ. ಗ್ರಾಹಕ ಬ್ಯಾಂಕಿನ ಅತಿ ಹಿರಿಯ ಅಧಿಕಾರಿಯನ್ನೇ ಭೇಟಿ ಮಾಡಿ ತನ್ನ ಕುಂದುಕೊರತೆಗಳನ್ನು ಹೇಳಿಕೊಳ್ಳಲು ಈಗ ಮುಕ್ತ ಅವಕಾಶವಿದೆ.

ಇದು ವೇಗಯುಗ. ಕಾಲದ ವೇಗದೊಡನೆ ಸ್ಪರ್ಧೆ ಹೂಡಿರುವ ಗ್ರಾಹಕ ಕುದುರೆ ಹತ್ತಿ ಬರುವುದೇ ಹೆಚ್ಚು. ಅವನು ನೀಡುವ ಚೆಕ್ಕುಗಳು ತತ್‌ಕ್ಷಣ ಜಮೆ ಆಗಬೇಕು. ಪರಊರಿನ ಚೆಕ್ಕುಗಳನ್ನು ವಿಳಂಬವಿಲ್ಲದೆ ವಸೂಲಿ ಮಾಡಿಕೊಡಬೇಕು. ಬ್ಯಾಂಕರ್ ವಾಯುದೂತನನ್ನು ಅವಲಂಬಿಸುತ್ತಾನೋ, ಹನುಮದೂತನ ಮೂಲಕ ಶೀಘ್ರ ಚೆಕ್ ವಿಲೇವಾರಿ ಮಾಡುತ್ತಾನೋ—ಅದು ಗ್ರಾಹಕನಿಗೆ ಬೇಡ. ಅವನಿಗೆ ಬೇಕಿರುವುದು ಶೀಘ್ರ ಸೇವೆ ಮಾತ್ರ. ರಾಷ್ಟ್ರೀಯ ತೀರುವೆ ಮನೆ ಮೂಲಕ ಶೀಘ್ರ ವಹಿವಾಟು ಮಾಡಲು ರಾಷ್ಟ್ರದ ನಾಲ್ಕು ಪ್ರಮುಖ ನಗರಗಳಿಗೆ ವಿಮಾನ ಮೂಲಕ ಚೆಕ್ಕುಗಳನ್ನು ಕಳಿಸುವ ಪರಿಪಾಟಿಯನ್ನು ಬ್ಯಾಂಕುಗಳು ಆರಂಭಿಸಿವೆ. ಗ್ರಾಹಕನಿಗಾಗಿ ವಿಶಿಷ್ಟ ಬಗೆಯ ಸವಾಲುಗಳನ್ನು ಸ್ವೀಕರಿಸಲೇಬೇಕಾದ ಅನಿವಾರ್ಯ ಇದೀಗ ಕಾಣಿಸಿಕೊಂಡಿದೆ.

ಉದರಿ ಕಾರ್ಡ್

ಗ್ರಾಹಕನಿಗೆ ಅನುಕೂಲವಾಗಲೆಂದು ಬ್ಯಾಂಕುಗಳು ಇತ್ತೀಚೆಗೆ ಉದರಿ ಕಾರ್ಡ್ ಪದ್ಧತಿ ಪ್ರಾರಂಭಿಸಿದೆ. ಪ್ರವಾಸಿ ಚೆಕ್ಕುಗಳಿಗಿಂತಲೂ ಸುಲಭ ಎನ್ನಿಸುವ ಈ ಉದರಿ ಕಾರ್ಡ್ ಜನಪ್ರಿಯವಾಗತೊಡಗಿದೆ. ಪ್ರತಿಷ್ಠಿತ ವ್ಯಕ್ತಿಗಳಿಗೆ ನೀಡುವ ಈ ಕಾರ್ಡಿನಲ್ಲಿ ಧಾರಕನ ಹೆಸರು, ವಿಳಾಸ ಹಾಗೂ ಸಹಿ ಇರುತ್ತವೆ. ಪ್ರಮುಖ ಹೋಟೆಲ್‌ಗಳು, ವ್ಯಾಪಾರಿ ಸಂಸ್ಥೆಗಳು ಈ ಕಾರ್ಡನ್ನು ಆದರಿಸುತ್ತವೆ. ಪ್ರವಾಸದಲ್ಲಿದ್ದಾಗ ಹಣವನ್ನು ಒಯ್ಯುವ ಅಗತ್ಯವಿಲ್ಲ. ಚೆಕ್ ಪುಸ್ತಕಗಳ ರಗಳೆ ಮೊದಲೇ ಇಲ್ಲ. ಕೇವಲ ಗುರುತಿನ ಚೀಟಿಯಿಂದ ಗ್ರಾಹಕ ತನಗೆ ಬೇಕಾದ ಸೌಲಭ್ಯಗಳನ್ನು ಪಡೆಯಬಹುದಾದ ಈ ಪದ್ಧತಿ ಕೆಲವಾರು ಬ್ಯಾಂಕುಗಳಲ್ಲಿದೆ. ಉಳಿದ ಹಲವಾರು ಬ್ಯಾಂಕುಗಳು ಈ ಬಗ್ಗೆ ಯೋಚಿಸಿ ಕ್ರೆಡಿಟ್ ಕಾರ್ಡ್‌ಅನ್ನು ಜಾರಿಗೆ ತರಬೇಕಾಗಿದೆ.

'ಗ್ರಾಹಕ ಎಂದೂ ಸರಿ' ಎಂಬ ಸಾರಾಸಗಟು ಶಿಫಾರಸು ಪತ್ರವನ್ನು ಮಹಾತ್ಮ ಗಾಂಧಿಯಿಂದಲೇ ಪಡೆದಿರುವ ಗ್ರಾಹಕ ಬ್ಯಾಂಕನ್ನು ಅವಲಂಬಿಸಿಲ್ಲ; ಬ್ಯಾಂಕು ಗ್ರಾಹಕನನ್ನು ಅವಲಂಬಿಸಿದೆ, ಇದು ಎಲ್ಲ ಕಾಲಕ್ಕೂ ನಿಲ್ಲುವ ಸತ್ಯ. ಅಂದ ಮೇಲೆ ಗ್ರಾಹಕನ ಅಸಮಾಧಾನ, ತಪ್ಪುಗಳ ನಡುವೆಯೂ ಅನುಸರಿಸಿ ನಡೆದು ಸೌಹಾರ್ದ ವಾತಾವರಣ ಉಂಟುಮಾಡಬೇಕಾದರೆ ಬ್ಯಾಂಕಿನ ಅಧಿಕಾರಿ ಮತ್ತು ನೌಕರರಿಗೆ ತಾಳ್ಮೆ ಇರಬೇಕು, ಹೃದಯವಂತಿಕೆ ಇರಬೇಕು. ತಾವು ವ್ಯವಹರಿಸುತ್ತಿರುವುದು ಸೂಕ್ಷ್ಮ ಮನದ ತೀಕ್ಷ್ಣಮತಿಯ ಗ್ರಾಹಕನೊಡನೆ ಎಂಬ ಅರಿವು ಇರಬೇಕು. ಪ್ರತಿಯೊಬ್ಬ ಬ್ಯಾಂಕರನಿಗೂ ಮನಶಾಸ್ತ್ರ, ಮನೋವಿಜ್ಞಾನದಲ್ಲಿ ತರಬೇತಿ ನೀಡಬೇಕಾದ ಅಗತ್ಯ ಈಗ ಹೆಚ್ಚಿದೆ.

ಗ್ರಾಹಕರ ಕುಂದುಕೊರತೆಗಳ ನಿವಾರಣಾ ಸಪ್ತಾಹ ಮಾಡಿದರೆ ಸಾಲದು. ತಾತ್ಕಾಲಿಕ ಪರಿಹಾರದಿಂದ, ತುರ್ತು ಸೇವೆಯಿಂದ ಸಮಸ್ಯೆ ಬಗೆಹರಿಸುವ ಬದಲು ಶಾಶ್ವತ ಪರಿಹಾರ ಮಾರ್ಗಗಳನ್ನು ಯೋಚಿಸಬೇಕಾಗಿದೆ.

ಜಾಹೀರಾತುಗಳು

ಗ್ರಾಹಕರನ್ನು ಆಕರ್ಷಿಸಲು ಜಾಹೀರಾತುಗಳನ್ನು

ಎಂ. ಎಸ್. ನರಸಿಂಹಮೂರ್ತಿ
ವ್ಯವಸ್ಥಾಪಕ
ಮೈಸೂರು ಬ್ಯಾಂಕು
ಜಡಿಗೇನಹಳ್ಳಿ 562 154

ಮಾಧ್ಯಮವನ್ನಾಗಿ ಬಳಸುತ್ತೇವೆ. ಎಲ್ಲ ವರ್ಗದ ಜನರಿಗೆ ಅಪ್ಯಾಯಮಾನವಾಗುವಂತಹ ಜಾಹೀರಾತುಗಳನ್ನು ನೀಡುವ ಅಗತ್ಯವೂ ಮುಖ್ಯ. ಕೆಲವೊಮ್ಮೆ ಜಾಹೀರಾತು ಓದಿ ರೊಚ್ಚಿಗೇಳುವ ಗ್ರಾಹಕರಿಗೂ ಕೊರತೆಯಿಲ್ಲ. 'ನಿಮ್ಮ ಮಗಳ ಮದುವೆಗೆ ಹತ್ತು ಸಾವಿರ ನಮ್ಮಲ್ಲಿ ಠೇವಣಿಯಾಗಿಟ್ಟು ಅರ್ಧ ಲಕ್ಷ ಹಿಂಪಡೆಯಿರಿ' ಎಂಬ ಜಾಹೀರಾತನ್ನು ಕೆಲವು ಮಹಿಳಾ ಸಂಘಗಳು ವಿರೋಧಿಸಿ, 'ಇದು ವರದಕ್ಷಿಣೆ ಪಿಡುಗನ್ನು ಪ್ರೋತ್ಸಾಹಿಸುತ್ತಿದೆ. ಅದ್ದೂರಿ ಮದುವೆಗಳಿಗೆ ಮಾನ್ಯತೆ ನೀಡುತ್ತಿದೆ' ಎಂದು ಆರೋಪಿಸಿದ್ದೂ ಉಂಟು.

'ನಿಮ್ಮ ಮಗ ವೈದ್ಯನಾಗಬೇಕೆ ? ನಮ್ಮ ಬ್ಯಾಂಕಿನಲ್ಲಿ ಆಕರ್ಷಕ ಆವರ್ತಕ ಠೇವಣಿ ಪ್ರಾರಂಭಿಸಿ' ಎಂಬ ಜಾಹೀರಾತು ನೋಡಿ ಕುಪಿತರಾದ ಗ್ರಾಹಕರು, 'ಮಗ ಮಾತ್ರ ಯಾಕೆ ? ಮಗಳು ಡಾಕ್ಟರ್ ಆಗಬಾರದೇ ? ಮಗ ಎಷ್ಟೇ ದೊಡ್ಡ ಡಾಕ್ಟರ್ ಆದರೂ ಅವನು ಲೇಡಿ ಡಾಕ್ಟರ್ ಆಗಲು ಸಾಧ್ಯವಿಲ್ಲ. ಮಗ-ಮಗಳೆಂಬ ತಾರತಮ್ಯ ತೆಗೆಯಿರಿ' ಎಂದು ಆಗ್ರಹಪಡಿಸಿ, ಇತ್ತೀಚೆಗೆ ಒಂದು ಬ್ಯಾಂಕು ತನ್ನ ಜಾಹೀರಾತು ಬದಲಿಸಿಕೊಳ್ಳುವಂತೆ ಮಾಡಿತು. 'ಮಗ'ನನ್ನು 'ಮಗು' ಮಾಡಿ 'ನಿಮ್ಮ ಮಗುವಿನ ಭವಿಷ್ಯಕ್ಕೆ' ಎಂಬ ತಿದ್ದುಪಡಿ ತಂದು ಲಿಂಗಾತೀತ ಜಾಹೀರಾತನ್ನು ಕೊಟ್ಟು ಗ್ರಾಹಕರನ್ನು ಸಮಾಧಾನಪಡಿಸಿದ್ದಾಯಿತು.

ಮಾರಾಟ ತಂತ್ರ

ಪ್ರತಿಯೊಬ್ಬ ಬ್ಯಾಂಕರ್ ಮಾರುವುದು ಅದೇ ಬಡ್ಡಿಯ ಅದೇ ಠೇವಣಿಯನ್ನೇ ಆದರೂ ಯೋಜನೆಗೆ ಇಟ್ಟಿರುವ ಹೆಸರುಗಳು ಮಾತ್ರ ಬೇರೆ ಬೇರೆ. ಆಕರ್ಷಕ ಬಣ್ಣ, ವೈವಿಧ್ಯಮಯ ಕಾಗದದಲ್ಲಿ ಸುತ್ತಿ ಬಗೆಬಗೆಯ ಸಾಮಾನುಗಳನ್ನು ಒಂದೇ ತಯಾರಿಕಾ ಸಂಸ್ಥೆ ಮಾರಾಟ ಮಾಡುವಂತೆ ಬ್ಯಾಂಕರ್ ತನ್ನ ಯೋಜನೆಗಳನ್ನು ಜನತೆಗೆ ತಲುಪಿಸಬೇಕಿದೆ. ಪ್ರಮುಖ ವ್ಯಾಪಾರಿ ಸಂಸ್ಥೆಗಳಂತೆ ಬ್ಯಾಂಕುಗಳು ಸಹ ಹೊಸ ಬಗೆಯ ಜಾಹೀರಾತುಗಳನ್ನು ಜನಕ್ಕೆ ಮುಟ್ಟಿಸುವಲ್ಲಿ ಶಕ್ತಿಮೀರಿ ಪ್ರಯತ್ನಿಸುತ್ತಿವೆ. ಆದರೆ ಎಲ್ಲ ವರ್ಗದ ಜನಕ್ಕೆ ಅನ್ವಯಿಸುವ ರೀತಿಯಲ್ಲಿ ಜಾಹೀರಾತು ಇರುವಂತೆ ಎಚ್ಚರ ವಹಿಸಬೇಕಾದುದು ಮುಖ್ಯ.

ಗ್ರಾಹಕ ಸೇವೆಯನ್ನು ಮತ್ತಷ್ಟು ಉತ್ತಮಪಡಿಸಲು ವಿಜ್ಞಾನಯುಗ ನೆರವಾಗಿದೆ. ಗಣಕ ಮತ್ತು ಇತರ ಯಂತ್ರಗಳನ್ನು ಆದಷ್ಟು ಹೆಚ್ಚಿಗೆ ಬಳಸಿದಲ್ಲಿ ಗ್ರಾಹಕ ಸೇವೆಯನ್ನು ಉತ ಮಪಡಿಸಲು ಸಾಧ್ಯ. ಯಾಂತ್ರೀಕರಣದ ಅಗತ್ಯ ಇಂದು ಬ್ಯಾಂಕಿಂಗ್ ಕ್ಷೇತ್ರಕ್ಕೆ ಬೇಕಿದೆ. ಕೂಡಿ ಕಳೆಯುವ ಲೆಕ್ಕಗಳಲ್ಲಿ ತಲೆ ಕೆಡಿಸಿಕೊಂಡು, ಕೆಲಸದ ಒತ್ತಡ ಏರಿಸಿಕೊಂಡು, ಮತ್ತೊಬ್ಬ ಹೊಸ ಗ್ರಾಹಕ ಬಂದನೆಂದರೆ ಇವನನ್ನು ಸುಧಾರಿಸುವುದು ಹೇಗೆ ಎಂದು ಗಾಬರಿಯಾಗುವಲ್ಲಿ ಯಾವ ರೀತಿಯ ಸೇವೆ ಹೊಸ ಗ್ರಾಹಕನಿಗೆ ಸಿಗಲು ಸಾಧ್ಯ ?

ಷೇರು ಮತ್ತು ವಿದೇಶಿ ವಿನಿಮಯ ವಲಯದಲ್ಲಿ ವ್ಯವಹರಿಸುವಾಗ ನಮ್ಮ ಕಾರ್ಯವಿಧಾನ ಎಷ್ಟೇ ಕ್ಷಿಪ್ರವಾಗಿದ್ದರೂ ಸಾಲದೆಂಬಂತಾಗಿದೆ. ಉಪಗ್ರಹ ವಹಿವಾಟು, ದೂರದರ್ಶನ ಸೌಲಭ್ಯ ಬಳಸಿಕೊಂಡು ಕ್ಷಣಕ್ಷಣಕ್ಕೂ ಬದಲಾಗುವ ವಿಶ್ವ ಮಾರುಕಟ್ಟೆಯ ಆರ್ಥಿಕ ಸ್ಥಿತಿಗತಿಗಳ ಸ್ಪಷ್ಟ ಅರಿವು ಬ್ಯಾಂಕರನಿಗೆ ಇದ್ದಲ್ಲಿ ಅದರ ಪ್ರಯೋಜನ ಗ್ರಾಹಕನಿಗಷ್ಟೇ ಅಲ್ಲ, ಬ್ಯಾಂಕರನಿಗೂ ದೊರೆಯಲಸಾಧ್ಯ. ಯಾವಬ್ಯಾಂಕಿನಲ್ಲಿ ಈ ಅಧುನಿಕಸೌಲಭ್ಯಗಳಿವೆಯೋ ಅತ್ತಕಡೆ ಗ್ರಾಹಕ ಸರಿಯುವುದು ಸಾಮಾನ್ಯ.

ವಿವಿಧ ಯೋಜನೆಗಳು

ಪ್ರಸ್ತುತ ಸಾಮಾಜಿಕ ಅಗತ್ಯಗಳನ್ನು ಗುರುತಿಸಿ ಅವುಗಳನ್ನು ಪೂರೈಸುವ ದಿಶೆಯಲ್ಲಿ ಬ್ಯಾಂಕುಗಳು ನಡೆಸಿರುವ ಪ್ರಯತ್ನವಾದ ನವೋನ್ಮೇಷ ಬ್ಯಾಂಕಿಂಗ್‌ನಿಂದ ಗ್ರಾಹಕನನ್ನು ಆಕರ್ಷಿಸಲು ಸಾಧ್ಯ. ಯಾವ ಸಮಾಜಕ್ಕೆ ಬ್ಯಾಂಕು ಹೆಚ್ಚು ಹತ್ತಿರವಾಗಿರುವುದೋ ಆ ಸಮಾಜದಲ್ಲಿನ ಗ್ರಾಹಕರು ಬ್ಯಾಂಕನ್ನು ಗೌರವಿಸುವುದು ಸಹಜವೇ ಸರಿ. ದತ್ತು ಸ್ವೀಕರಿಸಿದ ಗ್ರಾಮಗಳ ಅಭಿವೃದ್ಧಿಗೆ ಪ್ರಯುಕ್ತಿಸುವ, ಅಂಗವಿಕಲರ, ಮಹಿಳೆಯರ, ಹಿಂದುಳಿದವರ ಕಲ್ಯಾಣಕ್ಕಾಗಿ ಶ್ರಮಿಸುವ ಯೋಜನೆಗಳನ್ನು ಹಮ್ಮಿಕೊಂಡಿರುವ ಬ್ಯಾಂಕು ಹೆಚ್ಚು ರಚನಾತ್ಮಕ ಕಾರ್ಯಗಳನ್ನು ಮಾಡಬೇಕಿದೆ.

ಬ್ಯಾಂಕಿಂಗ್ ಪ್ರಪಂಚ ತೀವ್ರಗತಿಯಲ್ಲಿ ಬೆಳೆಯುತ್ತಿದೆ. ಸೌಲಭ್ಯ ಬಯಸಿ ಬರುವ ಗ್ರಾಹಕರ ಸಂಖ್ಯೆ ದಿನದಿನಕ್ಕೂ ಹೆಚ್ಚುತ್ತಿರುವುದೇ ಇದಕ್ಕೆ ಕಾರಣ. ಕೆಲವು ವರ್ಷಗಳ ಮೊದಲಿದ್ದಂತೆ ಬ್ಯಾಂಕರ್ ತನ್ನ ಯೋಜನೆಯ ರೀತಿ ತನ್ನ ಪಾಡಿಗೆ ತಾನು ಕೆಲಸ ಮಾಡಿಕೊಂಡಿರಲು ಈಗ ಅವಕಾಶವಿಲ್ಲ. ಸರ್ಕಾರದ ಆದೇಶಾನುಸಾರ ಕಾದಿರಿಸಿದ ಕ್ಷೇತ್ರಗಳ ಅಭಿವೃದ್ಧಿಗಾಗಿ ಶ್ರಮಿಸಬೇಕಾದ ಗುರುತರ ಹೊಣೆಗಾರಿಕೆ ಇದೆ. ಅವನ ಮೇಲೆ ಸರ್ಕಾರದ ಒತ್ತಡವಿದೆ, ಸಮಾಜದ ಒತ್ತಡವಿದೆ, ರಾಜಕೀಯ ಒತ್ತಡವಿದೆ. ಕುರಿ, ಕೋಳಿ, ಎಮ್ಮೆಗಳಿಗೆ ಇಷ್ಟವಿಲ್ಲದ ಸಂದರ್ಭದಲ್ಲೂ ಸಾಲ ನೀಡಿ ವಸೂಲಾತಿಗೆ ಪರದಾಡುವ ಪರಿಸ್ಥಿತಿ ಇಲ್ಲವೆನ್ನಲಾಗದು. ಗ್ರಾಹಕರಿಗಾಗಿ ಈ ಸಾಲ ಸೌಲಭ್ಯಗಳನ್ನು ನೀಡಲೇಬೇಕಾದಾಗ, ಸವಾಲನ್ನು ಸ್ವೀಕರಿಸಿ ಸಾಲ ಕೊಡಬೇಕು. ಕೊಟ್ಟಿದ್ದು ಮರುಪಾವತಿಯಾಗುವಂತೆ ನೋಡಿಕೊಳ್ಳಬೇಕು. ಸಂಸ್ಥೆಯ ಬೆಲೆ ಹಾಗೂ ತನ್ನ ತಲೆಯನ್ನು ಒಟ್ಟಿಗೆ ಉಳಿಸಿಕೊಳ್ಳಬೇಕು. ಈ ಬಲವಂತ ಮಾಘ ಸವಾಲುಗಳನ್ನು ಸ್ವೀಕರಿಸದೆ ಹೋದಲ್ಲಿ ಗ್ರಾಹಕರ ಆಗ್ರಹಕ್ಕೆ ತುತ್ತಾಗಬೇಕಾದ ಸಂದರ್ಭಗಳೇ ಹೆಚ್ಚು.

ಗ್ರಾಹಕ ಸೇವಾ ಸಮಿತಿಗಳು

ಬ್ಯಾಂಕರನ-ಗ್ರಾಹಕನ ಸಂಬಂಧ ಸೌಹಾರ್ದಯುತವಾಗಿರಲು ಯಾವ ಸುಧಾರಣೆಗಳು ಆಗಬೇಕು ಎಂಬುದನ್ನು ವಿವೇಚಿಸಿ ಅನೇಕ ಸಮಿತಿಗಳು ತಮ್ಮ ಅಭಿಪ್ರಾಯಗಳನ್ನು ಮುಂದಿಟ್ಟಿವೆ. ಆರ್. ಕೆ. ತಲವಾರ್ ಸಮಿತಿ ಸೂಚನೆಗಳ ರೀತಿ ಪ್ರತಿ ಬ್ಯಾಂಕೂ ಒಂದು ಗ್ರಾಹಕ ಸೇವಾ ಸಮಿತಿ ರಚಿಸಬೇಕು. ವ್ಯವಸ್ಥಾಪಕ, ಎಲ್ಲ ವರ್ಗದ ನೌಕರ ಪ್ರತಿನಿಧಿಗಳು ಇರುವ ಈ ಸಮಿತಿ ತಿಂಗಳಿಗೊಮ್ಮೆ ಸಭೆ ಸೇರಿ ಗ್ರಾಹಕ ಸೇವೆಯಲ್ಲಿರಬಹುದಾದ ವಿಳಂಬ, ಅಡಚಣೆಗಳ ಬಗ್ಗೆ ಕೂಲಂಕಷ ಅಧ್ಯಯನ ನಡೆಸಿ ಲೋಪಗಳನ್ನು ಸರಿಪಡಿಸಬೇಕು. ಗ್ರಾಹಕನ ಬೇಡಿಕೆ ಬಯಕೆಗಳು ಬೇರೆಬೇರೆ ಕಾಲ ಸ್ಥಳಗಳಲ್ಲಿ ಬೇರೆ ಬೇರೆಯದ್ದಾಗಿರುತ್ತದೆ. ಹಳ್ಳಿಯವರು, ಪಟ್ಟಣದವರು, ವ್ಯಾಪಾರಸ್ಥರು, ವ್ಯವಸಾಯಿಗಳು, ಉದ್ಯಮಿಗಳು—ಹೀಗೆ ಹಲವು ಹತ್ತುವರ್ಗದ ಜನ ಬ್ಯಾಂಕಿಂದ ಪಡೆಯಬೇಕಾದ ಸೌಲಭ್ಯಗಳನ್ನು ತಮ್ಮದೇ ಆದ ರೀತಿಯಲ್ಲಿ ರೂಪಿಸಿಕೊಂಡಿರುತ್ತಾರೆ.

ಇವರ ಇಷ್ಟಕಾಮ್ಯಗಳನ್ನು ಸಿದ್ಧಿಸಿ ಕೊಡುವಲ್ಲಿ ಹಲವಾರು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮುನ್ನಡೆಯಬೇಕಾಗುತ್ತದೆ : (1) ಗ್ರಾಹಕರ ಬೇಡಿಕೆಗಳು ಹಾಗೂ ಅವರ ನಿರೀಕ್ಷೆಗಳ ವೈಖರಿ ; (2) ಬ್ಯಾಂಕರನಿಗೆ ಇರುವ ವೃತ್ತಿ ನಿಪುಣತೆ ; (3) ಬ್ಯಾಂಕಿನ ನೌಕರರನ್ನು ಈ ದಿಶೆಯಲ್ಲಿ ಕಾರ್ಯಪ್ರವೃತ್ತರನ್ನಾಗಿಸುವುದು ; (4) ಬ್ಯಾಂಕಿನ ನಿಯಮ ಕಟ್ಟಳೆಗಳ ಒಳಗೆ ನಡೆಯುವುದು.

ಪ್ರತಿಯೊಬ್ಬ ಗ್ರಾಹಕನ ವೈಯಕ್ತಿಕ ಅಭಿಲಾಷೆ ಪೂರೈಸುವಲ್ಲಿ ಬ್ಯಾಂಕಿನ ನಿಯಮಾವಳಿಗಳು ಕೆಲವೊಮ್ಮೆ ಅವಕಾಶ ಕೊಡಲು ಸಾಧ್ಯವಿಲ್ಲ. ಆದರೆ ಗ್ರಾಹಕ ಸಮುದಾಯಕ್ಕೆ ಹಿತವಾಗಬಲ್ಲ ರೀತಿಯಲ್ಲಿ ಗ್ರಾಹಕ ಸೇವೆಯನ್ನು ಉತ್ತಮಪಡಿಸುವತ್ತ ದಿಟ್ಟ ಹೆಜ್ಜೆ ಇದೀಗ ಇಡಬೇಕಿದೆ. ಗ್ರಾಹಕರ ಅಗತ್ಯಗಳನ್ನು ಗುರುತಿಸಿ ಕ್ಷಿಪ್ರಗತಿಯಲ್ಲಿ ಅದನ್ನು ಈಡೇರಿಸಬೇಕಾದ ಹೊಣೆಗಾರಿಕೆ ಬ್ಯಾಂಕುಗಳ ಮೇಲಿದೆ. ಪ್ರತಿಯೊಬ್ಬ ನೌಕರನಲ್ಲಿ ಸೇವಾ ಮನೋಭಾವ ಅರಳಿಸುವಲ್ಲಿ, ಯಾಂತ್ರೀಕರಿಸಿ ಕಾರ್ಯಗಳನ್ನು ಸುಲಭವಾಗಿಸುವಲ್ಲಿ, ಬ್ಯಾಂಕೇತರ ಚಟುವಟಿಕೆಗಳಿಂದ ಸಮಾಜಕ್ಕೆ ಹತ್ತಿರವಾಗುವಲ್ಲಿ, ವಿದೇಶಿ ವಿನಿಮಯ, ಷೇರುಗಳು ಮೊದಲಾದ ವಹಿವಾಟಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ವಿವರ ನೀಡುವಲ್ಲಿ ಬ್ಯಾಂಕು ಇನ್ನಷ್ಟು ಮತ್ತಷ್ಟು ಬೆಳೆಯಬೇಕಿದೆ.

ಇಷ್ಟಾಗಿಯೂ ಗ್ರಾಹಕ ಸೇವೆಯನ್ನು ಪರಿಪೂರ್ಣವಾಗಿ, ತೃಪ್ತಿಕರವಾಗಿ ನೀಡಬಲ್ಲ ಸ್ಥಿತಿ ತಲುಪುವುದು ಕಷ್ಟವೇ ಸರಿ. ಆದರೆ ಗ್ರಾಹಕ ಸೇವೆಯನ್ನು ಉತ್ತಮಪಡಿಸುತ್ತ ಹೋಗುವ ನಿರಂತರ ಕ್ರಮದಿಂದ ಬ್ಯಾಂಕು ಹಾಗೂ ಗ್ರಾಹಕರ ಸಂಬಂಧ ಮತ್ತಷ್ಟು ಬೆಸೆದುಕೊಂಡು, ಸ್ವಲ್ಪ ಹೆಚ್ಚಿನ ಬಡ್ಡಿ ನೀಡುವ ಬ್ಯಾಂಕೇತರ ಹಣಕಾಸು ಸಂಸ್ಥೆಯಲ್ಲಿ ಹಣ ತೊಡಗಿಸಬೇಕೆಂದಿರುವ ವ್ಯಕ್ತಿಯೂ ಬ್ಯಾಂಕಿನತ್ತ ಆಕರ್ಷಿತನಾಗುವಂತೆ ಮಾಡಲು ಸಾಧ್ಯವಿದೆ. ಆ ದಿನ ಹತ್ತಿರವಾದಲ್ಲಿ ಮಾತ್ರ ಬ್ಯಾಂಕು ತನ್ನ ಈವರೆಗಿನ ಕ್ಷಿಪ್ರ ಬೆಳವಣಿಗೆಯನ್ನು ಮುಂದೂ ಸಹ ಉಳಿಸಿಕೊಳ್ಳಬಹುದಷ್ಟೆ.



R. N. 36702/83

PRINTED BY G. H. KRISHNAMURTHY, MYSORE PRINTING AND PUBLISHING HOUSE, MYSORE-1